# *Brown And Drinched Book*

UNIVERSAL LIBRARY
OU_200350
UNIVERSAL LIBRARY

OUP—391—29-4-72—10,000.

OSMANIA UNIVERSITY LIBRARY

Call No. K 83 Accession No. K 6

Author

Title

This book should be returned on or before the date last marked below.

...ಂಹಮಾಲಾ ೧

# ಗುಲಾಬಿ ಹೂವು

(ಕಾದಂಬರೀ ಸಾಗರದಲ್ಲಿ ಪ್ರಕಾಶವಾಯಿತು)

ಸಿ. ಎಸ್. ಶಾಸ್ತ್ರಿ

BANGALORE :
VOKKALIGARA SANGHA PRESS
1935

*All Right Reserved*

ಬೆಲೆ ೮ ಆಣೆ

# ಶುದ್ಧಾಶುದ್ಧಪತ್ರ

## ವಿಜ್ಞಾಪನೆ

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| i | ೬ | ಇಲ್ಲದುದನ್ನ | ಇಲ್ಲದುದನ್ನೇ |
| | ೨೩ | ಕೋಟ್ಯಾನು | ಕೋಟ್ಯನು |
| ii | ೧ | ಸಚಿಸಿದೆ | ರಚಿಸಿದ |
| | ೮ | ತೋರುತ್ತೆ | ತೋರುತ್ತದೆ |
| | ೧೬ | ಹಿಂಗಿದ್ದರೂ | ಹೀಗಿದ್ದರೂ |
| | ೧೯ | ದುಃಖೋಪದೂರ | ದುಃಖೋಪಹತ |
| | ೨೧ | ಕಥೆಯನ್ನೂ | ಕಥೆಯನ್ನು |
| | ೨೮ | ಪೂರ್ವ ಪಕ್ಷ | ಪೂರ್ವಪಕ್ಷ |
| | ೨೯ | ಶ್ಲಾಘನೀಯವೆಂದ | ಶ್ಲಾಘನೀಯವೆಂದು |
| iii | ೨-೩ | ವಿಕ್ಷಯುಗಳನ್ನು | ವಿಷಯಗಳನ್ನು |
| | ೬ | ಮಾಧುರ | ಮಧುರ |

## ಗುಲಾಬಿಹೂವು

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| ೧ | ೧೨ | ಗುಂಡನಿನ್ನೂ | ಗಂಡನಿನ್ನೂ |
| ೨ | ೧೦ | ಬಲಗೈಯ್ಯಲ್ಲೊಂದು | ಬಲಗಯ್ಯಲ್ಲೊಂದು |
| | ೨೮ | ಇದು | ಅದು |
| ೩ | ೪ | ತೆರೆಯು.... | ತೆಗೆಯು |
| | ೨೪ | ಕೊಳ್ಳುತ್ತೀಯೆ ? | ಕೊಳ್ಳುತ್ತೀಯೋ |
| | ೨೫ | ಛಲದಿಂದ | (ಛಲದಿಂದ) |
| ೪ | ೧ | ಒಬ್ಬಳನ್ನೂ | ಒಬ್ಬಳನ್ನು |
| | ೧೩ | ಪಾಪ | ಪಾಪ ? |
| | ೧೬ | ಕೈಊರಿ.... | ಕಯ್ಯೂರಿ |
| | ೨೧ | ಕೈ ಇಟ್ಟು.... | ಕಯ್ಯಿಟ್ಟು |
| | ೨೫ | ....ದ್ದುವು | ....ದ್ದವು |
| | ,, | ಆ ಸ್ವಾದಿಸಿ.... | ಆಸ್ವಾದಿಸಿ.... |
| | ೧೨ | ಗೊತ್ತಾಗೊದಿಲ್ಲ | ಗೊತ್ತಾಗೋದಿಲ್ಲ |

| ಪುಟ | ಪಜ್ತ್ತಿ | ಅಶುದ್ಧ | ಶುದ್ಧ |
|---|---|---|---|
| ೬ | ೧೫ | ಎಂತ | ಅಂತ |
| ೭ | ೪ | ಕಂಡುದು. | ಕಂಡುದು, |
| | ೧೩ | ಕೊರಕದಂತೆ | ಕೋರಕದಂತೆ |
| | ೨೨ | ದೇವರಾಜೇ | ದೇವರಾಜ |
| | ೨೩ | ನಂಜರಾಜೇ | ನಂಜರಾಜ |
| ೮ | ೫ | ದೇವರಾಜೇ | ದೇವರಾಜ |
| | ೧೪ | ನಾಶಪಡಿಸಿದರು | ನಾಶಪಡಿಸಿತು. |
| | ೧೮ | ಕೂಡಹಾಕಿ | ಕೂಡಿಹಾಕಿ |
| | ೨೯ | ....ರಾಜೇ | ....ರಾಜ |
| ೯ | ೧೯ | ಲಕ್ಷ್ಮಿಯೆ | ಲಕ್ಷ್ಮಿಯೇ |
| ೧೦ | ೭ | ಪ್ರಾತಃಕಾಲಕ್ಕೇ | ಪ್ರಾತಃಕಾಲಕ್ಕೆ |
| | ೨೬ | ಲಕ್ಷ್ಮಿಗೂ, | ಲಕ್ಷ್ಮಿಗೂ |
| ೧೧ | ೨ | ತತ್ಪರವಾದವೆಂದರೂ | ತತ್ಪರವಾದವಾದರೂ |
| | ೮ | ಅ ಪಕ್ವವಾಗಿದ್ದಪು. | ಅಪಕ್ವವಾಗಿದ್ದವು, |
| | ೨೧ | ರುಚಿಯು | ರುಚಿಯೂ |
| | ೨೫ | ಅಕಸ್ಮಿಕವಾಗಿ | ಆಕಸ್ಮಿಕವಾಗಿ |
| ೧೨ | ೧ | ಪಡಲಲ್ಲ. | ಪಡಲಿಲ್ಲ. |
| | ೪ | (ಇ) ದ್ದುದು. ಇಬ್ಬರ | (ಇ) ದ್ದುದು ಇಬ್ಬರ |
| | ೨೧ | ಲಕ್ಷ್ಮಿಯು | ಲಕ್ಷ್ಮಿಯು |
| | ೨೫ | ಪಂಕ್ತಿಯ | ಪಜ್ತ್ತಿಯ |
| | ೭ | ಹರಟುತ್ತಾರೆ. | ಹರಟುತ್ತಾರೆ ; |
| | ೧೩ | ಮದುವೆಯುಂದರೆ | ಮದುವೆಯೆಂದರೆ |
| | ೨೦ | ಸಮರ್ಥವಮಾಡಿ | ಸಮರ್ಥನಮಾಡಿ |
| ೧ | ೭ | ಸೇಡು | ಮೇಲಿನ ಸೇಡು |
| ೫ | ೧೭ | ಹೊಳಿಯಿತು | ಹೊಳೆಯಿತು |
| | ೨೬ | ಎಂದೂ | ಎಂದು |
| ೬ | ೧೧ | ಸ್ಥಿತಿರವಾಗಿಯೂ | ಸ್ಥಿರವಾಗಿಯೂ |
| | ೧೬ | ಮುಚ್ಚಿದಳು | ಮುಚ್ಚಿದುದು. |
| ೧೭ | ೧ | ಲಕ್ಷೀ | ಲಕ್ಷ್ಮೀ |
| | ೧೧ | ಅವಸ್ಥಾನ.... | ಅವಸ್ಥಾನು.... |
| | ೧೪ | ಗುಂಡು ! | ಗುಂಡೂ ! |
| ೧೮ | ೪ | ಅಂತಲೊ ? | ಅಂತಲೋ ? |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೯ | ೭ | ಬಿಟ್ಟರು | ಬಿಟ್ಟಾರು |
| | ೧೫ | ಬೇಡವೇ ! | ಬೇಡವೇ ? |
| | ೨೨ | ಕೊಟ್ಟರು. | ತೊಟ್ಟರು, |
| ೨೦ | ೨೮ | ಕಥೆ ! | ಕಥೆ ? |
| | ೨೯ | ....ಗಿದೆಯುಲ್ಲ. | ....ಗಿದೆಯಲ್ಲ ! |
| ೨೧ | ೪ | ಕೂಡಿಸಿದ್ದೀಯೆ | ಕೂರಿಸಿದ್ದೀಯೆ |
| | ೮ | ತಿರುಕೆ.... | ತಿರಿಕೆ.... |
| ೨೨ | ೧೦ | ....ನ್ಮನ್ಮಥ ; | ....ನ್ಮನ್ಮಥ. |
| | ೧೫ | ಅಸಮಾಧಾನದೊಡದೆ | ಅಸಮಾನರೊಡನೆ |
| | ೨೦ | ಇಲ್ಲವೋ | ಇಲ್ಲವೋ ? |
| | ೨೬ | ಆಟ್ಟೆಹಾರಿಸಿ.... | ಅಟ್ಟೆಹರಸಿ.... |
| ೨೩ | ೧೨ | ಕೋಡದ | ಕೋಡಗದ |
| | ೨೪ | ಎಡಕೈಯಲ್ಲಿ | ಎಡಗಯ್ಯಲ್ಲಿ |
| | ೨೪ | ಬಲಕೈಯಲ್ಲೊಂದು | ಬಲಗಯ್ಯಲ್ಲೊಂದು |
| ೨೪ | ೩ | ಎರಡೂ | ಎರಡು |
| | ೮ | ವೈಕೈಯೆಲ್ಲಾ | ವೈಕಯ್ಯೆಲ್ಲಾ |
| | ೧೬ | ಅಂಗಲಾಚು | ಅಂಗಳಾಚು |
| | ೧೯ | ಹೆಣ್ಣಿನ | ಹೆಣ್ಣಿಗ |
| | ೨೬ | ಕಾರ್ಯವನ್ನು | ಶೌರ್ಯವನ್ನು |
| ೨೬ | ೧೦ | ಇದ್ದಾನೆ. ರಾಜ | ಇದ್ದಾನೆ. |
| | ೧೧ | ಮ್ಮಣ್ಣಿಗೆ | ರಾಜಮ್ಮಣ್ಣಿಗೆ |
| | ೨೦ | ತೋರಿಸಲಿಲ್ಲ. | ತೋರಿಸಲಿಲ್ಲ, |
| | ೨೭ | ಸುಟ್ಟೆ | ಸುಟ್ಟು |
| ೨೭ | ೧ | ತಮ್ಮನಿಗೆ | ತಮ್ಮನನ್ನು |
| | ೧೦ | ಆಳವೇ | ಅಳವೇ |
| ೨೮ | ೧೮ | ಬಂತು | ಬಂತು ? |
| | ೨೦ | ಯಾರೋ-ಶತ್ರು.... | ಯಾರೋ, ಶತ್ರು.... |
| | ೨೧ | ಗೊತ್ತೆ ಹತ್ತು.... | ಗೊತ್ತೇಹತ್ತು.... |
| | ೨೩ | ಕರ್ತೃವೇ | ಕರ್ತೃವೇ |
| ೨೯ | ೨೯ | ಕೊಯಿಸಿ.... | ಕೊಯ್ಯಿಸಿ.... |
| ೩೦ | ೨೫ | ನಿರಾಕರಿಸಿ ರಾತ್ರಿ ಅವ.... | ನಿರಾಕರಿಸಿ ಅವ.... |
| ೩೧ | ೫ | ದುರಾಗತಕೆ | ದುರಾಗತಕ್ಕೆ |

| ಪುಟ | ಪಙ್ತಿ | ಅಶುದ್ಧ | ಶುದ್ಧ |
|---|---|---|---|
| ೩೩ | ೧೩ | ಸಂದರ್ಭವೋ | ಸಂದರ್ಭವೋ ? |
| ೩೬ | ೧೨ | ಸುದಾರಿಸಿಕೊಳ | ಸುದಾರಿಸಿಕೊಳ್ಳ |
| ೩೭ | ೧೮ | ಹೋಗಿಪ್ಪೆ | ಹೋಗಿದ್ದೆ ? |
| ೪೦ | ೧೨ | ಆರ್ರೈಸುವುದು | ಆಲೈಸುವುದು |
| ೪೧ | ೧೦ | ಅವಳು ಕಾಣಲಿಲ್ಲ | ಕಾಣಲಿಲ್ಲ |
| | ೧೮ | ವನ್ನು ಹಿಡಿದೆತ್ತಿ | ಹಿಡಿದೆತ್ತಿ |
| ೪೨ | ೨೬ | ಹೊಟ್ಟೆಯಲ್ಲೇನೊ | ಹೊಟ್ಟೆಯಲ್ಲೇನೋ |
| ೪೪ | ೩ | ಕೊಡೆಬಹುದು | ಕೊಡಬಹುದು |
| | ೨೨ | ಹೂವ್ವಿನಂತೆ | ಹೂವಿನಂತೆ |
| | ೩೧ | ಭಾರಕೆ | ಭಾರಕ್ಕೆ |
| ೪೫ | ೨ | ಶೀತಲ | ಶೀತ |
| ೪೬ | ೩೧ | ಅಷು | ಅಷ್ಟು |
| ೪೭ | ೩ | ಅನಾದೃಶನಾಗಿ.... | ಅನಾದೃತನಾಗಿ.... |
| | ೧೯ | ಬೆವರಿಕ್ಕು.... | ಬೆಮರಿಕ್ಕು.... |
| | ೨೯ | ಎಡಗೈಯಿಂದ | ಎಡಗಯ್ಯಿಂದ |
| ೪೯ | ೩ | ಕಳ್ಳನಂತೆ | ಕಳ್ಳರಂತೆ |
| ೫೦ | ೧ | ....ಮಾಡಲುಳಿದವಳಲ್ಲ.... | ....ಮಾಡಲು ಹೋದವಳಲ್ಲ |
| ೫೩ | ೯ | ಆವನ್ನು | ಅವನ್ನು |
| ೫೩ | ೧೨ | ಸಂಗ್ರಹಿಸಿಟ್ಟಿದು | ಸಂಗ್ರಹಿಸಿಟ್ಟಿದ್ದು |
| ೫೬ | ೧೭ | ಏಕಭುಕ್ತವ್ರತಿ | ಏಕಭಕ್ತವ್ರತಿ |
| ೫೯ | ೨೫ | ಮೂರ್ತಿಮಯಿ.... | ಮೂರ್ತಿಮತಿ.... |
| ೬೦ | ೨ | ಶ್ರೀಮಂತನ | ಶ್ರೀಮಂತರ |
| | ೧೦ | ಹೈದರಲ್ಲಯನ್ನೂ | ಹೈದರಲ್ಲಿಯನ್ನು |
| | ೨೦ | ಬಂದರು | ಬಂದಳು |
| ೬೩ | ೨ | ತಾನು | ನಾನು |
| | ೧೬ | ದಲ್ಲಿಳಿಂುಬೇಕು | ದಲ್ಲುಳಿಯಬೇಕು |
| ೬೪ | ೨ | ಒಳಪಟ್ಟ್ವವರು | ಒಳಪಟ್ಟವರು |
| | ೧೩ | ನಾಳಿಯೋ | ನಾಳೆಯೋ |
| ೬೫ | ೩ | ಮತ್ತೆನಿನ್ನ | ನಿನ್ನ |
| ೬೬ | ೧೧ | ಹೋಗಿ | ಹಾರಿಹೋಗಿ |
| | ೨೭ | ಹಾಗೆಯೂ | ಹಾಗೆಯೇ |
| | ೨೮ | ಫಟ್ | ಛಟ್ |

# ಸಮರ್ಪಣೆ

ಕಥಾನಾಯಕನಾದ ಗುಂಡನು ಸೀತೆಗೆ ಆಟಕ್ಕಾಗಿ ಒಂದು ಗುಲಾಬಿಹೂವನ್ನು ಕೊಟ್ಟನು. ಸೀತೆಯು ತಾಯಿತಂದೆಗಳು ಹೊತ್ತು ಹೆತ್ತು ಪ್ರೇಮದಿಂದ ಬೆಳೆಸಿದ ದೊಡ್ಡ ಗುಲಾಬಿಹೂವನ್ನು ಅಳುತ್ತಾ ನೃಸಿಂಹದೇವರ ಚರಣಾರವಿಂದಕ್ಕೆ ಸಮರ್ಪಿಸಿದರು. ನಿರ್ಭಾಗ್ಯರಾದ ನಾವೂ ನಮ್ಮ ಕರುಳನ್ನು ಭಾಗಿಸಿ ಹುಟ್ಟಿ ಬೆಳೆದು ಸರ್ವರಿಗೂ ಆನಂದವನ್ನು ಮಾಡಿ ಎಲ್ಲರಿಂದಲೂ ಹೊಗಳಿಸಿಕೊಂಡು ಉಭಯಕುಲದೀಪಕವಾಗಿದ್ದ ಲಲಿತನೆಂದರೆ ನಿಜವಾಗಿಯೂ ಲಲಿತಮನೋಜ್ಞವಾದ ಲಕ್ಷ್ಮಿಯಂಥಾ ದೊಡ್ಡ ಗುಲಾಬಿಹೂವನ್ನು ಆ ದೇವದೇವನ ಚರಣಕಮಲಕ್ಕೆ ಸಮರ್ಪಿಸಿ ಇನ್ನೂ ವರ್ಷವಿಲ್ಲ. ಅದರ ಸ್ಮಾರಕಾರ್ಥವಾಗಿ ಅಜ್ಞನಾದ ನಾನು ಕೃತಕವಾಗಿ ರಚಿಸಿರುವೀ ಅಲ್ಪವಾದ ಗುಲಾಬಿ ಹೂವನ್ನು ಆ ಪರದೈವದ ಚರಣಾರವಿಂದದಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದೇನೆ. ಸ್ವಾಮಿಯ ಅಶೋಷ್ಯ ಮಹಿಮೆಯಿಂದ ಅವನ ದಿವ್ಯ ಪಾದದಲ್ಲಿ ಬಿದ್ದ ಈ ಹೂವೂ ಒಣಗದಂತೆ ಚಿರಕಾಲ ವಿಕಸಿತವಾಗಿರಲಿ.

ಭಕ್ತ,

**ಸಿ. ಎಸ್. ಶಾಸ್ತ್ರಿ.**

# ವಿಜ್ಞಾಪನೆ

ನಮ್ಮ ಸಮಾಜದ ಪರಿಸ್ಥಿತಿಯನ್ನೂ ಪ್ರಾಪಂಚಿಕವಾದ ಸುಖ ದುಃಖಗಳ ಪರಿಯನ್ನೂ ತೋರಿಸಬೇಕೆಂದು ಯಥಾಮತಿಯಾಗಿ ಈ ಕಥೆಯನ್ನು ಕಲ್ಪಿಸಿ ಬರೆದಿದ್ದೇನೆ. ಆ ಕಾಲವನ್ನೂ, ಸಂದರ್ಭವನ್ನೂ, ತೋರಿಸುವುದಕ್ಕಾಗಿ ಇತಿಹಾಸದಿಂದ ಕೆಲವು ವಿಷಯಗಳನ್ನು ಸಂಗ್ರಹಿಸಿ ಅಲ್ಲಲ್ಲಿ ಜೋಡಿಸಿದೆ. ಅಷ್ಟುಹೊರತೂ ಉಳಿದ ಕಥೆಯೂ ಕಥೆಯ ಪಾತ್ರಗಳೂ ಎಲ್ಲವೂ ನಿಜವಾದುವಲ್ಲ. ಯಾವುದೋ ವಸ್ತುವನ್ನೂ ಪಾತ್ರವನ್ನೂ ಧ್ಯೇಯವಾಗಿಟ್ಟುಕೊಂಡು ಪ್ರಕಾರಾಂತರವಾಗಿ ಬರೆದುದಲ್ಲ. ರಚನೆಯೆಂದರೆ ಇಲ್ಲದುದನ್ನೆ ಹೇಳಿದರೂ ಇದ್ದ ಹಾಗೆಯೇ ಮಾಡಿ ಹೇಳಬೇಕಷ್ಟೆ. ಅಲ್ಲಾವುದ್ದೀನನ ಅದ್ಭುತ ದೀಪದಂಥಾ ಕಥೆಯೂ ಅಲ್ಲ. ದೇವಾಸುರರ ಯುದ್ಧದಂಥಾ ಕಥೆಯೂ ಅಲ್ಲ. ಯೂಸಪ್ಪಿನ ಕೃತಕ ಕಥೆಯಂಥಾ ಕಥೆಯೂ ಅಲ್ಲ. ಕಲ್ಪನೆಯನ್ನೇ ಮಾಡಿದರೂ ಲೋಕದಲ್ಲಿ ನಡೆಯುವಂಥಾ ವಿಷಯಗಳನ್ನೇ ಸಂಗ್ರಹಿಸಿ ಜೋಡಿಸಿ ಬರೆದಿರುವುದರಿಂದ ಅನಂತವಾದೀ ಸೃಷ್ಟಿಯಲ್ಲಿ ನಾಮಸಾದೃಶ್ಯದಿಂದಾಗಲೀ ವಸ್ತುಸಾದೃಶ್ಯದಿಂದಾಗಲೀ ಈ ಕಥೆಯು ವ್ಯಸ್ತವಾಗಿಯೋ ಸಮಸ್ತವಾಗಿಯೋ ಯಾರಿಗಾದರೂ ಯಾವುದಕ್ಕಾದರೂ ಅನ್ವಯಿಸಿದರೆ ಅದು ಕೇವಲ ಘುಣಾಕ್ಷರನ್ಯಾಯದಂತೆ ಸಂಘಟಿತವಾಗಬೇಕೇಹೊರತು ಅನ್ಯಥಾ ಇಲ್ಲ. ಈ ವಿಷಯದಲ್ಲಿ ಯಾರೂ ಸಂದೇಹಪಡಬೇಕಾದುದಿಲ್ಲ.

ಸಾಮಾಜಿಕ ಪರಿಸ್ಥಿತಿಯನ್ನು ತೋರಿಸುವುದಕ್ಕೆ ಬರೆದುದೆಂದರೆ ಸಮಾಜದಲ್ಲಿ ಸರ್ವದಾ ಈ ರೀತಿಯೇ ನಡೆಯುವುದೆಂದರ್ಥವಲ್ಲ. ನಿತ್ಯವೂ ನಡೆಯುವ ವಿಷಯವು ನಿಜವಾಗಿಯೂ ನೀರಸವಾದುದು. ಅದನ್ನು ಹೇಳುವುದೇನು? ಹೇಳಿದರೆ ಕೇಳುವರಾರು? ಆಗಾಗ ಅಲ್ಲಲ್ಲಿ ಅಪೂರ್ವವಾಗಿ ನಡೆಯುವಂಥಾ ವಿಷಯಗಳನ್ನೂ ಸಂಧಿಗಳನ್ನೂ ವಸ್ತುವಾಗಿಯೂ, ಧೀರಲಕ್ಷಣ ಲಕ್ಷಿತವಾದ ವ್ಯಕ್ತಿ ವಿಶೇಷಗಳನ್ನು ಪಾತ್ರಗಳಾಗಿಯೂ ಸೇರಿಸಿ ಕಥೆಯನ್ನು ಬರೆದರೆ ಶ್ರಾವ್ಯವಾಗಿಯೂ ಸ್ವಾರಸ್ಯವಾಗಿಯೂ ತಕ್ಕಮಟ್ಟಿಗಾದರೂ ಬುದ್ಧಿಪ್ರದವಾಗಿಯೂ ಇರುತ್ತದೆ. ಪ್ರಬಲವಾದ ಪ್ರವಾಹದ ಹೊಡತಕ್ಕೆ ತಲೆಯನ್ನು ತಗ್ಗಿಸಿ ಇದ್ದ ಕಡೆಯೇ ಇರುವ ಕೋಟ್ಯಾನುಕೋಟಿ ಜೊಂಡುಗಳ ಸ್ಥಿತಿಯು ಯಾರಿಗೂ ಬೇಕಾಗುವುದಿಲ್ಲ. ಪ್ರವಾಹಕ್ಕೆ ಪ್ರತಿಭಟಿಸಿ ಬಿದ್ದುಹೋದರೂ ಸರಿ ಅದನ್ನು ಪ್ರತಿಭಟಿಸಿ ಪ್ರವಾಹದೊಡನೆ ಹೋರಾಡುವ ವನಸ್ಪತಿಯ ಹೋರಾಟವು ಜನರ ಹೃದಯವನ್ನು ಆಕರ್ಷಿಸುವುದು. ಆದುದರಿಂದ ಸ್ವಲ್ಪ ಅಪೂರ್ವವಾದರೂ ಸರಿ, ಧೀರಾದಿ ಲಕ್ಷಣ ಲಕ್ಷಿತವಾದ ಪಾತ್ರಗಳನ್ನೂ

ಅವರ ಅಸಾಧಾರಣವಾದ ಸಾಹಸವನ್ನೂ ಅಧಿಕರಿಸಿ ಕಥೆಯನ್ನು ಸಚಿಸಿದೆ. ಅಪೂರ್ವ ವಾದರೂ ಇದೂ ಸಾಮಾಜಿಕ ಪರಿಸ್ಥಿತಿಯೇ. ಒಂದು ವಿಧವಲ್ಲಿ ನೋಡಿದರೆ ಸಮಾಜದ ನಿಯಮಾದಿಗಳ ಗುಣಾವಗುಣಗಳು ಇಂಥಾ ಸಂದರ್ಭದಲ್ಲಿಯೇ ಪ್ರಕಾ ಶಕ್ಕೆ ಬರುವುದು.

ಸುಖಾಂತವಾದ ಕಥೆಯನ್ನೇ ಬರೆವುದು ಶಿಷ್ಟಸಂಪ್ರದಾಯವೆಂದೊಂದು ಪ್ರತೀತಿಯಿದೆಯಷ್ಟೆ. ರಾಮಾಯಣ, ಮಹಾಭಾರತ ಇತ್ಯಾದಿ ಲೋಕ ಪ್ರಸಿದ್ಧವಾದ ಇತಿಹಾಸವನ್ನು ನೋಡಿದರೆ ದುಃಖಾಂತವನ್ನೂ ಮಹಾ ಕವಿಗಳೇ ಬರೆದಿರುವುದರಿಂದ ದೋಷವಿಲ್ಲವೆಂದೂ ತೋರುತ್ತೆ. ಈ ಸಂಪ್ರದಾಯವೇನು ಅಂಥಾ ಅಪ್ರತಿಷೇಧ ವಾದುದೂ ಅಲ್ಲ. ಅನಿರ್ಲಂಘ್ಯವಾದ ನಿಯಮವೂ ಅಲ್ಲ. ಇಷ್ಟಕ್ಕೂ ಸುಖ ದುಃಖವೆಂಬುದೇನೂ ಜಾತಿವಾಚಕವಲ್ಲ. ಇತರೇತರ ಸಂಬಂಧ ಸೂಚಕವಾದ ಪದಗಳು. ಸುಖವೆಂದರೆ ದುಃಖಾಪೇಕ್ಷೆಯಿಂದ ಸುಖ. ದುಃಖವೆಂದರೆ ಸುಖಾ ಪೇಕ್ಷೆಯಿಂದ ದುಃಖ. ಹೆಚ್ಚು ಸುಖಿಯಾದವನಿಗೆ ಯಾವುದು ದುಃಖವೊ ಅದೇ ಹೆಚ್ಚುದುಃಖಿಯಾದವನಿಗೆ ಸುಖ. ಸುಕುಮಾರರಾಗಿ ಬೆಳೆದವರಿಗೆ ಬಿಸಿಲಿನತಾಪವು ದುಃಖವಾಗಿ ಕಾಣುವುದು. ಅದೇ ಬಿಸಿಲು ಛಳಿಯಿಂದ ನಡುಗುವವರಿಗೆ ಹಿತ ವಾಗಿರುವುದು. ಆದುದರಿಂದ ಬದುಕಿರುವುದು ಹೆಚ್ಚು ದುಃಖಕ್ಕೆ ಕಾರಣವಾದರೆ ಸಾಯುವುದು ನಿಜವಾಗಿಯೂ ದುಃಖವಲ್ಲ. ಹಿಂಗಿದ್ದರೂ ನಾವೂ ಲೋಕರೀತಿ ಯಲ್ಲಿ ದುಃಖವನ್ನು ದುಃಖವೆಂದೇ ಎಣಿಸಿದ್ದೇವೆ. ಬಹುಶಃ ಸರ್ವದಾ ದುಃಖದಲ್ಲಿ ನರಳುವ ಸುಖಲೇಶ ಹೀನರಾದ ನಮ್ಮ ಸಮಾಜದವರಿಗೆ ಸ್ವಾನುಭವದಲ್ಲಿಲ್ಲದಿದ್ದರೆ ಕೆಟ್ಟಿತು, ಕಥೆಯಲ್ಲಾದರೂ ಸುಖವನ್ನು ಕಂಡು ಕೇಳಿ ದುಃಖೋಪದೂರವಾದ ಮನಸ್ಸನ್ನು ತಾವತ್ಕಾಲಪರ್ಯಂತವಾದರೂ ಸಮಾಧಾನ ಪಡಿಸೋಣವೆಂದು ಅಭಿಪ್ರಾಯ ವಿರಬಹುದು. ಆದರೂ ಈ ಕಥೆಯನ್ನೂ ದುಃಖಾಂತಮಾಡಿದರೇ ರಚನೆಯೆಂದು ತಿಳಿದು ಹಾಗೆಯೇ ಮಾಡಬೇಕಾಗಿ ಬಂತು. ಸುಖಾಂತ ಮಾಡು ಎಂದರೆ ಹೇಗೆ ಮಾಡುವುದು? ಪ್ರಾಪಂಚಿಕವಾದ ದುಃಖವನ್ನು ಇನ್ನೂ ಹೆಚ್ಚಿಸ ಬೇಕಾಗಿತ್ತು. ಹಾಗೆ ಮಾಡಿದರೇನು ಸುಖಾಂತವಾಗುತ್ತಿತ್ತೇ?

ವಿವಾಹ ನಿಯಮ ವಿಷಯದಲ್ಲಿ ಸಂದರ್ಭಾನುಸಾರ ಮಾಡಿರುವ ಆಕ್ಷೇಪ ವೇನೂ ಸಿದ್ಧಾಂತವಲ್ಲ. ಆ ಆಕ್ಷೇಪವೇ ಸರಿ, ಹಾಗೆಯೇ ಎಲ್ಲರೂ ನಡೆಯಬೇಕೆಂತಲ್ಲ. ಪ್ರಬಲವಾದ ಕಾರಣಗಳಿಂದ ಚಿತ್ತವು ಕೇವಲ ಉದ್ವೇಜಿತವಾಗಿ ನಿಯಮವನ್ನು ವಿಶೇ ಷವಾಗಿ ಆಕ್ಷೇಪಿಸಿರುವುದು ಅಷ್ಟು ಪೂರ್ವ ಪಕ್ಷ, ಅಷ್ಟು ನಿಂದೆ, ಅಷ್ಟು ದೂಷಣೆ. ಒಂದು ಸಂದರ್ಭದಲ್ಲಿ ಪಶು ವೃತ್ತಿಯನ್ನು ನೋಡಿ ಅದೇ ಶ್ಲಾಘನೀಯವೆಂದ ಹಾಗೆಯೇ ಆಕ್ಷೇಪ ಮಾಡಿಸಿದೆ. ಹಾಗೆ ಆಕ್ಷೇಪ ಮಾಡಿದ ಪಾತ್ರವೇ ಅಂಥಾ ಪಶು ವೃತ್ತಿಯನ್ನು ಕಾರ್ಯದಲ್ಲಿ ಅನುಮೋದಿಸಲಿಲ್ಲ. ಪ್ರೇಮಾಂಧರಾಗಿ ವಿವಾಹ ನಿಯ

ಮಕ್ಕೆ ವಿರುದ್ಧವಾಗಿ ನಡೆಯುವುದು ಯುಕ್ತವಲ್ಲವೆಂದು ಉತ್ತರ ಕ್ಷಣದಲ್ಲಿಯೇ ವ್ಯಕ್ತ ಮಾಡಿದೆ. ಆದುದರಿಂದ ಆಯಾ ಸಂದರ್ಭಾನುಸಾರವಾಗಿ ಹೇಳಿರುವ ವಿಕ್ಷ್ಯಯಗಳನ್ನು ಸಿದ್ಧಾಂತವೆಂದು ಭಾವಿಸಿ ದೋಷದಲ್ಲಿ ಗಣಿಸ ಬಾರದೆಂದು ಕೋರಿಕೆ.

ಹೃದ್ಗತವಾದ ಪ್ರೇಮಕ್ಕೆ ಪರವಶವಾಗಿ ಉನ್ಮಾದಕವಾದ ಪ್ರಕೃತಿಯ ಪ್ರಭಾವದಿಂದ ಉತ್ತೇಜನವನ್ನು ಹೊಂದಿ ಪರ ಪತ್ನಿಯು ಪರ ಪುರುಷನ ವಿಷಯದಲ್ಲಿ ಯಾವುದೋ ಸಂದರ್ಭದಲ್ಲಿ ತೋರಿಸುವ ಮಾಧುರ ಪ್ರವೃತ್ತಿಯು ತಾವತ್ಕಾಲಿಕವಾದ ಪ್ರಕೃತಿಯ ಪ್ರಬಲ ಪ್ರಕೋಪವೇ ಹೊರತು ಅನ್ಯಥಾ ಅಲ್ಲ. ಈ ವಿಷಯದಲ್ಲಿ ಕೆಲವು ವಿದ್ವನ್ಮಿತ್ರರು ಇನ್ನೂ ಅಷ್ಟು ಮುಂದುವರಿಸಿ ಆ ಮೇಲೆ ಯಥಾ ಸ್ಥಾನಕ್ಕೆ ತಂದಿದ್ದರೆ ಮತ್ತಷ್ಟು ಸ್ವಾರಸ್ಯವಾಗಿರುತ್ತಿತ್ತಲ್ಲದೆ ನೈಜವಾಗಿಯೂ ಕಾಣುತ್ತಿತ್ತು ಎಂದು ಅಭಿಪ್ರಾಯ ಪಟ್ಟರು. ಇಷ್ಟಕ್ಕೇ ತಡೆದು ಹಿಂತಿರುಗಿಸುವುದು ದುಸ್ತರವಾಯಿತು. ಇನ್ನು ಮುಂದುವರಿದಿದ್ದರೆ ಹಿಂತಿರುಗಿಸುವುದು ಸಾಮಾನ್ಯವಾಗಿ ಆಗುತ್ತಿರಲಿಲ್ಲ. ಆಗ ಏನೆಂದರೂ ಅದು ನೈಜವಾಗಿ ಕಾಣುತ್ತಲೂ ಇರಲಿಲ್ಲ. ಇದೇ ವಿಷಯದಲ್ಲಿ ಇಂಥಾದ್ದು ಸಂಭವವೇ ಎಂದರೆ, ಏತಕ್ಕಲ್ಲ ? ದುರ್ಬಲ ಚಿತ್ತರು ಚಿತ್ತವೃತ್ತಿಗಧೀನರಾಗಿ ಪಾಪ ಕರ್ದಮದಲ್ಲಿ ಬಿದ್ದೇ ಹೋಗುತ್ತಾರೆ. ಚಿತ್ತ ಸ್ಥೈರ್ಯದವರು ಇಂಥಾ ಚಾಪಲ್ಯಕ್ಕೆ ಹೋಗುವದೂ ಇಲ್ಲ. ಅಥವಾ ಪ್ರಕೃತಿಯ ಪ್ರಕೋಪದಿಂದ ಚಿತ್ತ ವೃತ್ತಿಯು ಚಂಚಲವಾದರೂ ಕೂಡಲೇ ಅದನ್ನು ದಮನ ಮಾಡುತ್ತಾರೆ. ಈ ವಿಷಯದಲ್ಲಿ ಪರಿಣಾಮವು ಅವರವರ ಆತ್ಮಶಕ್ತಿಗನುಸಾರವಾಗಿಯೂ ಸಂಸ್ಕಾರಾನುಗುಣವಾಗಿಯೂ ಆಗುತ್ತದೆ. ಅದಕ್ಕೆ ಅವರವರೇ ಪ್ರಮಾಣವೇ ಹೊರತು ಒಬ್ಬರು ಮಾಡಿದಂತೆ ಮತ್ತೊಬ್ಬರು ಮಾಡಬೇಕೆಂದರೆ ಅದು ನಡೆಯತಕ್ಕುದಲ್ಲ.

ವಿಜ್ಞರಿಗೊಂದು ವಿಶೇಷ ವಿಜ್ಞಾಪನೆ. ಈ ಕಥೆಯಲ್ಲಿ ಗುಣಲೇಶವೇನಾದರೂ ಇದ್ದರೆ ಅದು ತಮಗೆ ನಿವೇದನ. ದೋಷವೇನಾದರೂ ಇದ್ದರೆ ಅದನ್ನು ನಮ್ಮ ತಲೆಯ ಮೇಲೆಯೇ ಹಾಕಬಹುದು, ಅಥವಾ ಉದಾರ ಭಾವದಿಂದ ಕ್ಷಮಿಸಿ ಅನುಗ್ರಹಿಸಬಹುದು.

ಈ ಕಥೆಯನ್ನು ಬರೆಯುವಾಗ ರಚನೆಯ ವಿಷಯದಲ್ಲಿ ನನಗೆ ಕೆಲವು ಒಳ್ಳೆಯ ಮಾತುಗಳನ್ನು ಹೇಳಿಕೊಟ್ಟುದಕ್ಕಾಗಿ ಆ ವಿದ್ವನ್ಮಿತ್ರರಿಗೆ ಕೇವಲ ಕೃತಜ್ಞನಾಗಿದ್ದೇನೆ.

ಶ್ರೀಮುಖ ಸಂ|| ಫಾಲ್ಗು-ಶು ೫.

ಇತಿ ಸಜ್ಜನ ವಿಧೇಯ,

**ಸಿ. ಎಸ್. ಶಾಸ್ತ್ರಿ.**

ನೃಸಿಂಹಮಾಲಾ ೧

# ಗುಲಾಬಿಹೂವು

## ೧ನೆಯ ಭಾಗ

ಸೀತೆಯ ಹೂವಿನ ಬುಟ್ಟಿಯು ತುಂಬಿಹೋಯಿತು. ಲಕ್ಷ್ಮಿಯ ಬುಟ್ಟಿಯಲ್ಲಿ ಕಾಲುಪಾಲುಸಹ ಆಗಲಿಲ್ಲ.

ಸೀತೆ – ಲಕ್ಷ್ಮೀ! ಏನು ನೋಡುತ್ತಾ ನಿಂತುಕೊಂಡೆಯೇ ? ಹೂವೇ ಕೊಯ್ಯಲಿಲ್ಲವಲ್ಲೇ ಈಹೊತ್ತು !

ಲಕ್ಷ್ಮಿ – (ತಾನು ನೋಡುತ್ತಿದ್ದ ಕಡೆಯೇ ನೋಡುತ್ತಾ) ಯಾಕೋ ಗುಂಡ ನಿನ್ನೂ ಬರಲಿಲ್ಲವಲ್ಲೇ !

ಗುಂಡನು ಬೇಗ ಬರುತ್ತೇನೆಂದು ಹೇಳಿ ಹೋದವನು ಬಹಳ ಹೊತ್ತಾದರೂ ಬರಲಿಲ್ಲ. ಲಕ್ಷ್ಮಿಗೆ ಗುಂಡನು ಯಾತಕ್ಕೆ ಬರಲಿಲ್ಲವೋ ಎಂದು ಅದೇ ಚಿಂತೆಯಾಗಿತ್ತು. ಅವನ ದಾರಿಯನ್ನೇ ನೋಡುತ್ತಾ ನಿಂತುಕೊಂಡುಬಿಟ್ಟಳು. ಹೂವು ಕೊಯ್ಯಲಿಲ್ಲ. ಸೀತೆಯು ಕೇಳಿದಾಗ ಇವಳ ಉತ್ಕಂಠತೆಯು ಹೆಚ್ಚಾಯಿತು ; ಮುಖ ವಿವರ್ಣವಾಯಿತು ; ಧ್ವನಿಯು ಕಂಪಯುಕ್ತವಾಯಿತು ; ಮಾತು ಸ್ಪಷ್ಟವಾಗಿ ಹೊರಡಲಿಲ್ಲ. “ಯಾಕೋ ಗುಂಡನಿನ್ನೂ ಬರಲಿಲ್ಲವಲ್ಲೇ” ಎಂದಂತೆ ಸೀತೆಗೆ ಕೇಳಿಸಿತು. ಸೀತೆಯದು ಸ್ವಲ್ಪ ಅಸೂಯೆಯ ಪ್ರಕೃತಿ. ಆ ಮಾತು ಕೇಳಿ ಸೀತೆಗೆ ಲಕ್ಷ್ಮಿಯಮೇಲೆ ಸ್ವಲ್ಪ ಅಸಂತುಷ್ಟಿಯಾಯಿತು.

ಸೀತೆ—ಲಕ್ಷ್ಮೀ! ನೀನು ಗುಂಡನನ್ನೇ ಮದುವೆ ಮಾಡಿಕೊಳ್ಳುತ್ತೀಯೇನೇ ಹಾಗಾದರೆ ?

ಲಕ್ಷ್ಮಿ—(ನೋಡುತ್ತಿದ್ದ ಕಡೆಯೇ ನೋಡುತ್ತಾ) ಅವನು ಮಾಡಿಕೊಂಡರೆ ಮಾಡೇಮಾಡಿಕೊಳ್ಳುತ್ತೇನೆ.

ಸೀತೆ—ಅವನು ಒಲ್ಲೆನೆಂದರೆ ?

ಲಕ್ಷ್ಮಿ—ಅಳುತ್ತೇನೆ.

ಈ ಮಾತುಗಳನ್ನಾಡುತ್ತಾ ಲಕ್ಷ್ಮಿಯ ವಿಶಾಲವಾದ ನೇತ್ರಗಳಲ್ಲಿ ನೀರು ಬಂದೇಬಂತು. ಸೀತೆಗೆ ಮತ್ತಷ್ಟು ಅಸೂಯೆಯಾಯಿತು.

ಸೀತೆ—ಇಷ್ಟಕ್ಕೂ ನಾನು ಬಿಟ್ಟರಲ್ಲವೇ ನೀನು ಮಾಡಿಕೊಳ್ಳುವದು ?

ಲಕ್ಷ್ಮಿ—ನೀನೂ ಮಾಡಿಕೋ, ನಾನೂ ಮಾಡಿಕೊಳ್ಳುತ್ತೇನೆ.

ಸೀತೆಗೆ ಈ ಮಾತು ರುಚಿಸಲಿಲ್ಲ. ಕೋಪವೇ ಬಂತು.

ಸೀತೆ—ಲಕ್ಷ್ಮೀ! ನೀನು ಹೀಗೆಲ್ಲಾ ಆಡಿದೆಯೋ ನೋಡಿಕೋ. ಅಪ್ಪಾಜಿಗೆ ಹೇಳಿ ನಿಮ್ಮನ್ನೆಲ್ಲಾ ಮನೆಬಿಟ್ಟು ಆಚೆಗೆ ದಾಟಿಸಿಬಿಡುತ್ತೇನೆ.

ಅಷ್ಟರಲ್ಲಿ ಗುಂಡನು ದೂರದಲ್ಲಿ ಬರುತ್ತಿದ್ದುದು ಕಾಣಿಸಿತು. ಲಕ್ಷ್ಮಿಯು ಅವನ ಹತ್ತಿರಕ್ಕೆ ಓಡಿದಳು. ಸೀತೆಯೂ ಹಿಂದೆಯೇ ಹೋದಳು. ಗುಂಡನ ಬಲಗೈಯ್ಯಲ್ಲೊಂದು ಸೊಗಸಾದ ಗುಲಾಬಿಹೂವು ಇತ್ತು ; ಎಡಗಾಲಿನಲ್ಲಿ ಕುಂಟುತ್ತಿದ್ದನು. ಸೀತೆಯ ಕಣ್ಣು ಗುಲಾಬಿಹೂವಿನಮೇಲೂ, ಲಕ್ಷ್ಮಿಯ ಕಣ್ಣು ಕುಂಟುತ್ತಿದ್ದ ಕಾಲಿನಮೇಲೂ ಬಿತ್ತು

ಸೀತೆ—ಈ ಗುಲಾಬಿಹೂವು ಎಷ್ಟು ಸುಂದರವಾಗಿದೆ. ಎಲ್ಲಿ ಸಿಕ್ಕಿತೋ ಗುಂಡ?

ಲಕ್ಷ್ಮಿ—ಏತಕ್ಕೆ ಕುಂಟುತ್ತೀಯಪ್ಪ, ನಿನ್ನ ಕಾಲೇನಾಯಿತು ?

ಗುಂಡ—ಈ ಹೂವನ್ನು ಕೊಯ್ಯಲು ಗಿಡದ ಹತ್ತಿರಕ್ಕೆ ಹೋದೆ. ಕಾಲಿಗೆ ಮುಳ್ಳು ಚುಚ್ಚಿಕೊಂಡಿತು.

ಲಕ್ಷ್ಮಿ—ಅಯ್ಯೋ, ಈ ಹಾಳಹೂವಿಗೆ ಯಾತಕ್ಕೆ ಹೋದೆಯಪ್ಪಾ ? (ಕೂತುಕೊಂಡು ಗುಂಡನ ಕಾಲನ್ನು ನೋಡಿ) ಮುಳ್ಳು ಬಲವಾಗಿ ಚುಚ್ಚಿಕೊಂಡಿದೆಯೇ ? ಸ್ವಲ್ಪ ಕೂತುಕೋ. ಮುಳ್ಳನ್ನು ತೆಗೆದುಹಾಕುತ್ತೇನೆ.

ಗುಂಡನು ಅಲ್ಲಿಯೇ ಹುಲ್ಲೆಸಳಿನಮೇಲೆ ಕುಳಿತುಕೊಂಡು ಎಡಗಾಲನ್ನು ಚಾಚಿದನು. ಲಕ್ಷ್ಮಿಯು ನೋಡಿದಳು. ಚೆನ್ನಾಗಿ ಕಾಣಲಿಲ್ಲ. ಹತ್ತಿರದಲ್ಲಿದ್ದ ಜಲಾಶಯಕ್ಕೆ ಹೋಗಿ ಕಮಲಪತ್ರದಲ್ಲಿ ನೀರು ತಂದು ಅಂಗಾಲನ್ನು ತೊಳೆದಳು ಮುಳ್ಳು ಕಂಡಿತು. ಹಾಗೆಯೇ ಕಯ್ಯಿಂದ ತೆಗೆಯುವುದಕ್ಕಾಗಲಿಲ್ಲ. ಲಕ್ಷ್ಮಿಯು ಓಡಿಹೋಗಿ ಬೇಲಿಗೆ ಕಟ್ಟಿದ್ದ ಬಿದಿರುಸೀಬಿನಲ್ಲೊಂದು ಮುಳ್ಳನ್ನು ಮುರಿದುಕೊಂಡು ಬೇಗ ಹಿಂತಿರುಗಿದಳು. ಅವಳುಟ್ಟಿದ್ದ ಪರಕಾರವು ಬೇಲಿಗೆ ಸಿಕ್ಕಿ ಹರಿದು ಹೋಯಿತು. ಶ್ರೀಮಂತರಿಗೆ ಹಳೆಯ ಬಟ್ಟೆಯು ಹರಿಯುವುದು ಅಹೋಭಾಗ್ಯ. ಹಳೆಯದು ಹೋದರೆ ಹೊಸದು ಬರುವುದು. ಬಡ ಹುಡುಗರು ಬಟ್ಟೆಯನ್ನು ಹರಿದುಕೊಂಡರೆ ಅದು ಅವರ ದವಡೆಗೆ ಮೂಲ. ಇದು ದಾರಿದ್ರ್ಯದ ಮಹಿಮೆ

ಲಕ್ಷ್ಮಿಗೆ ಮುಂದಾಗುವುದು ಗೊತ್ತಾಯಿತು. ಆದರೂ ಗುಂಡನಿಗೋಸ್ಕರ ತನಗೇ ನಾದರೂ ಆಗಲಿ ಎಂದುಕೊಂಡು ಗುಂಡನ ಹತ್ತಿರಕ್ಕೆ ಓಡಿಬಂದು ಅವನ ಕಾಲನ್ನು ತನ್ನ ಮುಂಡಿಯ ಮೇಲಿಟ್ಟುಕೊಂಡು ಬಿದಿರುಮುಳ್ಳಿನಿಂದ ಕಾಲಿಗೆ ಚುಚ್ಚಿ ಕೊಂಡಿದ್ದ ಮುಳ್ಳನ್ನು ಉಪಾಯವಾಗಿ ತೆರೆಯಲಾರಂಭಿಸಿದಳು. ಹಾಳು ಮುಳ್ಳು ಎಷ್ಟು ನಿಧಾನವಾಗಿ ತೆಗೆದರೂ ಬಾಧೆಯನ್ನು ಮಾಡಿಯೇಮಾಡಿತು. ಗುಂಡನು "ಹಾ" ಎಂದನು. ಅಷ್ಟಕ್ಕೆ ಲಕ್ಷ್ಮಿಗೆ ತಡೆಯಲಿಲ್ಲ. ಸುಮ್ಮನೆ ನೋಡುತ್ತಾ ನಿಂತಿದ್ದ ಸೀತೆಗೆ ಹೇಳಿದಳು.

ಲಕ್ಷ್ಮಿ—ಸೀತೆ! ಗುಂಡನ ತಲೆಯ ಹತ್ತಿರ ಸ್ವಲ್ಪ ಕೂತುಕೊಳ್ಳಮ್ಮ. ಅವನ ತಲೆಯನ್ನು ನಿನ್ನ ತೊಡೆಯಮೇಲಿಟ್ಟುಕೋ; ಏನಾದರೂ ಮಾತನಾಡಿಸುತ್ತಿರು. ಈ ಕಡೆ ಜ್ಞಾನ ಮಾಡಿಸಬೇಡ. ಮುಳ್ಳನ್ನು ತೆಗೆದು ಹಾಕುತ್ತೇನೆ.

ಸೀತೆಯು ಪದ್ಮಾಸನವನ್ನು ಹಾಕಿಕೊಂಡು ಕುಳಿತು, ಗುಂಡನ ತಲೆಯನ್ನು ತೊಡೆಯಮೇಲಿಟ್ಟುಕೊಂಡಳು. ಲಕ್ಷ್ಮಿಯು ಮತ್ತೆ ಮುಳ್ಳನ್ನು ತೆಗೆಯಲಾರಂಭಿಸಿದಳು.

ಸೀತೆ—(ಮಂದಹಾಸ ಮಾಡುತ್ತಾ) ಗುಂಡ! ನಾನೊಂದು ಮಾತು ಕೇಳುತ್ತೇನೆ, ನಿಜ ಹೇಳಬೇಕು.

ಗುಂಡ—ಕೇಳು.

ಸೀತೆ—ನಾನು ಚೆನ್ನಾಗಿದ್ದೇನೆಯೋ, ಲಕ್ಷ್ಮಿಚೆನ್ನಾಗಿದ್ದಾಳೆಯೋ ಗುಂಡ?

ಗುಂಡ—ಸೀತೆ! ನಿನ್ನ ಬಣ್ಣ ಚೆನ್ನಾಗಿದೆ, ಲಕ್ಷ್ಮಿಯ ಕಣ್ಣು ಚೆನ್ನಾಗಿದೆ.

ಸೀತೆ—ನಮ್ಮಿಬ್ಬರಲ್ಲಿ ಯಾರು ಹೆಚ್ಚು?

ಗುಂಡ—ನಿನಗೆ ಹಣ ಹೆಚ್ಚು, ಅವಳಿಗೆ ಗುಣ ಹೆಚ್ಚು.

ಸೀತೆ—ಯಾರು ಒಳ್ಳೆಯವರು ಹೇಳಪ್ಪಾ ಅಂದರೆ.

ಗುಂಡ—ನಿನ್ನ ದಯ ಒಳ್ಳೆಯದು, ಅವಳ ಹೃದಯ ಒಳ್ಳೆಯದು.

ಸೀತೆ—ಅಯ್ಯೋ ಹೋಗಪ್ಪ. ನಮ್ಮಿಬ್ಬರಲ್ಲಿ ಯಾರನ್ನು ಮದುವೆ ಮಾಡಿಕೊಳ್ಳುತ್ತೀಯೆ? ಅದಾದರೂ ಹೇಳು.

ಗುಂಡ—ಛಲದಿಂದ ಒಬ್ಬಳನ್ನೂ ಮದುವೆಯಾಗುವುದಿಲ್ಲ.

"ನ್ನೂ" ಎನ್ನುವ ಹೊತ್ತಿಗೆ ಸರಿಯಾಗಿ ಲಕ್ಷ್ಮಿಯ ಕೈ ನಡುಗಿತು. ಚಿಟು ಕುಮುಳ್ಳಾಯಿತು. ಗುಂಡನಿಗೆ ವಿಪರೀತವಾಗಿ ಬಾಧೆಯಾಯಿತು. ದೀರ್ಘವು

ಹೊರಡಲಿಲ್ಲ, ಹ್ರಸ್ವವಾಯಿತು. “ಒಬ್ಬಳನ್ನೂ ಮಾಡಿಕೊಳ್ಳುವುದಿಲ್ಲ” ಎಂದ ಹಾಗಾಯಿತು. ಇಬ್ಬರೂ ಕೇಳಿದರು. ಲಕ್ಷ್ಮಿಗೆ ಮುಳ್ಳನ್ನು ತೆಗೆಯುವುದರ ಮೇಲೆ ಧ್ಯಾನ. ಸೀತೆಗೆ ಈ ಮಾತು ಒಪ್ಪಲಿಲ್ಲ.

ಸೀತೆ—(ಸ್ವಲ್ಪ ಹೊತ್ತಿನ ಮೇಲೆ) ಒಳ್ಳೆಯದಾಯಿತು. ಈ ಗುಲಾಬಿಯ ಹೂವನ್ನು ನನಗೆ ಕೊಡುತ್ತೀಯೋ, ಲಕ್ಷ್ಮಿಗೆ ಕೊಡುತ್ತೀಯೋ ಹೇಳಪ್ಪಾ.

ಗುಂಡ—ನಿಮ್ಮಿಬ್ಬರಲ್ಲಿ ಯಾರು ಅಪೇಕ್ಷಿಸುತ್ತೀರೋ ಅವರಿಗೆ ಕೊಡುತ್ತೇನೆ.

ಅಷ್ಟು ಹೊತ್ತಿಗೆ ಲಕ್ಷ್ಮಿಯು ಮುಳ್ಳನ್ನು ಈಚೆಗೆ ಹಿರಿದು ಹಾಕಿದಳು. ಮುಳ್ಳು ಆಳವಾಗಿ ಹೊಕ್ಕಿದ್ದರಿಂದ ರಕ್ತವು ಬಂತು. ಗುಂಡನು ಬೇಡವೆಂದರೂ ಕೇಳದೆ ತನ್ನ ಹರಿದುಹೋಗಿದ್ದ ಪರಕಾರವನ್ನು ಸ್ವಲ್ಪ ಗೀಳಿ ಅವನ ಕಾಲಿಗೆ ಬಟ್ಟೆಯನ್ನು ಕಟ್ಟಿದಳು. ಗುಂಡನೆದ್ದು ಕುಳಿತುಕೊಂಡನು.

ಗುಂಡ—ಈ ಹೂವು ಯಾರಿಗೆ ಬೇಕು ?

ಲಕ್ಷ್ಮಿ—ನಿನಗೆ ನೋವು ಮಾಡಿದ ಹೂವು ನನಗೆ ಬೇಡ.

ಸೀತೆ—ಹೂವೇನುಮಾಡಿತೇ ಪಾಪ. ಅಂಥಾ ಚೆನ್ನಾಗಿದೆ. ಗುಂಡ! ನನಗೆ ಬೇಕು, ಕೊಡಪ್ಪಾ.

ಗುಂಡನು ಹೂವನ್ನು ಸೀತೆಗೆ ಕೊಟ್ಟನು. ಸೀತೆಯು ಅದನ್ನು ಆದರದಿಂದ ಮುಡಿದುಕೊಂಡಳು. ಲಕ್ಷ್ಮಿಯು ಗುಂಡನನ್ನು ಕೈ ಹಿಡಿದೆಬ್ಬಿಸಿ “ನನ್ನ ಹೆಗಲಿನ ಮೇಲೆ ಕೈ ಊರಿಕೊಂಡು ಮೆಲ್ಲಗೆ ನಡಿ” ಎಂದಳು. ಏಳುವುದಕ್ಕೂ ನಡೆಯುವುದಕ್ಕೂ, ಆಧಾರವೇನೂ ಬೇಕಾಗಿರಲಿಲ್ಲ. ಮುಳ್ಳು ಚುಚ್ಚಿಕೊಂಡಿದ್ದಾಗ ನಡೆದುಕೊಂಡು ಬಂದವನಿಗೆ ಮುಳ್ಳು ತೆಗೆದ ಮೇಲೆ ನಡೆಯುವುದಕ್ಕಾಗುವುದಿಲ್ಲವೆ ? ಆದರೂ ಆದರಿಸಿಕೊಟ್ಟ ಆಧಾರವೆಂದು ನಿರಾಕರಿಸಲಿಲ್ಲ. ಲಕ್ಷ್ಮಿಯ ಹೆಗಲಿನ ಮೇಲೆ ಕೈ ಇಟ್ಟುಕೊಂಡು ಕುಂಟುತ್ತ ಮನೆಯ ಕಡೆಗೆ ಹೊರಟನು.

ಮೂವರೂ ಸ್ವಲ್ಪ ದೂರ ಬಂದರು. ಸಮೀಪದಲ್ಲೊಂದು ಮಾವಿನ ಮರದಲ್ಲಿ ಹೂವು ಜಗಿಯುತ್ತಿತ್ತು. ಆ ಪುಷ್ಪದ ಮಕರಂದ ರಸಾಸ್ವಾದನಕ್ಕಾಗಿ ಮಧುಕರಗಳು ಅಹಮಹಮಿಕಾಸ್ಪರ್ಧೆಯಿಂದ ಮುತ್ತಿ ಕೋಲಾಹಲವನ್ನು ಮಾಡುತ್ತಿದ್ದುವು. ಚೂತಾಂಕುರವನ್ನು ಆಸ್ವಾದಿಸಿದುದರಿಂದ ವಿಶೇಷವಾಗಿ ಮಧುರವಾದ ಶಾರೀರದಿಂದ ಪರಭೃತಗಳು ಪ್ರಮತ್ತವಾಗಿ ಪಂಚಮವನ್ನು ಗಾಯನವಮಾಡುತ್ತಿದ್ದವು. ವನಸ್ಪತಿಯ ಸೌಂದರ್ಯವೂ ಪುಷ್ಪದ ಪರಿಮಳವೂ ಮಧುಕರಗಳ ಕೋಲಾಹಲವೂ ಕೋಕಿಲೆಗಳ ಪಂಚಮೋದಂಚನೆಯೂ ಮನಸ್ಸಿಗೆ ಅಪ್ಯಾಯಮಾನವಾಗಿದ್ದವು. ಮನಸ್ಸೆಳೆದುದರಿಂದ ಮೂವರೂ ಮರದ ಕೆಳಗೆ ನಿಂತುಕೊಂಡು ನೋಡುತ್ತಾ ಆನಂದ

ಪರವಶರಾದರು. ಹಾಗೆಯೇ ತಂಗಾಳಿಯು ವೇಗವಾಗಿ ಚಲಿಸಿತು. ಅಯಾಚಿತವಾಗಿ ಬೀರುತ್ತಿದ್ದ ಎಳೆಯ ಪರಿಮಳವನ್ನು ವನಸ್ಪತಿಯು ಗಂಧವಾಹನಿಗೆ ಯಥೇಚ್ಛೆಯಾಗಿ ಹೊರಿಸಿಕೊಟ್ಟಿತು. ಪರೋಪಕಾರಿಯಾದ ಅನಿಲದೇವನು ಆರ್ಜಿತವಾದ ಸುಗಂಧದಿಂದ ಇದ್ದ ಮೂವರ ಘ್ರಾಣೇಂದ್ರಿಯಗಳಿಗೂ ಸಂತರ್ಪಣೆಯನ್ನು ಮಾಡಿ ಬೇರೆ ಅತಿಥಿಗಳನ್ನು ಅರಸುತ್ತಾ ಮುಂದಕ್ಕೆ ಸಂಚರಿಸಿದನು. ಮಧುಲಂಪಟಿಗಳಾದ ಮಧುಕರಗಳ ಉನ್ಮಾದ ಪ್ರವೃತ್ತಿಯಿಂದ ಜುಗುಪ್ಸಿತವಾದ ವನಸ್ಪತಿಯು ಶ್ರೇಷ್ಠರಾದ ಅಭ್ಯಾಗತರಿಗೆ ಆದರದಿಂದ ಹಸ್ತಲಾಘವವನ್ನಿತ್ತು ಸತ್ಕರಿಸಬೇಕೆಂದೋ ಎಂಬಂತೆ ತನ್ನ ಶಾಖಾಭುಜವನ್ನೊಂದನ್ನು ಇವರು ನಿಂತಿದ್ದ ಕಡೆಯಲ್ಲಿ ತಗ್ಗಿಸಿತು. ಲಕ್ಷ್ಮಿಯ ಹೆಗಲಿನಮೇಲೂರಿ ಮೇಲಕ್ಕೆತ್ತಿದ್ದ ಗುಂಡನ ದಕ್ಷಿಣ ಹಸ್ತಕ್ಕೆ ಅದು ತಗುಲಿತು. ಗ್ರಹಣೇಂದ್ರಿಯದ ನೈಸರ್ಗಿಕ ವ್ಯಾಪಾರವು ಸ್ವಯಂ ಪ್ರವೃತ್ತವಾಗಿ ಗುಂಡನೊಂದು ಸೊಗಸಾದ ಮಾವಿನ ಹೂವನ್ನು ಕೊಯ್ದುಕೊಂಡನು. ಸತ್ಪಾತ್ರವಿನಿಯೋಗದಿಂದ ಸಂತುಷ್ಟವಾದ ಆ ಶಾಖಾಭುಜವು ಮೇಲಕ್ಕೆದ್ದಿತು.

ಗುಂಡ—(ಕೀಟಲೆಗಾಗಿ) ಈ ಹೂವು ಯಾರಿಗೆ ಬೇಕು ?

ಸೀತೆ—(ಲಕ್ಷ್ಮಿಯನ್ನು ಅಪಹಾಸ್ಯ ಮಾಡುವುದಕ್ಕಾಗಿ) ಅವಳಿಗೆ ಕೊಡು. ಅವಳ ರೂಪಕ್ಕೂ ಅದಕ್ಕೂ ಸರಿ.

ಗುಂಡ—ಲಕ್ಷ್ಮಿ ! ಈ ಹೂವು ನಿನಗೆ ಬೇಕೇ ?

ಲಕ್ಷ್ಮಿ—ಗುಂಡ ! ಅದು ನಿನಗೆ ಚೆನ್ನಾಗಿದೆಯೋ ?

ಗುಂಡ—(ಮೂಸಿನೋಡಿ) ಇದನ್ನು ಕಂಡರೆ ನನಗೆ ತುಂಬ ಆನಂದವಾಗುತ್ತದೆ

ಲಕ್ಷ್ಮಿ—ಹಾಗಾದರೆ ಅದನ್ನು ನನಗೆ ಮುಡಿಸು.

ಲಕ್ಷ್ಮಿಯು ಮುಡಿಸಿಕೊಳ್ಳುವುದಕ್ಕೆ ಹಿಂತಿರುಗಿದಳು. ಗುಂಡನು ನಿಧಾನವಾಗಿ ಮುಡಿಸಿದನು.

ಸೀತೆ—(ಅಸೂಯೆಯಿಂದ) ಲಕ್ಷ್ಮೀ ! ಸೊಗಸಾದ ಈ ಗುಲಾಬಿ ಹೂವನ್ನು ಹಳಿದೆ. ನಿನಗೆ ತಕ್ಕದ್ದು ಸಿಕ್ಕಿತು.

ಲಕ್ಷ್ಮಿ—(ನಗುತ್ತಾ) ಸೀತೆ ! ಹಾಗೆಯೇ ಆಗಲಿ ; ಫಲ ಬಿಡುವ ಮಾವಿನ ಹೂವೇ ನನಗಿರಲಿ, ಫಲವಿಲ್ಲದ ಗುಲಾಬಿಹೂವು ಬೇಡ.

"ಫಲವಿಲ್ಲದ ಗುಲಾಬಿಹೂವು" ಸೀತೆಯ ಮನಸ್ಸಿನಲ್ಲೇನೋ ಕಳಕ್ಕೆಂದಿತು. ಅದೇತಕ್ಕೆಂದು ಅವಳಿಗೇ ಬೋಧೆಯಾಗಲಿಲ್ಲ. ಸೀತೆಯ ಮುಖವು ಖಿನ್ನವಾಯಿತು. ಮಾತೇ ತೋರಲಿಲ್ಲ. ಸ್ವಭಾವಸರಳಳಾದ ಲಕ್ಷ್ಮಿಯೇ ಸಮಾಧಾನವನ್ನು ಹೇಳಿದಳು.

ಲಕ್ಷ್ಮಿ—ಅಲ್ಲಾ ಕಣೆ ಸೀತೆ! ನಾವು ಮುಡಿದುಕೊಳ್ಳುವ ಹೂವು ನಮಗೆ ಕಾಣುತ್ತದೆಯೇನೇ?

ಸೀತೆ—ಇಲ್ಲ; ಇನ್ನೊಬ್ಬರಿಗೆ ಕಾಣುತ್ತೆ.

ಲಕ್ಷ್ಮಿ—ಅದಕ್ಕೇ ನೋಡು. ನೋಡುವವರಿಗೆ ಚೆನ್ನಾಗಿರುವ ಹೂವನ್ನು ನಾವು ಮುಡಿದುಕೊಳ್ಳಬೇಕು.

ಸೀತೆ—ಮಾವಿನ ಹೂವು ಯಾರಿಗೆ ಚೆನ್ನಾಗಿರುತ್ತೆ ಹೇಳು ಮತ್ತೆ.

ಲಕ್ಷ್ಮಿ—(ನಗುತ್ತ) ಮಾವಿನ ಹಣ್ಣು ಬೇಕು ಎನ್ನುವವರಿಗೆ.

ನಗುತ್ತಾ ಆಡಿದ ಮಾತು. ಅಕ್ಷರವ್ಯತ್ಯಾಸವಾಯಿತೋ, ಸೀತೆಗೇ ಹಾಗೆ ಕೇಳಿಸಿತೋ, ಗೊತ್ತಿಲ್ಲ. ಅಂತೂ "ಮಾವನ ಹೆಣ್ಣು ಬೇಕೆನ್ನುವವರಿಗೆ" ಎಂದು ಸೀತೆಗೆ ಬೋಧೆಯಾಯಿತು. ಸೀತೆಯ ಮನಸ್ಸು ಮತ್ತೆ ಖಿನ್ನವಾಯಿತು.

ಸೀತೆ—ಅದೇನೋ ಅಮ್ಮ! ನೀನಾಡುವ ಮಾತೂ, ನೀನು ಮಾಡುವ ಕೆಲಸವೂ, ಯಾವುದೂ ನನಗೆ ಗೊತ್ತಾಗೊದಿಲ್ಲ.

ಲಕ್ಷ್ಮಿ—ಅಲ್ಲವೇ ಅಮ್ಮಾ! ನಾವು ಮುಡಿದುಕೊಂಡ ಹೂವನ್ನು ನೋಡುವವರು ಯಾರೇ? ಗುಂಡನಲ್ಲವೇನೇ? ಗುಂಡನಿಗೆ ಮಾವಿನಹೂವು ಚೆನ್ನಾಗಿದೆಯಂತೆ. ಅವನು ಚೆನ್ನಾಗಿರುವುದನ್ನು ನೋಡಿ ಸಂತೋಷಪಡಲಿ ಎಂತ ನಾನು ಮುಡಿಸಿಕೊಂಡೆ, ಅಷ್ಟೇ.

ಸೀತೆ—ಗುಂಡ! ನೀನು ಯಾರು ಮುಡಿದಿರುವ ಹೂವನ್ನು ನೋಡಿ ಸಂತೋಷಪಡುತ್ತೀಯಪ್ಪಾ?

ಗುಂಡ—ನೀವಿಬ್ಬರೂ ತಿರುಗಿ; ನೋಡಿ ಹೇಳುತ್ತೇನೆ.

ಇಬ್ಬರೂ ಹಿಂತಿರುಗಿದರು. ಸೀತೆಯು ಮುಡಿದಿದ್ದ ಗುಲಾಬಿಯ ಹೂವೇನೊ ಕಣ್ಣಿಗೆ ಬಿತ್ತು; ಚೆನ್ನಾಗಿಯೂ ಇತ್ತು; ಆದರೆ ಲಕ್ಷ್ಮಿಯು ಮುಡಿದಿದ್ದ ಮಧುಕರಾರಾಧಿತವಾದ ಚೂತಪುಷ್ಪದಲ್ಲೇನೋ ಅತಿಶಯವಿದ್ದಿತು. ಅದರಲ್ಲಿಯೇ ಅವನ ದೃಷ್ಟಿಯು ಸಮಾರೋಪಿತವಾಯಿತು. ಲಕ್ಷ್ಮಿಗೆ ಮನಸ್ಸಿನಲ್ಲಿ ಅಳುಕಿರಲಿಲ್ಲ; ಹಿಂತಿರುಗಿ ನೋಡಲಿಲ್ಲ. ಸೀತೆಗೆ ಗುಂಡನು ಲಕ್ಷ್ಮಿಯನ್ನೆಲ್ಲಿ ನೋಡುತ್ತಿರುವನೋ ಎಂದು ಸಂದೇಹ ಬಂದು ಥಟ್ಟೆಂದು ಹಿಂತಿರುಗಿದಳು. ಆನಂದಪರವಶವಾದ ಗುಂಡನ ದೃಷ್ಟಿಯು ಲಕ್ಷ್ಮಿಯ ಮುಡಿಯಮೇಲೆ ನೆಲೆಸಿತ್ತು. ಅದನ್ನು ಕಂಡು ಸೀತೆಯು ಅಸಂತುಷ್ಟಳಾದಳು.

ಗುಂಡನಿಗೆ ಹದಿನಾಲ್ಕು ತುಂಬಿತ್ತು. ಸೀತೆಗೆ ಎಂಟು ತುಂಬುವುದರಲ್ಲಿತ್ತು. ಲಕ್ಷ್ಮಿಯು ಸೀತೆಗಿಂತ ಒಂದೆರಡು ತಿಂಗಳು ಚಿಕ್ಕವಳು. ಅರಿಯದ ಈ ಹುಡುಗರು ಹುಡುಗಾಟವೆಂದು ದೊಡ್ಡಾಟವನ್ನಾಡಿಕೊಂಡು ಮನೆಗೆ ತಲಪಿದರು. ಲಕ್ಷ್ಮಿಯ ಮನೆಯವರಿಗೆ ಅವಳು ಪರಕಾರವನ್ನು ಹರಿದುಕೊಂಡು ಬಂದುದೊಂದೇ ಕಂಡುದು. ಇನ್ನೇನೂ ಕಾಣಲಿಲ್ಲ. ಮೂವರೂ ತಪ್ಪದೆ ನಿತ್ಯವೂ ಹೂದೋಟಕ್ಕೆ ಹೋಗುವರು. ಬೇಕಾದಷ್ಟು ಹೂಗಳನ್ನು ಕೊಯ್ಯುವರು. ಯಥೇಚ್ಛೆಯಾಗಿ ಮುಗ್ಧ ಮಧುರ ಸಲ್ಲಾಪಗಳನ್ನಾಡುವರು, ಅಳುವರು, ನಗುವರು, ಹಾಸ್ಯಮಾಡುವರು, ಆಟವಾಡುವರು, ತಂದ ತಿಂಡಿಯನ್ನು ಒಬ್ಬರಿಗೊಬ್ಬರು ಕೊಡುವರು, ಸಿಕ್ಕಿದ ಹಣ್ಣುಹಂಪಲನ್ನು ಮೂವರೂ ತಿನ್ನುವರು. ಈ ರೀತಿಯಾಗಿ ಆಡುತ್ತಾ ಆಡುತ್ತಾ ಶ್ಯಾಮವರ್ಣದವಳಾದರೂ ಲಕ್ಷಣ್ಯಳಾದ ಲಕ್ಷ್ಮಿಯ ಮೇಲೆ ಗುಂಡನ ಮನಸ್ಸು ನೆಲೆಸುತ್ತಾ ಬಂತು. ಅನುರಾಗವತಿಯಾದ ಲಕ್ಷ್ಮಿಗೆ ಸುಂದರಾಂಗನಾದ ಗುಂಡನ ಮೇಲೆ ಮನಸ್ಸಾಗುತ್ತಾ ಬಂತು. ಗುಂಡನ ಮನೋಹರಾಕೃತಿಯು ಸೀತೆಯ ಕಣ್ಣಿಗೆ ಕಟ್ಟಿದಂತಾಗುತ್ತಾ ಬಂತು. ಚಂಪಕ ಕೊರಕದಂತೆ ಮನೋಹರಳಾದ ಸೀತೆಯ ವಿಷಯದಲ್ಲಿ ಗುಂಡನಿಗೆ ಸ್ನೇಹವೇನೋ ಇತ್ತು, ಆದರೆ ಭಾವವು ಶೃಂಗಾರವನ್ನವಲಂಬಿಸಲಿಲ್ಲ. ಲಕ್ಷ್ಮಿಗೂ ಗುಂಡನಿಗೂ ದಿನೇ ದಿನೇ ಪ್ರವರ್ಧಮಾನವಾಗುತ್ತಿದ್ದ ಪರಸ್ಪರಾನುಗ ಪ್ರವೃತ್ತಿಯು ಸೀತೆಗೆ ಪ್ರತ್ಯಕ್ಷವಾಗುತ್ತಾ ಬಂದು ಒಳಗೊಳಗೇ ಕೊರೆಯುತ್ತಿದ್ದಿತು. ಸಾಂಸಾರಿಕವಾದ ದೈನಂದಿನವರ್ತನದ ದಾರುಣ ಕ್ಲೇಶದಲ್ಲಿ ನಿಮಗ್ನರಾಗಿದ್ದ ಈ ಬಾಲಕರ ಹಿರಿಯರಿಗೆ ಈ ಆಟದ ತತ್ವವು ಸ್ವಲ್ಪವೂ ಬೋಧೆಯಾಗಲಿಲ್ಲ.

## ೨ನೆಯ ಭಾಗ

ಹದಿನೆಂಟನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನಕ್ಕೆ ಶ್ರೀರಂಗಪಟ್ಟಣವು ರಾಜಧಾನಿಯಾಗಿದ್ದಿತು. ಸಂಸ್ಥಾನಕ್ಕೆ ಚಿಕ್ಕ ಕೃಷ್ಣರಾಜ ಒಡೆಯರು ಹೆಸರಿಗೆ ರಾಜರು. ದಳವಾಯಿ ದೇವರಾಜೇ ಅರಸಿನವರೂ ಅವರ ತಮ್ಮಂದಿರು ಕರಚೂರಿ ನಂಜರಾಜೇ ಅರಸಿನವರೂ ನಿಜವಾಗಿಯೂ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದರು. ಲಿಂಗಪ್ಪಾಜಿ ಎಂಬುವರು ಇವರ ಕೈ ಕೆಳಗೆ ಸೇನೆಯಲ್ಲಿ ಅಧಿಕಾರಿಗಳಾಗಿದ್ದರು. ಲಿಂಗಪ್ಪಾಜಿಯವರು ದೊಡ್ಡ ಮನುಷ್ಯರು, ಸಜ್ಜನರು, ಪರೋಪಕಾರಿಗಳು, ಮಂತ್ರಕುಶಲರು, ರಾಜತಂತ್ರಪ್ರವೀಣರು, ಸ್ವಾಮಿಕಾರ್ಯ ಧುರಂಧರರು, ಸ್ವಕಾರ್ಯ ಧುರೀಣರಲ್ಲ, ಯುದ್ಧದಲ್ಲಿ ಧೀರರು, ವೀರರು, ಶೂರರು, ಸಾಹಸಿಗಳು, ಪರಾಕ್ರಮಿ

ಗಳು. ಇವರ ವಿಷಯದಲ್ಲಿ ಸರ್ವರಿಗೂ ಮರ್ಯಾದೆಯಿತ್ತು. ಆರ್ಕಾಟಿನ ನವಾಬರು ಸಂಸ್ಥಾನದಿಂದ ಪೊಗದಿಯನ್ನು ವಸೂಲು ಮಾಡಿಕೊಂಡು ಬರಲು ಒಂದು ದೊಡ್ಡ ಸೇನೆಯನ್ನು ಕಳುಹಿಸಿದ್ದರು. ಆ ಸೈನ್ಯವು ಕ್ಲೋಸ್ ಪೇಟೆಯ ಬಳಿ ಇರುವ ಕೈಲಂಚದವರೆಗೂ ಬಂತು. ಶ್ರೀರಂಗಪಟ್ಟಣದಿಂದ ದಳವಾಯಿ ದೇವರಾಜೇ ಅರಸಿನವರ ಸೈನ್ಯವೂ ಅಲ್ಲಿಗೆ ಬಂತು. ಉಭಯ ಸೇನೆಯನಾಯಕರೂ ಯುದ್ಧರಂಗವನ್ನು ಪರಿಶೀಲಿಸುವುದಕ್ಕೆ ಓಡಾಡುತ್ತಿದ್ದರು. ಮುಸಲ್ಮಾನ ಸೇನೆಯ ನಾಯಕರು ತಮ್ಮ ಸೇನೆಯನ್ನು ಹಿಂದೆ ಬಿಟ್ಟು ಪ್ರಮಾದದಿಂದ ಮುಂದಕ್ಕೆ ಬಂದು ಬಿಟ್ಟರು. ಲಿಂಗಪ್ಪಾಜಿಯವರು ಈ ಸಮಯವನ್ನು ಕಂಡು ಹಿಡಿದು ಮುಸಲ್ಮಾನ ಸೇನಾ ನಾಯಕರು ಹಿಂತಿರುಗಿ ಹೋಗದಂತೆ ಇವರನ್ನು ತಡೆದು ನಾಶಮಾಡಿಬಿಟ್ಟರೆ ಸುಲಭವಾಗಿ ವಿಜಯವಾಗುವುದೆಂದು ದಳವಾಯಿಯವರಿಗೆ ತಿಳಿಸಿದರು. ಇಂಥಾ ಸಾಹಸಕಾರ್ಯಕ್ಕೆ ಲಿಂಗಪ್ಪನವರೇ ನಿಯತರಾದರು. ಲಿಂಗಪ್ಪನವರು ಸಣ್ಣ ಸೇನೆಯನ್ನು ತೆಗೆದುಕೊಂಡು ಸೇನಾ ನಾಯಕರನ್ನು ಬಳಿಸಿ ಅವರು ಹಿಂತಿರುಗಿ ಹೋಗದಂತೆ ಯುಕ್ತಿಯಿಂದಲೂ ಶಕ್ತಿಯಿಂದಲೂ ತಡೆದು ಬಿಟ್ಟರು. ದಳವಾಯಿಯವರ ಸೇನೆಯು ಕೂಡಲೇ ಸೇನಾನಾಯಕರ ಮೇಲೆ ಬಿದ್ದು ಅವರನ್ನು ನಾಶಪಡಿಸಿದರು. ಲಿಂಗಾಪ್ಪಾಜಿಯವರು ಆ ಕೂಡಲೇ ತಮ್ಮ ಸಣ್ಣ ಸೇನೆಯೊಡನೆ ಹತನಾಯಕರಾದ ಮುಸಲ್ಮಾನರ ಸೇನೆಯ ಮೇಲೆ ಬಿದ್ದು ನಾಶ ಪಡಿಸಲಾರಂಭಿಸಿದರು. ದಳವಾಯಿಯವರ ಸೈನ್ಯವು ದೂರದಲ್ಲಿತ್ತು. ಲಿಂಗಪ್ಪನವರು ಸಮೀಪದ ಗ್ರಾಮನಿವಾಸಿಗಳನ್ನೆಲ್ಲಾ ಕೂಡಹಾಕಿ ಕೋಲಾಹಲವನ್ನು ಮಾಡುತ್ತಾ ಓಡಿಬರುವಂತೆ ಮಾಡಿದರು. ಈ ಕೋಲಾಹಲಕ್ಕೆ ದೊಡ್ಡ ಸೈನ್ಯವೇ ಬಂತೆಂದು ಗಾಬರಿಪಟ್ಟು ಮುಸಲ್ಮಾನರ ಸೇನೆಯು ದಿಕ್ಕಾಪಾಲಾಗಿ ಓಡಿಹೋಯಿತು. ಲಿಂಗಪ್ಪಾಜಿಯವರ ಶಕ್ತಿಯಿಂದಲೂ, ಯುಕ್ತಿಯಿಂದಲೂ, ಸಾಹಸದಿಂದಲೂ, ಪರಾಕ್ರಮದಿಂದಲೂ, ಬುದ್ಧಿಕುಶಲತೆಯಿಂದಲೂ, ಸರಾಗವಾಗಿ ಜಯವಾದುದಲ್ಲದೆ ಬೇಕಾದಷ್ಟು ಹಣಕಾಸೂ, ಯುದ್ಧ ಸಾಮಗ್ರಿಗಳೂ, ಹಸ್ತಗತವಾದವು. ಈ ಅದ್ಭುತ ಸಾಹಸಕ್ಕೆ ಸರ್ವಾಧಿಕಾರಿಗಳಾದ ದಳವಾಯಿಯವರಿಗೆ ಲಿಂಗಪ್ಪಾಜಿಯವರ ಮೇಲೆ ವಿಶೇಷವಾಗಿ ವಿಶ್ವಾಸವಾಯಿತು. ಅಂದಿನಿಂದ ಲಿಂಗಪ್ಪಾಜಿಯವರು ಫೌಜುದಾರರಾದರು; ದಳವಾಯಿಯವರ ಬಲಭುಜವೆನ್ನಿಸಿಕೊಂಡರು. ಲಿಂಗಾಪ್ಪಾಜಿಯವರೆಂದರೆ ಎಲ್ಲರಿಗೂ ಅಕ್ಕರೆಯಾಗಿತ್ತು. ಇವರ ಏಕಾಪತ್ಯ ರತ್ನವೇ ಸೀತೆ.

ಲಿಂಗಪ್ಪಾಜಿಯವರ ಫೌಜಿನಲ್ಲಿ ದೇವಪ್ಪಾಜಿಯವರೆಂದು ರೂಢಿಯಾಗಿ ಕರೆಯುತ್ತಿದ್ದ ಚಿಕ್ಕದೇವರಾಜೇ ಅರಸು ಎಂಬಾತನು ಒಬ್ಬ ಪ್ರಧಾನನಾಯಕನಿದ್ದನು. ಈತನೂ ಶೌರ್ಯೋದಾರ್ಯಾದಿ ಸದ್ಗುಣಗಳಿಂದ ಫೌಜುದಾರರಿಗೆ ಕೇವಲ ಆಪ್ತನೂ, ಮಂತ್ರಿಯೂ, ಶರೀರರಕ್ಷಕನೂ, ಆಗಿದ್ದನು. ಈತನು ಸರ್ವದಾ ಫೌಜುದಾರರ

ಜತೇಪುಲ್ಲಿಯೇ ಇರುವುದು. ಹುದ್ದೆಯಲ್ಲಿ ಸಣ್ಣವನಾದರೂ ಮರ್ಯಾದೆಯಲ್ಲಿ ಲಿಂಗಪ್ಪನವರನ್ನು ಬಿಟ್ಟರೆ ಈತನಿಗೆ ಸಮಾನರು ಯಾರೂ ಇರಲಿಲ್ಲ. ಈತನ ಸುಪುತ್ರನೇ ಗುಂಡ. ಗುಂಡನೆಂಬುದು ರೂಢಿವಾಚಕ. ವೀರರಾಜನೆಂಬುದು ಇವನ ನಿಜನಾಮ. ಆ ಹೆಸರೊಂದಲ್ಲ ಗುಣವೊಂದಲ್ಲ. ಏಳುವ ಪೈರು ಮೊಳೆಯಲ್ಲಿಯೇ ಕಂಡಿತೆಂದು ಈ ಬಾಲಕನು ಧೈರ್ಯದಲ್ಲಿಯೂ, ಶೌರ್ಯದಲ್ಲಿಯೂ, ಸಾಹಸದಲ್ಲಿಯೂ, ವಿಖ್ಯಾತಿಗೆ ಬರುತ್ತಿದ್ದನು. ಈಗಿನಂಥಾ ಅನಾಮಧೇಯರ ಜನತೆಯಲ್ಲ. ಎಷ್ಟು ಕೆಟ್ಟರೂ ಆ ಕಾಲದಲ್ಲಿ ವೀರತ್ವಕ್ಕೆ ಮರ್ಯಾದೆಯೂ, ಉತ್ತೇಜನೆಯೂ, ಪಕ್ಷಪಾತವೂ, ಇತ್ತು. ಬಹುಮಂದಿಯು ಈ ವೀರಾಂಕುರದ ಭಾಗಧೇಯವನ್ನು ಕೇವಲ ಮಮತೆಯಿಂದ ಪ್ರತೀಕ್ಷಿಸುತ್ತಿದ್ದರು. ವೀರರಾದ ಲಿಂಗಪ್ಪಾಜಿಯವರಿಗೆ ಈ ಪೌರುಷದ ನವಾವತಾರದಮೇಲೆ ಪುತ್ರವಾತ್ಸಲ್ಯವಿದ್ದಿತು. ಇದಕ್ಕಾಗಿ ಗುಂಡನು ಲಿಂಗಪ್ಪಾಜಿಯವರ ಮನೆಯಲ್ಲಿಯೇ ಬೆಳೆಯುತ್ತಿದ್ದನು. ಅವರ ಗರುಡಿಯಲ್ಲೇ ಸಾಧನೆ. ಅವರ ಫೌಜಿನಲ್ಲಿಯೇ ಶಸ್ತ್ರಾಭ್ಯಾಸ. ಅವರ ಮನೆಯಲ್ಲಿಯೇ ಶಾಸ್ತ್ರವ್ಯಾಸಂಗ. ಎಲ್ಲವೂ ಅವರ ಮನೆಯಲ್ಲಿಯೇ.

ಫೌಜುದಾರರ ಕಛೇರಿಯಲ್ಲಿ ಬಸವರಾಜಪ್ಪನು ಒಬ್ಬ ಸಣ್ಣ ಹುದ್ದೇದಾರ. ಬಡವ, ಸತ್ಯವಂತ, ಸರಳಸ್ವಭಾವದವನು. ಇದೆಲ್ಲದಕ್ಕಿಂತಲೂ ಬಹುಮನ್ಯವಾದ ತ್ರಿಕರಣಶುದ್ಧಿಯು ಚೆನ್ನಾಗಿತ್ತು. ವಿಶೇಷವಾಗಿ ಅರಿತವನಲ್ಲ. ಇದರಿಂದ ಒಳಗೆ ಹೊರಗೆ ಎಲ್ಲ ಕಡೆಯೂ ಓಡಾಡುವುದಕ್ಕೆ ನಂಬಿಕೆಯಾಗಿತ್ತು. ಕಛೇರಿಯ ಕೆಲಸದ ಜತೆಗೆ ಫೌಜುದಾರರ ಮನೆಯ ಮನೆವಾರ್ತೆಯ ಕೆಲಸವೂ ಈತನನ್ನೇ ವಹಿಸಿತ್ತು. ಈತನ ಸತ್ಪುತ್ರಿಯೇ ಲಕ್ಷ್ಮಿ. ಲಕ್ಷ್ಮಿಯೆಂದರೆ ನಿಜವಾಗಿಯೂ ಲಕ್ಷ್ಮಿಯೆ. ಗುಂಡನಂತೆ ವರ್ಣದಲ್ಲಿ ಹೀನಳಾದರೂ ಗುಣದಲ್ಲಿಯೂ, ಲಕ್ಷಣದಲ್ಲಿಯೂ ಸ್ವಭಾವದಲ್ಲಿಯೂ ಸರ್ವೋತ್ತಮಳು; ಇವಳನ್ನು ಕಂಡು ಆಹ್ಲಾದಪಡದವರೇ ಇಲ್ಲ. ಇವಳಿಗೆ ಆಗದವರಂತೂ ಹುಟ್ಟಲೇಇಲ್ಲ. ಸರ್ವಜನ ಮನೋರಂಜಕವಾದ ಕನ್ಯಾರತ್ನವೆಂದರೆ ಲಕ್ಷ್ಮಿ. ಗುಂಡನು ಇವಳಲ್ಲಿ ಪಕ್ಷಪಾತವನ್ನು ತೋರಿಸುತ್ತಿದ್ದುದರಿಂದ ಸೀತೆಗೆ ಇವಳಮೇಲೆ ಆ ವಿಷಯದಲ್ಲಿ ಮಾತ್ರ ಅಸೂಯೆಯೇ ಹೊರತು ಮಿಕ್ಕ ವಿಷಯಗಳಲ್ಲಿ ಇವರಿಬ್ಬರಿಗೂ ಉಳಿಯ ಕೊಡತಿಯ ನ್ಯಾಯ. ಸೀತೆಯು ಲಕ್ಷ್ಮಿಯನ್ನು ಅರೆಗಳಿಗೆಯೂ ಬಿಟ್ಟಿರಲಾರಳು. ಸರ್ವಕಾಲದಲ್ಲಿಯೂ ಜತೆಯಲ್ಲಿರಬೇಕು ; ಜತೆಯಲ್ಲಿಯೇ ಊಟ; ಜತೆಯಲ್ಲಿಯೇ ಆಟ; ಜತೆಯಲ್ಲಿಯೇ ಹೋಗುವುದು; ಜತೆಯಲ್ಲಿಯೇ ಬರುವುದು ; ಜತೆಯಲ್ಲಿಯೇ ಮಾತು ; ಜತೆಯಲ್ಲಿಯೇ ಕಥೆ ; ಜತೆಯಲ್ಲಿಯೇ ಓದು ; ಜತೆಯಲ್ಲಿಯೇ ಬರಹ ; ಜತೆಯಲ್ಲಿಯೇ ಮಲಗುವುದು ; ಎಲ್ಲವೂ ಜತೆಯಲ್ಲಿಯೇ ಆಗಬೇಕು. ಲಕ್ಷ್ಮಿಗೆ ಸೀತೆಯಮೇಲೆ ಯಾವ ವಿಧವಾದ ಅಸೂಯೆಯೂ ಇರಲಿಲ್ಲ. ಸೀತೆಯಮೇಲೆ ಲಕ್ಷ್ಮಿಗಿದ್ದ ಮಿತ್ರತ್ವವು ಕೇವಲ ನಿರ್ದುಷ್ಟವಾದುದು.

ಹುಡುಗರು ಹೂವು ಕೀಳುತ್ತಿದ್ದ ಉದ್ಯಾನವು ಲಿಂಗಪ್ಪಾಜಿಯವರದು. ಹೂವು ಕಿತ್ತ ಕೆಲವು ತಿಂಗಳಮೇಲೆ ಇಲ್ಲೊಂದು ಸ್ತ್ರೀಯರ ವನವಿಹಾರದ ಕೂಟವು ಸೇರಿತು. ಲಿಂಗಪ್ಪಾಜಿಯವರ ಆಪ್ತ ಬಂಧುಮಿತ್ರರೆಲ್ಲರೂ ಕುಟುಂಬ ಪರಿವಾರ ಸಮೇತರಾಗಿ ನೆರೆದರು. ಬೆಳಗಿನಿಂದ ಸಾಯಂಕಾಲದವರೆಗೂ ವಿಹಾರದ ಕಾರ್ಯಕ್ರಮಗಳು ಏರ್ಪಟ್ಟವು. ತಿಂಡಿ, ಊಟ, ಆಟ, ಪಾಟ, ಸಂಗೀತ, ಸಾಹಿತ್ಯ ಮುಂತಾದ ವಿಹಾರ ವಿಹಿತವಾದ ಏರ್ಪಾಟುಗಳೆಲ್ಲವೂ ಸುಲಕ್ಷಣವಾಗಿ ನಿಯತವಾಗಿತ್ತು. ಪ್ರಾತಃಕಾಲಕ್ಕೇ ಸರ್ವರೂ ಸೇರಿದರು. ವಿಹಾರಕೂಟವೆಂದು ಹೆಸರು. ವಿಹರಿಸುವುದಕ್ಕೆ ಬೇಕಾದಷ್ಟು ಏರ್ಪಾಟುಗಳೂ ಇದ್ದವು. ಆದರೆ ಆ ಕಾಲವು ವ್ಯಾಯಾಮಯೋಗ್ಯವಾದುದೇ ಹೊರತು ವಿಹಾರವಿಹಿತವಾದುದಲ್ಲ. ಹುದ್ದೇದಾರರು ಪ್ರಾಸಂಗಿಕ ರಾಜನೀತಿಯ ಚರ್ಚೆಯಲ್ಲಿ ವಿಮಗ್ನರಾಗಿದ್ದರು. ಇತರ ಪುರುಷರು ಅತಿ ದಾರುಣವಾದ ದೈನಂದಿನ ವ್ಯಾವಹಾರಿಕ ವರ್ತನದ ವಿಷಯದಲ್ಲಿಯೂ ಅವಶ್ಯಂಭಾವಿಯಾದ ಭವಿಷ್ಯತ್ಪಾಪೀಯ ದಿವಸಗಳ ವಿಷಯದಲ್ಲಿಯೂ ಯಥಾಮತಿಯಾಗಿ ಮಾತನಾಡಿಕೊಳ್ಳುತ್ತಾ ಕಾಲವನ್ನು ಕಳೆಯುತ್ತಿದ್ದರು. ಸ್ತ್ರೀಯರಿಗೆ ಗೃಹಕೃತ್ಯದ ಆತಂಕವು ತಾತ್ಕಾಲಿಕವಾಗಿ ತಪ್ಪಿದರೂ ಬಂಧುಗಳು ವಿಶೇಷವಾಗಿ ನೆರೆದಿದ್ದುದರಿಂದ ಘೋಷಾವಿಧಿಯ ಪ್ರಾತಿಬಂಧಕವು ಹೆಚ್ಚಿ ಮನೆಗಿಂತಲೂ ಹೆಚ್ಚು ಆತಂಕಪಡುವಂತಾಯಿತು. ಕೆಲಸಗಾರರೂ, ಆಡಳಿತಗಾರರೂ, ಆಳುಕಾಳುಗಳೂ ಮುಂತಾದ ಸೇವಾವರ್ಗದವರ ಪಾಡಂತೂ ಹೇಳಬೇಕಾದುದೇ ಇಲ್ಲ ; ಅವರಿಗೆ ನಿತ್ಯಕ್ಕಿಂತಲೂ ಕೆಲಸವು ಹೆಚ್ಚಿ ವನವಿಹಾರವು ಬೇಗ ಮುಗಿದು ಮಾನವಾಗಿ ಮನೆಯನ್ನು ಸೇರಿಕೊಂಡೇವೇ ದೇವರೇ ಎನ್ನಿಸಿತು. ನಿರಾತಂಕವಾಗಿ ನಿಜವಾಗಿಯೂ ವಿಹರಿಸಿದವರು ಬಾಲಕರು. ಅವರ ಆನಂದಕ್ಕಾಗಿ ಕೂಟವು ಸೇರಿದಂತಾಯಿತು.

ಬಾಲಕರಲ್ಲಿ ಆತಂಕಕ್ಕೆ ಸಿಕ್ಕಿಕೊಂಡವಳು ಸೀತೆಯೊಬ್ಬಳೇ. ಇವಳು ಫೌಜುದಾರರ ಏಕಾಪತ್ಯ ರತ್ನವಷ್ಟೇ. ಬಂದ ಬಂಧುಗಳೆಲ್ಲರೂ ಇವಳನ್ನು ನೋಡಬೇಕು, ಇವಳ ಸಂಗಡ ಮಾತನಾಡಬೇಕು, ಈ ಸಡಗರವನ್ನು ಪಟ್ಟು ಹೆತ್ತ ತಾಯಿಯು ಆನಂದಪಡಬೇಕು. ಅವರನ್ನು ಆನಂದಗೊಳಿಸಿ ಬಂದವರು ತಮ್ಮ ಆಗಮನವನ್ನು ಸಾರ್ಥಕಮಾಡಿಕೊಳ್ಳಬೇಕು. ಈ ಅವಾಂತರದಲ್ಲಿ ಅವಳಿಗೆ ಜತೆಯು ತಪ್ಪಿತು. ಲಕ್ಷ್ಮಿಗೂ, ಗುಂಡನಿಗೂ ಇಂಥಾ ಆತಂಕವೇನೂ ಇರಲಿಲ್ಲ. ಇವರಿಬ್ಬರೂ ಜತೆ ಸೇರಿದರು, ಅಲ್ಲಲ್ಲಿ ಅಲೆದರು, ವಿಸ್ರಬ್ಧವಾಗಿ ಆಲಾಪಿಸಿದರು, ಹೀಗಾಡಿ ಹಾಗಾಡಿ ಆ ಹೊತ್ತು ಹೂವು ಕಿತ್ತಿದ್ದ ಮಾವಿನ ಮರದ ಬಳಿಗೆ ಅಕಸ್ಮಾತ್ತಾಗಿ ಬಂದರು. ಆ ವನಸ್ಪತಿಯ ಶೋಭೆಯು ಪರಿವರ್ತಿತವಾಗಿದ್ದಿತು. ಆ ಕುಸುಮವಿಕಾಸದ ವನಲಕ್ಷ್ಮೀ ವಿಲಾಸವು ವ್ಯತೀತವಾಗಿ ಹೋಗಿತ್ತು. ಆ ಮಧುಲಂಪಟಗಳ ಮಧುಪಾನಪ್ರಯುಕ್ತವಾದ ಮಧುರ ಕೋಲಾಹಲದ ಸೊಲ್ಲು ಅಡಗಿ ಹೋಗಿತ್ತು. ಮರದತುಂಬ ಫಲಗಳು ಜಗಿಯುತ್ತಿತ್ತು. ಶುಕಶಾರಿಕಾದಿ ಪತತ್ರಿ ವಿಶೇಷಗಳು ಫಲಾಪೇಕ್ಷೆಯಿಂದ

ವನಸ್ಪತಿಯನ್ನು ಸೇವಿಸುತ್ತಿದ್ದವು. ಶಾಖಾಮೃಗಗಳು ವಸ್ತುತಃ ಫಲಾನ್ವೇಷಣ ತತ್ಪರವಾದವೆಂದರೂ ಸ್ವಾಭಾವಿಕವಾದ ಅಂಗಲಾಘವವನ್ನು ನೈಸರ್ಗಿಕವಾದ ಚೇಷ್ಟೆಯಿಂದ ಪ್ರದರ್ಶಿಸುತ್ತ ವನಸ್ಪತಿಯ ಶಾಖೋಪಶಾಖೆಗಳಲ್ಲಿ ಕ್ರೀಡಿಸುತ್ತಿದ್ದುವು. ಫಲಗಳ ಭಾರಕ್ಕೆ ವನಸ್ಪತಿಯ ಶಾಖೆಗಳು ಕೇವಲ ವಿನಮ್ರವಾಗಿದ್ದವು. ಸ್ವಾರ್ಥವು ಲೇಶವೂ ಇಲ್ಲದೆ ಪರೋಪಕಾರವನ್ನು ಮಾಡುವುದು ಹೀಗೆಂದು ಆ ಕಾಲಕ್ಕೆ ಅವಶ್ಯವಾಗಿ ಬೇಕಾಗಿದ್ದ ನೀತಿಯನ್ನು ಪ್ರತ್ಯಕ್ಷವಾಗಿ ಬೋಧಿಸುವುದಕ್ಕಾಗಿ ಪರಿಶ್ರಮ ಪಡುತ್ತಿದೆಯೋ ಎಂಬಂತೆ ಆ ವೃಕ್ಷರಾಜವು ಕಂಗೊಳಿಸುತ್ತಿದ್ದಿತು.

ಇಬ್ಬರೂ ಮರವನ್ನು ನೋಡಿದರು. ಫಲಗಳು ಅಪಕ್ವವಾಗಿದ್ದವು. ಪರಿಪಕ್ವವಾಗಿರಲಿಲ್ಲ. ಗುಂಡನು ಲಕ್ಷ್ಮಿಗೆ ಒಂದು ಫಲವನ್ನಾದರೂ ಕಿತ್ತುಕೊಡಬೇಕೆಂದು ಬಹು ಪರಿಶ್ರಮದಿಂದ ಅನ್ವೇಷಿಸಿದನು. ಮೇಲೆಲ್ಲಿಯೋ ಈಷತ್ಪಕ್ವವಾಗಿದ್ದ ಒಂದು ಫಲವು ಕಣ್ಣಿಗೆ ಬಿತ್ತು. ಲಕ್ಷ್ಮಿಯು ಎಷ್ಟು ಬೇಡವೆಂದರೂ ಕೇಳದೆ ಅದನ್ನು ಕೊಯ್ಯಲು ಗುಂಡನು ಮರವನ್ನೇರಿದನು. ಸ್ವರಾಜ್ಯ ರಕ್ಷಣೆಗಾಗಿ ಹೊಡೆದಾಡಲು ಪ್ರಯತ್ನಪಟ್ಟವಾನರ ಸೇನೆಯನ್ನು ಗೆದ್ದು ಆ ಫಲವನ್ನು ಕಷ್ಟದಿಂದ ಕಿತ್ತುಕೊಂಡು ಕೆಳಗಿಳಿದು ಬಂದು ಆದರದಿಂದ ಲಕ್ಷ್ಮಿಗೆ ಕೊಟ್ಟನು. ಲಕ್ಷ್ಮಿಯೂ ಅದನ್ನು ಆನಂದದಿಂದ ಪರಿಗ್ರಹಿಸಿ ತಿನ್ನು ಎಂದರೆ ಒಬ್ಬಳೇ ತಿನ್ನುವುದಿಲ್ಲವೆಂದು ಹಠಮಾಡಿದಳು. ಇಬ್ಬರೂ ತಿನ್ನಬೇಕೆಂದು ಗೊತ್ತಾಯಿತು. ಮರದ ಕೆಳಗೊಂದು ಬಂಡೆಯ ಮೇಲೆ ಕುಳಿತುಕೊಂಡರು. ಗುಂಡನು ಕಿಸಿಯಿಂದ ಚೂರಿಯನ್ನು ತೆಗೆದು ಹಣ್ಣನ್ನು ಹೆಚ್ಚಿ ಲಕ್ಷ್ಮಿಗೂ ಕೊಟ್ಟು ತಾನೂ ತಿನ್ನುತ್ತಿದ್ದನು. ಫಲದ ನೈಸರ್ಗಿಕ ಮಾಧುರ್ಯದ ಜತೆಗೆ ಪ್ರಿಯನು ಕಷ್ಟಪಟ್ಟು ಸ್ವಾರ್ಜಿತವಾಗಿ ಸಂಪಾದಿಸಿದ ಫಲವಾದುದರಿಂದ ಆ ಪ್ರೇಮಮಾಧುರ್ಯವೂ ಸೇರಿ ಫಲಾಹಾರವು ಕೇವಲ ಆಪ್ಯಾಯಮಾನವಾಗಿದ್ದಿತು. ಇದರ ಜತೆಗೆ ಸ್ವೇಚ್ಛಾವಿಹಾರದ ರುಚಿಯು ಸೇರಿ ಈ ಹುಡುಗರ ಆನಂದಕ್ಕೆ ಪಾರವೇ ಇರಲಿಲ್ಲ.

ಸೀತೆಗೆ ದೊಡ್ಡವರ ಜತೆಯಲ್ಲಿರಲು ಮನಸ್ಸು ನಿಲ್ಲಲಿಲ್ಲ. ಹೇಗೆ ಹೇಗೋ ತಪ್ಪಿಸಿಕೊಂಡು ಗೆಳತಿಯನ್ನೂ ಗೆಳಯನನ್ನೂ ಅರಸುತ್ತಾ ಅಲ್ಲಲ್ಲಿ ತಿರುಗಿಕೊಂಡು ಅಕಸ್ಮಿಕವಾಗಿ ಆ ಮರದ ಕಡೆಗೇ ಬರುತ್ತಿದ್ದಳು. ಮಾವಿನ ಹಣ್ಣಿನ ಕೊನೆಯ ಪಚ್ಚಡಿಯನ್ನು ಯಾರು ತಿನ್ನಬೇಕೆಂದು ವಿವಾದವು ನಡೆಯುತ್ತಿದ್ದಿತು. ನನಗೆ ನನಗೆ ಎಂದು ಸ್ವಾರ್ಥದ ವಿವಾದವಲ್ಲ. ನಿನಗೆ ನಿನಗೆ ಎಂದು ಪರಾರ್ಥವಾದ ಪ್ರೀತಿ ವಿವಾದ. ಕಡೆಗೆ ಗುಂಡನು ತನ್ನ ಹಠವನ್ನು ಸಾಧಿಸಬೇಕೆಂದು ವಾಟಿಯನ್ನು ಬೀಸಾಡಿ ಚೂರಿಯನ್ನಲ್ಲಿರಿಸಿ ಆ ಪಚ್ಚಡಿಯನ್ನು ಬಲಾತ್ಕಾರವಾಗಿ ಲಕ್ಷ್ಮಿಯ ಬಾಯಿಗೆ ತುರುಕಿದನು. ಲಕ್ಷ್ಮಿಯು ತನ್ನ ಹಠವು ಸೋತುದಕ್ಕೆ ವಿಷಾದ

ಪಡಲಲ್ಲ. ಗುಂಡನ ಆದರಕ್ಕೆ ಆನಂದ ಪಡುತ್ತಾ ಲಕ್ಷ್ಮಿಯು ಅದನ್ನು ತಿನ್ನ ಲಾರಂಭಿಸಿದಳು. ಸೀತೆಯು ಹಿಂದಿನಿಂದ ಈ ವಿನೋದವನ್ನು ನೋಡುತ್ತಾ ಬಂದು "ನನಗೋ" ಎಂದು ಕೈ ನೀಡಿದಳು. ನ್ಯಾಯವಾಗಿ ಮೂರು ಭಾಗವಾಗಬೇಕಾಗಿದ್ದುದು. ಇಬ್ಬರ ಪಾಲಾಗಿ ಹೋಗಿತ್ತು. ಮುಗಿದು ಹೋಯಿತಲ್ಲ ಎಂದಿಬ್ಬರೂ ಸಂಕೋಚದಿಂದ ಕೈ ಕೈ ಹಿಸಿಕಿಕೊಂಡರು. ಹೊಟ್ಟೆಗೆ ಹೋದುದನ್ನು ಹಿಂತಿರುಗಿ ತೆಗೆದು ಕೊಡುವುದು ಸಾಧ್ಯವಾಗಿದ್ದರೆ ಲಕ್ಷ್ಮಿಯು ಎಲ್ಲವನ್ನೂ ಮೊದಲು ತೆಗೆದು ಸೀತೆಗೆ ಕೊಟ್ಟುಬಿಡುತ್ತಿದ್ದಳು. ಲಕ್ಷ್ಮಿಯು "ಗುಂಡ! ಇನ್ನೊಂದು ಹಣ್ಣಿದ್ದರೆ ನೋಡು" ಎಂದಳು. ಗುಂಡನು ಎಷ್ಟೋ ಕಾಯಿಗಳನ್ನು ಕಿತ್ತು ಹೆಚ್ಚಿನೋಡಿದನು. ಯಾವುದೂ ಪಕ್ವವಾಗಿರಲಿಲ್ಲ. ಎಲ್ಲವೂ ಹುಳಿ. ಈ ಸಡಗರದಲ್ಲಿ ಗುಂಡನ ಎಡಗೈ ಬೆಟ್ಟಿಗೆ ಚೂರಿಯು ತಗಲಿ ಗಾಯವಾಯಿತು. ಲಕ್ಷ್ಮಿಯು ಕೂಡಲೇ ತನ್ನ ಸೆರಗನ್ನು ಹರಿದು ಒದ್ದೆಮಾಡಿ ಕೈಗೆ ಕಟ್ಟಿದಳು. ಸೀತೆಯು "ನನ್ನನ್ನು ಬಿಟ್ಟು ತಾನೊಬ್ಬಳೇ ತಿಂದಿದ್ದಾಳೆ ಇರಲಿ." ಎಂದು ಮನಸ್ಸಿನಲ್ಲಿಯೇ ದುಗುಡವನ್ನು ತಾಳಿದಳು.

## ೩ನೆಯ ಭಾಗ

ಹೊತ್ತಿಗೆ ಸರಿಯಾಗಿ ಊಟಕ್ಕೆ ಎಲೆಯನ್ನು ಹಾಕಿದರು. ಸೀತೆಯು ಫೌಜುದಾರನ ಮಗಳು, ಔತಣದ ಯಜಮಾನರ ಮಗಳು; ಎಲ್ಲರಿಗೂ ಆದರಣೀಯಳಾದ ಮಗಳು; ಅವಳಿಗೆ ಮೇಲೆ ಎಲೆಯಾಯಿತು. ಸೀತೆಯ ಜತೆಯಿಂದ ಲಕ್ಷ್ಮಿಗೆ ಮೇಲುಗಡೆ ಎಲೆಯು ಸಿಕ್ಕಿದ್ದರೆ ಸಿಕ್ಕಬೇಕಾಗಿತ್ತು. ಒಬ್ಬಳೇ ಮಾವಿನ ಹಣ್ಣನ್ನು ತಿಂದಳೆಂದು ಸೇಡು ತೀರಿಸಿಕೊಳ್ಳುವುದಕ್ಕಾಗಿ ಸೀತೆಯು ಲಕ್ಷ್ಮಿಗೆ ತನ್ನ ಹತ್ತಿರ ಎಲೆಯನ್ನು ಮಾಡಲಿಲ್ಲ. ಗುಂಡನ ಜತೆಯಲ್ಲೊಬ್ಬಳೇ ಮಾವಿನ ಹಣ್ಣನ್ನು ತಿಂದುದಕ್ಕೆ ಗುಂಡನ ಜತೆಯಲ್ಲಿ ತಾನೊಬ್ಬಳೇ ಕೂತು ಊಟಮಾಡಬೇಕೆಂದು ಗುಂಡನನ್ನು ಕರೆತಂದು ತನ್ನ ಜತೆಯಲ್ಲಿ ಕೂರಿಸಿಕೊಂಡಳು. ಲಕ್ಷ್ಮಿಯು ಎಷ್ಟು ಒಳ್ಳೆಯವಳಾದರೂ ಬಡವರ ಮಗಳು; ಒಂದು ಕೊನೆಯಲ್ಲಿ ಕೂತುಕೊಳ್ಳಬೇಕಾಯಿತು. ಹುಳಿಯ ಹಣ್ಣನ್ನು ತಿನ್ನುವವರಂತೆ ಮುಖವನ್ನು ಮಾಡಿಕೊಂಡು ಕೊನೆಯಲ್ಲಿಯೇ ಕುಳಿತುಕೊಂಡರೂ ಗುಂಡನು ಕಾಣುತ್ತಿರಲಿ ಎಂದು ಗುಂಡನ ಎದುರು ಪಂಕ್ತಿಯ ಕೊನೆಗೆ ಸೇರಿದಳು.

ಲಿಂಗಪ್ಪಾಜಿಯವರೂ ದೇವಪ್ಪಾಜಿಯವರೂ ಮುಂತಾದ ಮುಖ್ಯಸ್ಥರು ಇನ್ನೂ ಬಂದಿರಲಿಲ್ಲ. ಕರೆದರು. ಬಂದು ಸೀತೆಯ ಎದುರಾಗಿ ಕುಳಿತುಕೊಂಡರು. ಬಡಿಸುವುದಕ್ಕಾರಂಭವಾಯಿತು. ಅವಕಾಶವಾಯಿತೆಂದರೆ ವಾಗಿಂದ್ರಿಯಚಾಪಲ್ಯವು ಮನಸ್ವೀ ಪ್ರವರ್ತಿಸುವುದು ಸಹಜವಷ್ಟೆ. ಯಾವ ವಿಷಯವೂ ಸಿಗಲಿಲ್ಲ. ಗುಂಡನೂ ಸೀತೆಯೂ ಜತೆಯಲ್ಲಿ ಕುಳಿತಿರುವುದನ್ನು ಕಂಡರು. ಇಬ್ಬರೂ ಲಿಂಗಪ್ಪಾಜಿಯವರಿಗೆ ಸ್ವೀಯರೆಂದೂ ಗೊತ್ತು. ಹುಡುಗರಂತೂ ಹುಡುಗರು. ತಳವು ಹತ್ತಿರುವುದಿಲ್ಲ, ಮೇಲೆ ಸೀದಿರುವುದಿಲ್ಲ, ಬಾಯಿಗೆ ಬಂದಂತೆ ಹರಟುತ್ತಾರೆ. ಮನಸ್ಸಿಗೆ ಬಂದ ಆಟವಾಡುತ್ತಾರೆ; ಅಂದರೆ ದೊಡ್ಡವರಾಗಿ, ಲೋಕಾನುಭವವನ್ನರಿತು, ನಿಜವಾಗಿ ಕೆಲಸಮಾಡುವ, ವಯಸ್ಕರಾದವರು, ಪೂರ್ವಾಪರ ಪರಿಜ್ಞಾನವಿಲ್ಲದೆ ದೂರಾಲೋಚನೆಯಿಂದ ಮಾಡಬೇಕಾದ ದೊಡ್ಡ ದೊಡ್ಡ ಕೆಲಸಗಳ ವಿಷಯಗಳಲ್ಲಿ ಬಾಯಿಗೆ ಬಂದುದನ್ನು ಜಲ್ಪಿಸಿಬಿಟ್ಟರೆ ಅದನ್ನು ಹುಡುಗಾಟವೆನ್ನೋಣವೇ, ಮರುಳಾಟವೆನ್ನೋಣವೇ, ಪ್ರಮಾದಕಾರಣವೆನ್ನೋಣವೇ, ಉನ್ಮಾದ ಪ್ರವೃತ್ತಿಯನ್ನೋಣವೇ, ಏನೆನ್ನೋಣ? ಮದುವೆಯಂದರೆ ಹುಡುಗಾಟವಾಯಿತೇ? ಕೊಡುವವರೆಷ್ಟು ನೋಡಬೇಕು? ತಂದುಕೊಳ್ಳುವವರೆಷ್ಟು ವಿಚಾರಮಾಡಬೇಕು? ಹೆಣ್ಣು ಗಂಡು ಇಬ್ಬರೂ ಯೋಗ್ಯರಾಗಿ ಆತ್ಮೀಯರಾಗಿ ಒಂದು ಕಡೆ ಕೂತಿದ್ದ ಮಾತ್ರಕ್ಕೆ ಅವರಿಬ್ಬರಿಗೂ ಮದುವೆಯನ್ನು ಮಾಡಿಬಿಡಿ ಎಂದರೆ ಎಂಥಾ ಮಾತು?

ಹಾಗೆಯೇ ಅಂದು ಬಿಟ್ಟರು. ಅಲ್ಲಿಗೆ ಬಿಟ್ಟರೆ? ಈ ಲಗ್ನಕಾಲದಲ್ಲಿಯೇ ಆಗಿ ಹೋಗಲಿ ಎಂದರು. "ಮೃಷ್ಟಾನ್ನಮಿತರೇಜನಾಃ" ಎಂದರೆ ಮದುವೆಯ ವಿಷಯದಲ್ಲಿ ಇತರರು ಅಪೇಕ್ಷಿಸುವುದು ಮೃಷ್ಟಾನ್ನ ಭೋಜನವೆಂದು ಅನೂಚಾನವಾಗಿ ಬಂದಿರುವ ಆಕ್ಷೇಪವನ್ನು ತಾವೇ ಸಮರ್ಥಮಾಡಿ ಕೊಟ್ಟರು. ಅವರಂದರೆ, ಕನ್ಯಾಪಿತೃವಾದರೂ ಸುಮ್ಮನಿದ್ದರೇ? ಹಿಂದು ಮುಂದು ಪರ್ಯಾಲೋಚಿಸದೆ ಲಿಂಗಪ್ಪಾಜಿಯವರೂ "ಅವಶ್ಯವಾಗಿ ಆಗಲಿ" ಎಂದು ಬಿಟ್ಟರು. ಸರ್ವರೂ ಮದುವೆಯು ಗೊತ್ತಾಗಿಹೋಯಿತು ಎಂದೇ ತಿಳಿದುಕೊಂಡರು.

ಮನಸ್ಸಿದ್ದರೂ ಮದುವೆಯ ಮಾತಿಗೆ ಹುಡುಗರು ಸಂಕೋಚಪಡುವುದು ಸಹಜವಾದುದಷ್ಟೆ. ಸೀತೆಗೆ ಮನಸ್ಸಿನಲ್ಲೇನೋ ಪರಮಾನಂದವಾಯಿತು. ದೇವರ ದಯೆಯಿಂದ ಈ ವರನು ದೊರೆತರೆ ಕೃತಾರ್ಥಳಾದೆನೆಂದು ಅಂದುಕೊಂಡಳು. ಆದರೂ ಬಾಯಿಯಲ್ಲಿ ಆಡುವುದಕ್ಕುಂಟೆ? ಯಾರೋ ಬಾಯಿಹರುಕರು ಸೀತೆಯನ್ನು "ಏನಮ್ಮಾ! ಗುಂಡನನ್ನು ಮದುವೆಯಾಗುತ್ತೀಯಾ" ಎಂದು ಕೇಳಿಯೇ ಬಿಟ್ಟರು. "ಊಹ್ಞು ನಾನೊಲ್ಲೆ" ಎಂದು ಸಂಕೋಚದಿಂದ ಉತ್ತರವನ್ನೇನೋ ಹೇಳಿದಳು. ಆದರೆ ಮುಖಭಾವವು ನಿರ್ವಂಚನೆಯಿಂದ ಅಂತರ್ಗತವಾದ ಮನೋಭಾವವನ್ನು ಪ್ರಕಾಶಮಾಡಿತು. ಮತ್ತೊಬ್ಬ ರಸಿಕ ಪ್ರಲಾಪಿಯು ಅವಳನ್ನೇನು

ಕೇಳುತ್ತೀರಪ್ಪಾ ? ಸ್ವಯಂವರ ಮಾಡಿಕೊಂಡು ಗಂಡನ ಜತೆಯಲ್ಲಿ ಭೂಮಕ್ಕೆ ಕೂತಿದ್ದಾಳೆ. ಕಾಣುವುದಿಲ್ಲವೇ ? '' ಎಂದನು. ಎಲ್ಲರೂ ನಕ್ಕರು; ಸಂಕೋಚ ದಿಂದ ಸೀತೆಯು ಗುಂಡನ ಜತೆಯನ್ನು ಬಿಟ್ಟು ಸ್ವಲ್ಪ ಆ ಕಡೆ ಒತ್ತಿದಳು. ಗುಂಡನ ಮನಸ್ಸೂ ಆ ವಯೋಧರ್ಮಕ್ಕನುಗುಣವಾಗಿ ಲಕ್ಷ್ಮಿಯಮೇಲೆ ನೆಲೆಸಿತ್ತು. ಅವನ ಅಂತರ್ಯವೇ ಬೇರೆಯಾಗಿದ್ದಿತು. ಅವನೂ ಸೀತೆಯ ಕಡೆಯಿಂದ ಸ್ವಲ್ಪ ಒತ್ತಿದನು. ಅಂತೂ ಗುಂಡನ ಜತೆಯಲ್ಲಿ ಧಾರಾಳವಾಗಿ ಮಾತನಾಡುತ್ತಾ ಊಟಮಾಡಿ ಲಕ್ಷ್ಮಿಯ ಸೇಡು ತೀರಿಸಿಕೊಳ್ಳುತ್ತೇನೆಂದು ಸೀತೆಯು ಮಾಡಿದ್ದ ಸಂಕಲ್ಪಕ್ಕೆ ದೊಡ್ಡ ಪ್ರತಿ ಬಂಧಕವು ಉಪಸ್ಥಿತವಾಯಿತು. ಇಬ್ಬರಲ್ಲೊಬ್ಬರು ಎದ್ದು ಬೇರೆಯಕಡೆ ಕೂತು ಕೊಳ್ಳಬೇಕೆನ್ನಿಸಿತು. ಸೀತೆಯು ಹುಡುಗಿ; ಏಳಲಿಲ್ಲ; ಗುಂಡನು ಎದ್ದರೆ ಜನರು ಆಡಿದ ಮಾತು ನಿಜವೆಂದು ತಾನೇ ನಿದರ್ಶನ ಮಾಡಿಕೊಟ್ಟಂತಾಗುವುದಲ್ಲಾ ಎಂದು ಏಳುವುದಕ್ಕಿಲ್ಲದೆ ಕೂತಿದ್ದನು.

ಲಿಂಗಪ್ಪಾಜಿಯವರ ಅಕ್ಕನ ಮಗ ನಂಜಪ್ಪ; ಇವನಿಗೆ ಹದಿನೇಳಾಗಿತ್ತು. ಗಟ್ಟಿಮುಟ್ಟಾಗಿ ಬೆಳೆದು ಜಟ್ಟಿಯಾಗಿದ್ದನು. ಓದುಬರಹದಲ್ಲಿ ಉಂಡಾಡಿಗಭಟ್ಟ; ಬುದ್ಧಿಕುಶಲತೆಯಲ್ಲಿ ವನಿಕೆಯ ಮುಂಡಿ; ಭೋಜನದಲ್ಲಿ ಬಕಾಸುರ; ಕೋಪ ದಲ್ಲಿ ದೂರ್ವಾಸ; ಶೌರ್ಯದಲ್ಲಿ ಉತ್ತರಕುಮಾರ; ಆಳಿಗೇನೋ ಆಕಾರವಾಗಿ ದ್ದನು. ಇವನ ತಾಯಿತಂದೆಗಳಿಗೆ ಸೋದರ ಸಂಬಂಧವನ್ನೇ ಮಾಡಬೇಕೆಂದು ಸೀತೆಯು ಹುಟ್ಟಿದಾಗಿನಿಂದಲೂ ಅಭಿಲಾಷೆಯಿತ್ತು; ಕೊಟ್ಟೂಕೊಡುತ್ತಾರೆಂದು ತಿಳಿದುಕೊಂಡಿದ್ದರು. ಇದಕ್ಕಾಗಿ ಆಗಾಗ ಸೋದರಮಾವನ ಮನೆಗೆ ಕಳುಹಿಸು ತ್ತಿದ್ದರು. ಅದೇ ಪ್ರಕಾರ ನಂಜಪ್ಪನ ಸವಾರಿ ಹೊತ್ತಿಗೆ ಸರಿಯಾಗಿ ಚಿತ್ತೈಸಿತು. ಲಿಂಗಪ್ಪಾಜಿಯುವರ ಸೋದರಳಿಯ; ಇದರಮೇಲೆ ಅಕ್ಕಮ್ಮಣ್ಣಿಯವರ ಪ್ರಕೃತಿ ಬಹು ಸೂಕ್ಷ್ಮವಾದುದು. ಮಗನಿಗೆ ಮೇಲೆ ಎಲೆಯನ್ನು ಮಾಡಿ ಕೂರಿಸಲಿಲ್ಲ ವೆಂದರೆ ಅದೇ ಒಂದು ರಂಪವಾಗಿಹೋಗುತ್ತೆಂದು ಗೊತ್ತು. ಮೇಲೆ ಎಲೆಯು ಯಾವುದೂ ಬಿಟ್ಟಿರಲಿಲ್ಲ. ಯಾರೂ ತಾವಾಗಿ ಏಳಲಿಲ್ಲ. ಏಳಿ ಎನ್ನುವ ವಿಷ ಯವೂ ಅಲ್ಲ. ಒಳ್ಳೆಯ ಸಂಧಿಯೊದಗಿತು. ದೇವಪ್ಪಾಜಿಯವರು ಏಳುವುದಕ್ಕೆ ಹೋದರು. ಅಷ್ಟು ಮರ್ಯಾದೆಗೆ ಅವಕಾಶವಿಲ್ಲವೆಂದು ಲಿಂಗಪ್ಪಾಜಿಯವರು ಅವರನ್ನು ತಡೆದುಬಿಟ್ಟರು. ನಂಜಪ್ಪನು ಯಾರಾದರೂ ಏಳುತ್ತಾರೆಂದು ಸುಮ್ಮನೆ ನಿಂತುಕೊಂಡನು. ದೇವಪ್ಪಾಜಿಯವರು ಮಗನನ್ನು '' ಗುಂಡಾ! ನೀನು ಎದ್ದು ಆ ಕಡೆ ಕೂತುಕೊಳ್ಳುತ್ತೀಯಾ ? ನಂಜಪ್ಪಾಜಿಗೆ ಎಲೆಯಿಲ್ಲ '' ಎಂದರು. ಯಾರಾ ದರೂ ಏಳಲೇಬೇಕಾಗಿತ್ತು. ಲಿಂಗಪ್ಪಾಜಿಯವರು ಸುಮ್ಮನಿದ್ದರು. ಗುಂಡನೆದ್ದೇ ಬಿಟ್ಟನು. ಆಗತಾನೆ ಸ್ವಯಂವರದ ಮಾತು ನಡೆದಿತ್ತಷ್ಟೆ. ಸೀತೆಗೆ ಗುಂಡನನ್ನು ತಡೆಯಲು ಮನಸ್ಸಾದರೂ ಬಾಯಿ ಬರಲಿಲ್ಲ. ನಂಜಪ್ಪನು ಗುಂಡನು ಕೂತಿದ್ದ

ಸ್ಥಳದಲ್ಲಿ ಕುಳಿತುಕೊಂಡನು. ಗುಂಡನು ದೂರ ಹೋಗಿ ಕೊನೆಯಲ್ಲಿ ಒಬ್ಬಳೇ ಖಿನ್ನಳಾಗಿ ಕುಳಿತಿದ್ದ ಲಕ್ಷ್ಮಿಯ ಪಕ್ಕದಲ್ಲಿ ಬಿಟ್ಟಿದ್ದ ಎಲೆಯಮುಂದೆ ಕುಳಿತುಕೊಂಡನು. ಸೀತೆಗೆ ಗುಂಡನ ಜತೆ ತಪ್ಪಿದ್ದಕ್ಕೂ ನಂಜಪ್ಪನ ಜತೆ ಆದುದಕ್ಕೂ ಊಟವೇ ರುಚಿಸಲಿಲ್ಲ. ಸೀತೆಗೂ ಗುಂಡನಿಗೂ ಮದುವೆಯು ನಿಷ್ಕರ್ಷೆಯಾದುದಕ್ಕೆ ಲಕ್ಷ್ಮಿಗೂ ಊಟವು ಸೊಗಸಲಿಲ್ಲ. ಗುಂಡನಿಗೆ ಇಷ್ಟು ಜನರಲ್ಲಿ ತನ್ನನ್ನೆಬ್ಬಿಸಿಬಿಟ್ಟರಲ್ಲ, ಯಾರೂ ಬೇಡವೆಂದು ಉಪಚಾರಕ್ಕೂ ಅನ್ನಲಿಲ್ಲವಲ್ಲ, ಎಂದು ಅಪಮಾನವಾಗಿ ಊಟವು ಸೇರಲಿಲ್ಲ.

ಊಟವಾಯಿತು; ಸಂಗೀತ ಕಛೇರಿಯು ಸೇರಿತು. ದೊಡ್ಡ ರಸಿಕ ಶಿಖಾಮಣಿಯಂತೆ ನಂಜಪ್ಪನು ಅಗ್ರಾಸನವನ್ನಲಂಕರಿಸಿದನು. ಗುಂಡನಿಗೆ ಬೇಕಾಗಲಿಲ್ಲ. ಒಬ್ಬನೇ ಅಲ್ಲಲ್ಲಿ ಸುಳಿದಾಡುತ್ತಾ ಪೃಥಕ್ಕಾಗಿದ್ದ ಪುಷ್ಕರಿಣಿಯ ಬಳಿಗೆ ಬಂದನು. ಸಲಿಲದಿಂದ ಕಮಲವೂ ಕಮಲದಿಂದ ಸಲಿಲವೂ ಇವೆರಡರಿಂದಲೂ ಸರಸ್ಸೂ ವಿಭ್ರಾಜಮಾನವಾಗಿದ್ದವು. ಅದರ ಮೆಟ್ಟಲಿನ ಮೇಲೆ ಕುಳಿತುಕೊಂಡನು. ಪುಷ್ಕರಿಣಿಯ ಜಲದಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದ ಹಂಸಕಾರಂಡವಾದ್ಯಂಡಜಗಳ ಹರ್ಷಪ್ರವೃತ್ತಿಯು ಮನೋಜ್ಞವಾಗಿದ್ದಿತು. ಗುಂಡನಿಗೆ ವಯಸ್ಸು ಚಿಕ್ಕದೆಂದರೆ ಶಿಶುವಲ್ಲ; ದೊಡ್ಡದೆನ್ನುವುದಕ್ಕೆ ಪ್ರೌಢವಲ್ಲ; ಮನಸ್ಸಿನಲ್ಲಿ ದೊಡ್ಡದೊಡ್ಡ ಭಾವಗಳು ಉತ್ಪನ್ನವಾಗುವುದಕ್ಕೆ ಅವಕಾಶವಿಲ್ಲ. ಆಗತಾನೆ ತನಗೆ ಅನುಭವಕ್ಕೆ ಬಂದಿದ್ದ ವಿಷಯದಲ್ಲಿ ನಿಜವಾದ ನೀತಿಯು ಮನಸ್ಸಿನಲ್ಲಿ ಹೊಳೆಯಿತು. "ಅಹನ್ಯಹನಿಯಾಗಿ ಕಾಲಕ್ಷೇಪವನ್ನು ಮಾಡುವ ಈ ಪತತ್ರಿಯುಗ್ಮಗಳ ಸುಖಸೌಹಾರ್ದವು ಎಷ್ಟು ನೈಜವಾಗಿಯೂ ಆಪ್ಯಾಯಮಾನವಾಗಿಯೂ ಆದರ್ಶ ಸ್ವರೂಪವಾಗಿಯೂ ಇದೆ. ಸುಖಕ್ಕೆ ಸಂಪತ್ತು ಕಾರಣವಲ್ಲ. ಅನ್ಯೋನ್ಯತೆಯೇ ಮೂಲಾಧಾರ." ಎಂದು ಆ ವಯಸ್ಸಿಗೆ ತಕ್ಕಮಟ್ಟಿಗೆ ಭಾಸವಾಯಿತು. "ಸೀತೆಯು ದೊಡ್ಡವರ ಮನೆಯ ಹುಡುಗಿ. ಅವಳ ತಂದೆಗೆ ನಮ್ಮ ತಂದೆ ಅಧೀನರು. ಅವರ ಭಾಗ್ಯಕ್ಕೆ ನಾವು ಸರಿತೂಗುವುದಿಲ್ಲ. ಅವರ ಪದವಿಗೆ ನಾವು ಸಮಾನರಲ್ಲ. ನಂಜಪ್ಪ ಬಂದೆನೆಂದು ನಾನು ಏಳಬೇಕಾಯಿತು. ಎಂದಿದ್ದರೂ ಇದೇ ಗತಿ. ಸೀತೆಯನ್ನು ಮದುವೆಯಾದರೆ ಬಂದ ಅಪಮಾನವೆಲ್ಲವನ್ನೂ ಸಹಿಸಲು ಸಿದ್ಧವಾಗಿರಬೇಕು. ಲಕ್ಷ್ಮಿಯೇ ಲಕ್ಷ್ಮಿ; ಅವಳ ಕೈಹಿಡಿದರೆ........" ಎಂದೂ ವ್ಯಕ್ತಾವ್ಯಕ್ತವಾದ ಆಲೋಚನಾತರಂಗ ಪರಂಪರೆಯು ಮೆಲ್ಲಗೆದ್ದು ಚಲಿಸುತ್ತಿದ್ದಿತು. ಲಕ್ಷ್ಮಿಗೆ ತನ್ನ ಹೆಸರು ಕೇಳಿದಂತಾಗಿ ಆನಂದದಿಂದ ಹಿಂದುಗಡೆಯಿಂದ ಮೆಲ್ಲಗೆ ಬಂದು ಗುಂಡನ ಎರಡು ಕಣ್ಣುಗಳನ್ನೂ ಮುಚ್ಚಿದಳು.

ಸೀತೆಗೆ ಲಕ್ಷ್ಮಿಯ ಮೇಲೆ ಕೋಪಕ್ಕೆ ಒಂದಕ್ಕೆರಡು ಕಾರಣವಾಯಿತು. ಗುಂಡನ ಜತೆಯಲ್ಲಿ ಮಾವಿನಹಣ್ಣನ್ನು ತಿಂದುದೊಂದು; ಊಟಮಾಡಿದುದೊಂದು;

ಊಟವಾದಮೇಲೆ ಲಕ್ಷ್ಮಿಯನ್ನು ಕಂಡರೂ ಬೇಕೆಂದು ಮಾತನಾಡಿಸದೆ ಮುಖವನ್ನು ತಿರುಗಿಸಿಕೊಂಡಳು. ಲಕ್ಷ್ಮಿಗೆ ಜತೆಯಿರಲಿಲ್ಲ. ಗುಂಡನ ಮದುವೆಯು ಗೊತ್ತಾದುದೊಂದು ವ್ಯಸನ. ಊಟವು ಸೇರದೆ ಹಸಿವಿನ ಕ್ಲೇಶವು ಬೇರೆ; ಮನಸ್ಸಿಗೆ ಚಿಂತೆಯಾಗಿ ಒಬ್ಬಳೇ ಅಲೆಯುತ್ತಾ, ಅಳು ಬಂದಾಗ ಅಳುತ್ತಾ, ದಾರಿಯು ಕಾಣದೆ ಎಡವುತ್ತಾ, ತಪ್ಪುಹೆಜ್ಜೆಯಿಟ್ಟು ಮುಗ್ಗರಿಸುತ್ತಾ, ಕಾಡಿನಲ್ಲಿ ದಾರಿ ತಪ್ಪಿ ಏಕಾಕಿನಿಯಾಗಿ ಅಲೆಯುವವಳಂತೆ ಎಲ್ಲೆಲ್ಲಿಯೋ ತಿರುಗಿಕೊಂಡು ಅದೇ ಪುಷ್ಕರಣಿಯ ಬಳಿಗೆ ಬಂದಳು. ಗುಂಡನು ವಿಷಣ್ಣನಾಗಿ ಕುಳಿತಿದ್ದನು. ಎಂದಿನಂತೆ ಬೇಗ ಹತ್ತಿರಕ್ಕೆ ಹೋಗಲಿಲ್ಲ. ಏನೋ ಹಿಂದಕ್ಕೆಳೆದಂತಾಯಿತು; ಸುಮ್ಮನೆ ನಿಂತುಕೊಂಡಳು. ಗುಂಡನು "ಲಕ್ಷ್ಮಿಯೇ ಲಕ್ಷ್ಮಿ" ಎಂದುದು ಅಸ್ಪಷ್ಟವಾಗಿ ಕೇಳಿಸಿತು. ಬಾಲ್ಯ; ಆ ಅವಸ್ಥೆಯಲ್ಲಿ ಯಾವ ಮನೋಭಾವವೂ ಸ್ಫುಟವಾಗಿಯೂ ಸ್ಥಿರವಾಗಿಯೂ ಇರುವುದಿಲ್ಲ. ಕ್ಷಣಚಿತ್ತತ್ವವೆಂದರೆ ಬಾಲ್ಯಾವಸ್ಥೆಗೆ ಬಂದುದು. ಮುಂದೇನೆನ್ನುವನೆಂದು ತಾಳಿ ಕೇಳಬೇಕೆಂಬಷ್ಟು ತಾಳ್ಮೆಯಿಲ್ಲ; ಬಾಲಭಾವವು ಪ್ರಸ್ಫುರಿತವಾಯಿತು. "ಲಕ್ಷ್ಮಿಯೇ ಲಕ್ಷ್ಮಿ" ಇನ್ನೇನು ಬೇಕು? ವಿಷಾದವೆಲ್ಲವೂ ಹರಿದುಹೋಯಿತು. ಮನಸ್ಸು ಪ್ರಸನ್ನವಾಯಿತು. "ಗುಂಡ ನನ್ನ ಗುಂಡ" ಎಂದು ಮನಸ್ಸಿನಲ್ಲಿ ಮಾಡಿಕೊಂಡು ಹಿಂದುಗಡೆಯಿಂದ ಮೆಲ್ಲಗೆ ಸಮೀಪಕ್ಕೆ ಹೋಗಿ ಎರಡು ಕೈಗಳಿಂದಲೂ ಗುಂಡನ ಕಣ್ಣುಗಳನ್ನು ಮುಚ್ಚಿದಳು.

ಗುಂಡನಿಗೆ ಸೀತೆಯೆಂದು ಭ್ರಮೆಯಾಯಿತು. ಸ್ವಲ್ಪ ಬಿರುಸಾಗಿ "ಕೈಬಿಡು" ಎಂದನು. ಲಕ್ಷ್ಮಿಗೆ ಅಷ್ಟು ತಡೆಯಲಿಲ್ಲ. "ಗುಂಡನು ನನ್ನ ಗುಂಡನಲ್ಲ; ಸೀತೆಯ ಗುಂಡ" ಎಂದು ತೋರಿತು. ಆ ಕೂಡಲೇ ಗುಂಡನ ಕಣ್ಣುಗಳನ್ನು ಬಲವಾಗಿ ಮುಚ್ಚಿದ್ದ ಕೈಗಳು ಶಿಥಿಲವಾಗಿಹೋದವು. ಲಕ್ಷ್ಮಿಯ ಸುಂದರವಾದ ನೇತ್ರಗಳಲ್ಲಿ ನೀರು ತುಂಬಿಕೊಂಡಿತು. ಗುಂಡನು ದುಗುಡದಿಂದ ಹಿಂತಿರುಗಿದನು. ಸೀತೆಯಲ್ಲ, ಲಕ್ಷ್ಮಿ; "ಲಕ್ಷ್ಮಿಯೇ, ನನ್ನ ಲಕ್ಷ್ಮಿಯೇ! ಕಾಣಲಿಲ್ಲ, ಅಳಬೇಡ, ಬಾ" ಎಂದು ಕೈಹಿಡಿದು ಪಕ್ಕದಲ್ಲಿ ಕೂರಿಸಿಕೊಂಡು ಕಣ್ಣೊರಸಿದನು. "ಲಕ್ಷ್ಮಿಯೆ? ನನ್ನ ಲಕ್ಷ್ಮಿಯೇ?........ಹಾಗಾದರೆ ಗುಂಡನು ನನ್ನಮೇಲೆ ಕೋಪಿಸಿಕೊಳ್ಳಲಿಲ್ಲ. ಯಾರೋ ಎಂದು ಕೋಪಿಸಿಕೊಂಡ. ಹಿಂದಿನಿಂದ ಬಂದುದು ನನ್ನದೇ ತಪ್ಪಾಯಿತು" ಎಂದು ಲಕ್ಷ್ಮಿಗೆ ಮತ್ತೆ ಹರ್ಷವಾಯಿತು. ಮಕ್ಕಳ ಸುಖದುಃಖಗಳೇ ಹೀಗೆ. ಅಲ್ಪದಿಂದ ಸಂತುಷ್ಟಿ; ಅಲ್ಪದಿಂದ ಸಂತಾಪ; ಅವರ ಸುಖವೂ ಕ್ಷಣಿಕವಾದುದು; ಅವರ ದುಃಖವೂ ಕ್ಷಣಿಕವಾದುದು; ಹೆಸರಿಗಲ್ಲ, ನಿಜವಾಗಿಯೂ "ಸರ್ವಂ ಕ್ಷಣಿಕಂ" ಅಂದರೆ ಪ್ರಾಪಂಚಿಕ ವಿದ್ಯಮಾನಗಳೆಲ್ಲವೂ ಕ್ಷಣಿಕವಾದುವು. ಅವುಗಳಿಗೆ ಪರಸ್ಪರ ಕಾರ್ಯಕಾರಣ ಸಂಬಂಧವಿಲ್ಲ ಎಂಬ ಬೌದ್ಧ ಸಿದ್ಧಾಂತವನ್ನು ತ್ರಿಕರಣಾತ್ಮಿಕವಾಗಿ ಅವಲಂಬಿಸಿ ಅನುಸರಿಸುವವರು ಮಕ್ಕಳು.

ಗುಂಡ—ಇಲ್ಲೇಕೆ ಬಂದೆ ಲಕ್ಷ್ಮೀ ?

ಲಕ್ಷ್ಮಿ—ಇನ್ನೆಲ್ಲಿಗೆ ಹೋಗಲಿ ?

ಗುಂಡ—ಯಾತಕ್ಕೆ, ನಿನ್ನ ಗೆಳತಿಯಿಲ್ಲವೇ ?

ಲಕ್ಷ್ಮಿ—ಸೀತೆಗೆ ನನ್ನ ಮೇಲೆ ಕೋಪ ಬಂದಿದೆ.

ಗುಂಡ—ಏತಕ್ಕೋ ?

ಲಕ್ಷ್ಮಿ—ಕಾಣೆ.

ಇಬ್ಬರೂ ಸುಮ್ಮನಾದರು. ಗುಂಡನು ಸೀತೆಯನ್ನು ವಿಚಾರಿಸಿದುದಕ್ಕೆ ಲಕ್ಷ್ಮಿಗೆ ಬೇರೆ ಅರ್ಥವಾಯಿತು. ಮತ್ತೆ ಖಿನ್ನಳಾದಳು; ಕಣ್ಣಿನಲ್ಲಿ ನೀರು ಬಂತು. ಗುಂಡನು ಸುಮ್ಮನೆ ಕಣ್ಣೀರೊರೆಸಿದನು. ಒರೆಸಿದಷ್ಟೂ ಮತ್ತಷ್ಟು ಬಂತು. ಅದೇನು ಹೊರಗಿನ ಪ್ರೀತಿಗೆ ಬಂದ ನೀರಲ್ಲ, ಕೃತ್ರಿಮ ಪ್ರಕೃತಿ ಪ್ರವೃತ್ತಿಯ ಅಶ್ರುಪಾತವಲ್ಲ. ಅವಸ್ಥಾನಗುಣವಾಗಿ ಅಂತರ್ಹಿತವಾಗಿದ್ದರೂ, ದೇಹಧರ್ಮ ಸಾಮಾನ್ಯವಾದ ಪ್ರೇಮ ಪಿಪಾಸೆಯಿಂದುತ್ಪನ್ನವಾದ ನೈಜವಾದ ಉಷ್ಣೋದಕ; ಉಕ್ಕಿತೆಂದರೆ ಇನ್ನೇನಾದೀತು?

ಗುಂಡ—(ನೋಡಿ ಸಹಾನುಭೂತಿಯಿಂದ ಮೆಲ್ಲಗೆ) ಲಕ್ಷ್ಮೀ !

ಲಕ್ಷ್ಮಿ—ಗುಂಡು !

ಯಾವುದೋ ಬಲವತ್ತರವಾದ ಆಕರ್ಷಣ ಶಕ್ತಿಯು ಇಬ್ಬರನ್ನೂ ಸೇರಿಸಿತು. ಒಬ್ಬರ ಹೆಗಲಿನ ಮೇಲೊಬ್ಬರು ಕೈಹಾಕಿಕೊಂಡು ಒತ್ತಿ ಕೂತುಕೊಂಡರು.

ಗುಂಡ—ಲಕ್ಷ್ಮೀ ! ಇದೇಕೆ ಅಳುತ್ತೀ ?

ಲಕ್ಷ್ಮಿ—ನನಗೆ ಯಾರೂ ಜತೆಯಿಲ್ಲ ಅಂತ.

ಗುಂಡ—ಯಾರೂ ಇಲ್ಲದಿದ್ದರೆ, ನಾನಿದ್ದೇನಲ್ಲ.

ಲಕ್ಷ್ಮಿಯು ಆನಂದಪರವಶಳಾದಳು. ಗುಂಡನ ಎರಡು ಭುಜಗಳಮೇಲೂ ಕೈ ಇಟ್ಟಳು. ರುಜುದೃಷ್ಟಿಯಿಂದಲೇ ಅವನ ಮುಖಾರವಿಂದವನ್ನು ನಿರೀಕ್ಷಿಸಿದಳು.

ಲಕ್ಷ್ಮಿ—ಹಾಗಾದರೆ ಸೀತೆಯ ಜತೆಗೆ ನನ್ನನ್ನೂ ಮದುವೆ ಮಾಡಿಕೊಳ್ಳು ತ್ತೀಯಾ ?

ಗುಂಡ—ಮದುವೆಗೆ ನಾನು ಗೊತ್ತಲ್ಲ, ಲಕ್ಷ್ಮೀ, ದೊಡ್ಡವರು ಗೊತ್ತು. ನಾನೇ ಗೋತ್ತಾದರೆ ನಿನ್ನನ್ನೇ ನಾನು ಮಾಡಿಕೊಳ್ಳುವುದು. ದೊಡ್ಡವರು ಬೇರೆ ಮಾಡಿದರೆ ನಾನೇನು ಮಾಡಲಿ ?

ಲಕ್ಷ್ಮಿ—(ತಲೆಯನ್ನಾಡಿಸುತ್ತ) ದೊಡ್ಡವರು ಸೀತೆಯನ್ನು ಮಾಡಲಿ; ನೀನು ನನ್ನನ್ನು ಮಾಡಿಕೋ.

ಗುಂಡ—( ನಗುತ್ತಾ ಛಲದಿಂದ ) ಯಾತಕ್ಕೆ. ನೀವಿಬ್ಬರೂ ಜಗಳವಾಡಿ ಅಂತಲೊ ?

ಲಕ್ಷ್ಮಿ—(ತಲೆಯನ್ನಾಡಿಸುತ್ತಾ) ಇಲ್ಲ, ಗುಂಡ! ಖಂಡಿತವಾಗಿಯೂ ಇಲ್ಲ. ಸೀತೆಯ ಸಂಗಡ ನಾನು ಜಗಳವಾಡುವುದಿಲ್ಲ. ಅವಳು ಬೈದರೆ ಸುಮ್ಮನಿರುತ್ತೇನೆ. ಹೊಡದರೆ ಹೊಡೆಸಿಕೊಳ್ಳುತ್ತೇನೆ. ಅವಳು ಹೇಳಿದ ಕೆಲಸ ಮಾಡುತ್ತೇನೆ. ಇನ್ನು ಮೇಲೆ ಮಾವಿನ ಹಣ್ಣು ಅವಳಿಗೆ ಕೊಡದೆ ತಿನ್ನುವುದಿಲ್ಲ, ನಮ್ಮಮ್ಮ ಏನು ತಿಂಡಿ ಕೊಟ್ಟರೂ ತಂದು ನಿಮ್ಮಿಬ್ಬರಿಗೂ ಕೊಡುತ್ತೇನೆ. ನಿಮ್ಮಿಬ್ಬರ ಕಾಲಿಗೆ ಮುಳ್ಳು ಹೊಕ್ಕರೆ ಮೆಲ್ಲಗೆ ತೆಗೆಯುತ್ತೇನೆ. ನಿಮಗೆ ಗಾಯವಾದರೆ ನನ್ನ ಸೆರಗು ಹರಿದು ಒದ್ದೆಯ ಬಟ್ಟೆಯನ್ನು ಕಟ್ಟುತ್ತೇನೆ. ನೀನು ಹೊರಟು ಹೋದರೆ ಅಳುತ್ತೇನೆ. ಹಿಂತಿರುಗಿ ಬಂದರೆ ನಗುತ್ತೇನೆ. ತಂಟೆ ಮಾಡುವುದಿಲ್ಲ. ಮಾಡಿಕೊಳ್ಳುತ್ತೀಯಾ?

ಗುಂಡ—ಆಗಲಿ ಮಾಡಿಕೊಳ್ಳುತ್ತೇನೆ; ದೊಡ್ಡವರು ಬೇಡವೆಂದರೆ ನನ್ನ ಮೇಲಿಲ್ಲ.

ಲಕ್ಷ್ಮಿ—ಹಾಗೆಯೇ ಆಗಲಿ.

ಅಲ್ಲಿಗೆ ಆನಂದವಾಯಿತು; ಮುಕ್ತಬ್ರಹ್ಮರಾದರು. ಆಳದಲ್ಲಿದ್ದ ದೊಡ್ಡ ಕಮಲವನ್ನು ಕಿತ್ತು ಕೊಡುತ್ತೇನೆಂದು ಗುಂಡನು ನೀರಿಗಿಳಿದನು. ದಡದಲ್ಲಿರುವ ಸಣ್ಣ ಕಮಲವೇ ಸಾಕು, ಆಳಕ್ಕಿಳಿಯಬೇಡವೆಂದು ಲಕ್ಷ್ಮಿಯು ತಡೆದುಬಿಟ್ಟಳು. ದಡದಲ್ಲಿದ್ದ ಸಣ್ಣ ಕಮಲವನ್ನೇ ಕಿತ್ತು ಲಕ್ಷ್ಮಿಗೆ ಮುಡಿಸಿದನು. ಸೀತೆಗೊಂದು ಕಿತ್ತುಕೋ ಎಂದಳು ಏನೂ ಬೇಡವೆಂದನು. ನಾನಾದರೂ ಕಿತ್ತುಕೊಳ್ಳುತ್ತೇನೆಂದಳು. ಅದೂ ಬೇಡವೆಂದನು. ಒಂದು ಚಿಕ್ಕ ತಾವರೆಯ ಹೂವನ್ನಾದರೂ ಕಿತ್ತುಕೊಳ್ಳುತ್ತೇನೆಂದಳು. ಇದೇಯೋ ನೀನು ಹೇಳಿದಹಾಗೆ ಕೇಳುವುದು ಅಂದನು ಅಲ್ಲಿಗೆ ಅವಳ ಅಭಿಲಾಷೆಯು ಪರಿಸಮಾಪ್ತಿಯಾಯಿತು. ಇಬ್ಬರೂ ವಿಸ್ರಬ್ಧಾಲಾಪಗಳನ್ನಾಡುತ್ತಾ ಅಲ್ಲಲ್ಲಿ ತಿರುಗಿಕೊಂಡು ಸಾಯಂಕಾಲಕ್ಕೆ ಹಿಂತಿರುಗಿಬಂದರು. ಲಕ್ಷ್ಮಿಯು ಮುಡಿದಿದ್ದ ಕಮಲವು ಗುಂಡನು ಕಿತ್ತು ಮುಡಿಸಿದುದೆಂದು ಸೀತೆಗೆ ತಿಳಿದು ಲಕ್ಷ್ಮಿಯ ಮೇಲಿನ ಮುಳಿಸಿಗೆ ಮೂರನೆಯ ಕಾರಣವಾಯಿತು.

# ೪ನೆಯ ಭಾಗ

ಲಿಂಗಪ್ಪಾಜಿಯವರು ಮಗಳನ್ನು ಗುಂಡನಿಗೆ ಕೊಡುತ್ತೇನೆಂದುದು ಅವರ ಅಕ್ಕನವರಿಗೆ ಮುಟ್ಟಿತು. ಅವರಿದ್ದುದು ತೆರಕಣಾಂಬಿಯಲ್ಲಿ. ಅಷ್ಟು ಶ್ರೀಮಂತರಲ್ಲ. ಸೀತೆಯನ್ನು ಸೋದರಳಿಯನಿಗೆ ಕೊಟ್ಟೇ ಕೊಡುತ್ತಾರೆ. ಆ ಭಾಗ್ಯವೆಲ್ಲವೂ ನಮಗೇ ಆಗುತ್ತೆ ಎಂದು ತಮ್ಮನ ಮನೆಯ ದೋಸೆಗೆ ಅಕ್ಕಮ್ಮಣ್ಣಿಯವರು ಕಾಯಿಹಾಲನ್ನು ಕಾಯಿಸಿಟ್ಟು ಕೊಂಡಿದ್ದರು. ಗುಂಡನಿಗೆ ಕೊಡುವ ಮಾತು ಕಿವಿಗೆ ಬೀಳುತ್ತಲೇ ಇವರ ಆಲೋತ್ತರಕ್ಕೆ ಭಂಗ ಬರುವ ಸಂಭವವು ಒದಗಿತು. ಆಸೆಯಾದರೂ ಬಿಟ್ಟರು. ತಮ್ಮನ್ನು ಬಿಟ್ಟು ಮತ್ತೊಬ್ಬರಿಗೆ ಕೊಟ್ಟರೆ ಬಡಾಯಿಗೆ ಕಡಿಮೆಯಾಗುವುದಲ್ಲ; ಅದನ್ನು ಸಹಿಸುವುದೀಗ ಅಸಾಧ್ಯವಾಯಿತು; ಹೇಗಾದರೂ ಮಾಡಿ ಈ ಹೆಣ್ಣನ್ನೇ ತಂದುಕೊಳ್ಳಬೇಕು ಎಂದು ಸಂಕಲ್ಪವನ್ನು ಮಾಡಿಕೊಂಡು ಅಕ್ಕನೂ ಭಾವನೂ ಹೊರಟು ಶ್ರೀರಂಗ ಪಟ್ಟಣಕ್ಕೆ ಬಂದರು.

ಲಿಂಗಪ್ಪಾಜಿಯವರು ಯಾವುದೋ ಆತುರದ ಕಾರ್ಯದ ಮೇಲೆ ಹೊರಟು ಹೊರಗೆ ಬಂದರು. ತೆರಕಣಾಂಬಿಯ ಗಾಡಿಯೂ ಬಂದು ನಿಂತಿತು. ಅಕ್ಕನೂ ಭಾವನೂ ಬಂದುದರಿಂದ ಲಿಂಗಪ್ಪನವರ ಪ್ರಯಾಣವು ನಿಂತು ಹೋಯಿತು. ಎಲ್ಲರೂ ಒಳಗೆ ಹೋದರು. ಯೋಗಕ್ಷೇಮವಾಯಿತು.

ಲಿಂಗ—ಅಕ್ಕಮ್ಮಣ್ಣಿ! ಬರುತ್ತೇವೆಂದು ವರ್ತಮಾನವೇ ಬೇಡವೇ! ಅರೆಕ್ಷಣ ಹೆಚ್ಚು ಕಡಿಮೆಯಾಗಿದ್ದರೆ ನಾನು ಹೊರಟು ಹೋಗುತ್ತಿದ್ದೆನಲ್ಲ.

ಅಕ್ಕ—ಅಪ್ಪಾ ಇನ್ನೇನು, ಹೇಳಿಕಳುಹಿಸುವುದು, ಕರೆಸಿಕೊಳ್ಳುವುದು, ಬರುವುದು ಎಲ್ಲವೂ ಆಯಿತಲ್ಲ. ನಮ್ಮನ್ನು ತೊರೆದುಬಿಟ್ಟೆಯಲ್ಲಪ್ಪ.

ಲಿಂಗಪ್ಪಾಜಿಯವರಿಗೆ ಇದರ ಅರ್ಥವೇ ಆಗಲಿಲ್ಲ. ಏನು ಮಾಡಿಬಿಟ್ಟಿದ್ದೇನೆಯೋ ಎಂದು ದಿಗ್ಭ್ರಮೆಯಾಯಿತು. ಅಷ್ಟಕ್ಕೆ ಅಕ್ಕಮ್ಮಣ್ಣಿಯವರು ಸುಮ್ಮನಾದರೆ? ಹೆಂಗಸರಿಗೆ ಸಹಜ ಸಿದ್ಧವಾದ ವಾರುಣಾಸ್ತ್ರವನ್ನು ದೃಗಿಂದ್ರಿಯದಲ್ಲಿಯೂ ಘ್ರಾಣೇಂದ್ರಿಯದಲ್ಲಿಯೂ ಕೊಟ್ಟರು. ಅತ್ತರು; ಕರೆದರು; ರಂಪಮಾಡಿದರು. ಅಕ್ಕನಿಗೂ ತಮ್ಮನಿಗೂ ಋಣಾನುಬಂಧವು ಹೆಚ್ಚು. ಲಿಂಗಪ್ಪಾಜಿಯವರ ಮನಸ್ಸಿಗೆ ತುಂಬಾ ದುಃಖವಾಯಿತು.

ಲಿಂಗ—ಅಕ್ಕಮ್ಮಣ್ಣಿ! ನಾನೇನಪರಾಧವನ್ನು ಮಾಡಿದೆ? ಕಂಡಹಾಗೆ ಏನೂ ಮಾಡಿಲ್ಲವಲ್ಲ.

ಅಕ್ಕ—(ಬಿಕ್ಕಿಬಿಕ್ಕಿ ಅಳುತ್ತಾ) ನೀನೇನು ಮಾಡೀಯಪ್ಪಾ! ಎಲ್ಲಾ ನಮ್ಮ ಪ್ರಾಪ್ತಿ.

ಲಿಂಗ—ಭಾವಾಜಿ! ನೀವಾದರೂ ಹೇಳಿ,ಏನಾಯಿತು? ಏನಪರಾಧವಾಯಿತು?

ಭಾವಾಜಿಯವರು ಮಾತೇ ಆಡಲಿಲ್ಲ. ಪಾಪ, ಸ್ವಭಾವವಾಗಿ ಇವರು ಮಾತ ನಾಡುವುದೇ ಕಡಿಮೆ; ಹೆಂಡತಿಯ ಎದುರಿಗಂತೂ ಮಾತೇ ಹೊರಡುತ್ತಿರಲಿಲ್ಲ. ಅದರಲ್ಲಿ ಹೆಂಡತಿಯು ಉದ್ವೇಜಿತಳಾಗಿದ್ದಾಗ ಅವರನ್ನು ಮಾತನಾಡಿ ಎಂದರೆ ಏನು ಮಾಡಿಯಾರು? ನಿಜವಾಗಿಯೂ ಅವರಿಗೆ ಮಾತೇ ಮರೆತುಹೋಯಿತು. ಬೂಚಿ ಬುಯ್ಯಿ ಎಂದರೂ ಕೂಡ ಆಗ ಅವರಿಗೆ ಬೋಧೆಯಾಗುತ್ತಿರಲಿಲ್ಲ. ಅಕ್ಕಮ್ಮಣ್ಣಿ ಯವರ ಅಳುವು ಮಾತ್ರ ಅಸಾಧ್ಯವಾಯಿತು. ಲಿಂಗಪ್ಪನವರ ಮನಸ್ಸು ನಿಜವಾ ಗಿಯೂ ಮರುಗಿತು.

ಲಿಂಗ—ಅಕ್ಕಮ್ಮಣ್ಣೀ, ಅಕ್ಕಮ್ಮಣ್ಣಿ! ಅಳಬೇಡ ಹೇಳು. ನಾನೇನು ಮಾಡಿದೆ ಹೇಳು. ಏನು ತಪ್ಪಿದ್ದರೂ ತಿದ್ದಿಕೊಳ್ಳುತ್ತೇನೆ ಹೇಳು.

ಅಕ್ಕ—(ಅಳುತ್ತ) ನೀನು ಮಾತು ಕೊಟ್ಟರೆ ಹೇಳುತ್ತೇನೆ.

ಲಿಂಗ—ಅವಶ್ಯವಾಗಿ ಮಾಡುತ್ತೇನೆ ಹೇಳು.

ಅಕ್ಕ—ಈ ಮಾತಿಗೆ ತಪ್ಪುವುದಿಲ್ಲವೋ?

ಲಿಂಗ—ಇಲ್ಲ.

ಅಕ್ಕ—ನನ್ನಾಣೆ?

ಲಿಂಗ—ನಿನ್ನಾಣೆ ಇಲ್ಲ.

ಅಕ್ಕ—ಸೀತೆಯನ್ನು ಗುಂಡನಿಗೆ ಕೊಡುತ್ತೀಯಂತೆ, ನಂಜುವಿಗೆ ಕೊಡು ವುದಿಲ್ಲವಂತೆ, ನೀನು ಹೀಗೆ ನಮ್ಮ ಮುಖಕ್ಕೆ ಮಸಿ ಬಳಿಯಬಹುದೇ? ಒಳ್ಳೆಯ ದಾಯಿತೇಳು. ನಾನು ಬೇರೆ ಈ ಮುಖ ಹೊತ್ತುಕೊಂಡು ಬದುಕಿರುವುದಿಲ್ಲ. ನೇಣು ಹಾಕಿಕೊಂಡೇ ಸಾಯುತ್ತೇನೆ. ನಿನ್ನ ಮುಖವನ್ನು ಒಂದಾವರ್ತಿ ನೋಡೋಣ ಅಂತ ಬಂದೆ ಅಪ್ಪಾ!

ಮಾತಿಗೆ ಮಾತು ಬಂದು ವಿನೋದವಾಗಿ ಗುಂಡನಿಗೆ ಸೀತೆಯನ್ನು ಕೊಡು ತ್ತೇನೆಂದುದೇ ಹೊರತು ಆಲೋಚಿಸಿ ಮನಃಪೂರ್ವಕವಾಗಿ ಮಾತುಕೊಟ್ಟುದಲ್ಲ. ಲಿಂಗಪ್ಪಾಜಿಯವರಿಗೆ ಆ ಮಾತು ಮರೆತೇ ಹೋಗಿತ್ತು.

ಲಿಂಗ—ಅಕ್ಕಮ್ಮಣ್ಣಿ! ನಾನು ಯಾವಾಗ ಅಂದೆ? ಯಾರು ಹೇಳಿದರು? ಸೀತೆಯ ಮದುವೆಯ ಮಾತು ಯಾವಾಗ ಬಂತು? ಏನು ಕಥೆ! ನೀನಾಡುವ ಮಾತು ವಿಚಿತ್ರವಾಗಿದೆಯಲ್ಲ.

ಲಿಂಗಪ್ಪನವರು ಆಡಿದುದುಂಟು. ಅಕ್ಕಮ್ಮಣ್ಣಿಗೆ ಚೆನ್ನಾಗಿ ಗೊತ್ತಿತ್ತು ತಮ್ಮನು ಬೇಕೆಂದು ಸುಳ್ಳುಸಾಧಿಸುತ್ತಾನೆಂದು ಮತ್ತಷ್ಟು ಸಿಟ್ಟುಬಂತು.

ಅಕ್ಕ—ಆಡಲಿಲ್ಲವೇ ? ಯಾಕೆ ಸುಳ್ಳು ಸಾಧಿಸುತ್ತೀಯೋ ? ಅದೇ ಕೆಲಸ ವಾಗಿ ವನಭೋಜನ ಮಾಡಿಸಿದ್ದೀಯೆ. ಗಂಡೂ ಹೆಣ್ಣೂ ಜತೆಯಲ್ಲಿ ಕೂಡಿಸಿದ್ದೀಯೆ ಎಲ್ಲರೆದುರಿಗೂ ಮಾತುಕೊಟ್ಟೆದ್ದೀಯೆ, ನಂಜು ಬಂದ ಎಂತ ಮುಚ್ಚಿಕೊಳ್ಳು ವುದಕ್ಕೆ ಗುಂಡನನ್ನು ಎಬ್ಬಿಸಿದ್ದೀಯೆ. ನೀನು ಮುಚ್ಚಿಕೊಂಡರೆ ನನಗೆ ಯಾರೂ ಹೇಳುವವರಿಲ್ಲವೋ ? ಸುಮ್ಮನೆ ಬಾಯಿ ಬಡಿಯುತ್ತೀಯಾ ಈಗ, ಬಡಿ. ನಾವು ಬಡವರು, ತಿರುಕೆಯುವರು. ನಮ್ಮನ್ನು ಕಂಡರೆ ತಾಳಿಕೆಯಿಲ್ಲ. ನಮ್ಮನ್ನು ಯಾವ ಕಣ್ಣಿನಿಂದ ನೋಡೀಯೆ ? ಗುಂಡನಪ್ಪ ಶ್ರೀಮಂತ. ಅವನಿಗೂ ನಿನಗೂ ಸರಿ ಹೋಗುತ್ತೆ. ಅವನ ತೂಕ ನಾವೆಲ್ಲಿ ತೂಗಿಯೇವು ? ಒಳ್ಳೆಯದಾಯಿತು. ನಂಜು ಪಾಪ ಈ ಮಾತು ಕೇಳಿದಾಗಿನಿಂದ ಅನ್ನ ನೀರು ಬಿಟ್ಟು ಬಿಟ್ಟ. ಅನ್ನಲಾರ, ಅನುಭವಿಸಲಾರ, ಹೆತ್ತ ಹೊಟ್ಟೆ ಉರಿದುಹೋಗುತ್ತೆ. ತಿವಿದುಕೊಂಡೇನೇ ಕಣ್ಣು. ಇರಿದುಕೊಂಡೇನೇ ಹೊಟ್ಟೆ.

ಲಿಂಗಪ್ಪನವರಿಗೆ ಆಗ ಜ್ಞಾಪಕಕ್ಕೆ ಬಂತು. ಹಿಂದು ಮುಂದು ಆಲೋಚಿಸದೆ ಅಂದ ಮಾತಿಗೆ ಇಷ್ಟು ರಂಪವಾಯಿತೆಂದುಕೊಂಡು ಅಕ್ಕಮ್ಮಣ್ಣಿಯುವರಿಗೆಷ್ಟೋ ವಿಧವಾಗಿ ಸಮಾಧಾನವನ್ನು ಹೇಳಿದರು. ಮೊದಲು ಇಲ್ಲವೆಂದು ಸುಳ್ಳುಹೇಳಿ ಆಮೇಲೆ ತಾನೇ ಒಪ್ಪಿಕೊಂಡುದಕ್ಕೆ ಅಕ್ಕಮ್ಮಣ್ಣಿಯ ಬಾಯಿಯು ಬಲವಾಯಿತು. ಬಹಳ ಹೊತ್ತು ವಾಗ್ವಾದವಾಯಿತು. ಹಿಂದೆ ಪರಿಣಾಮ ಪರಿಜ್ಞಾನವಿಲ್ಲದೆ ಆಡಿದ ಹಾಗೆ ಮುಂದಾದರೂ ಆಡಬಾರದೆಂದು ತಿಳಿಯಬಾರದೆ ? ಅಕ್ಕಮ್ಮಣ್ಣಿಯ ಪರಿವೇದನಕ್ಕೆ ಮರುಗಿ ಸೀತೆಯನ್ನು ನಂಜುವಿಗೆ ಕೊಡುತ್ತೇನೆಂದು ಒಪ್ಪಿಕೊಳ್ಳಬಹುದೆ ? ಲಿಂಗಪ್ಪನವರು ಒಪ್ಪಿಕೊಂಡರು. ಈ ಸಂಬಂಧವು ಸೀತೆಯ ತಾಯಿ ರಾಜಮ್ಮಣ್ಣಿಗೆ ಇಷ್ಟವಿಲ್ಲ. ಸೀತೆಗೆ ಮೊದಲೇ ಇಷ್ಟವಿಲ್ಲ. ಲಿಂಗಪ್ಪಾಜಿಯವರಿಗೂ ಇಷ್ಟವಿಲ್ಲ. ಯಾರಿಗೂ ಇಷ್ಟವಿಲ್ಲ. ಸುಮ್ಮನೆ ದಾಕ್ಷಿಣ್ಯಕ್ಕೆ “ ಹ್ಞೂ ” ಎಂದುಬಿಟ್ಟರು.

ಹೆಂಗಸರ ಬಾಯಿಯು ಸುಮ್ಮನಿರುವುದಿಲ್ಲ. ಮಧ್ಯಾಹ್ನ ಊಟವಾದಮೇಲೆ ಹೆಂಗಸರೆಲ್ಲಾ ಒಂದು ಕಡೆ ಸೇರಿದರು. ಅಕ್ಕಮ್ಮಣ್ಣಿಯು ಸೀತೆಯನ್ನು ಕರೆದು ಹತ್ತಿರ ಕುಳ್ಳಿರಿಸಿಕೊಂಡಳು. ಅವಳೆದುರಿಗೆ ತಮ್ಮನು ಮಾಡಿದ ವಾಗ್ದಾನದ ಮಾತನ್ನಾಡಿದಳು. ಎಲ್ಲರ ಮನಸ್ಸೂ ವಿಷಣ್ಣವಾಯಿತು. ಸೀತೆಯ ಮನಸ್ಸಿನಲ್ಲಿ ಏನೋ ಹುಳ್ಳಹುಳ್ಳಗಾಯಿತು. ಹುಡುಗಿ, ಇನ್ನೂ ಒಂದು ಹಾಲುಗಲ್ಲ, ಒಂದು ನೀರು ಗಲ್ಲ. ವಿಷಯಜ್ಞಾನವೂ ಅಷ್ಟರಲ್ಲೇ, ಪರಿಣಾಮ ಪರಿಜ್ಞಾನವೂ ಅಷ್ಟರಲ್ಲೇ ಇತ್ತು. ಲಕ್ಷ್ಮಿಯ ಸಂಗಡ ಕವಡೆಯನ್ನಾಡುತ್ತಾ ಕುಳಿತಿದ್ದಳು. ಅಲ್ಲಿಗೆ

ಬಿಟ್ಟರೆ? ಬಿಟ್ಟರೆ ಅವರು ಹೆಂಗಸರೇ ಅಲ್ಲ. ಅಕ್ಕಮ್ಮಣ್ಣಿಯು ಸೀತೆಯನ್ನು ಪ್ರಶ್ನೆಮಾಡಿದಳು.

ಅಕ್ಕ—ಸೀತೂ! ಗುಂಡ ಚೆನ್ನಾಗಿದ್ದಾನೆಯೋ, ನಂಜು ಚೆನ್ನಾಗಿದ್ದಾನೆಯೋ, ಹೇಳು.

ಸೀತೆಯು ನಾಚಿಕೆಯಿಂದ ಮಾತನಾಡಲಿಲ್ಲ. ಅಕ್ಕಮ್ಮಣ್ಣಿಯು ಬಿಟ್ಟರೆ? ಮತ್ತೆ ಮತ್ತೆ ಅದೇ ಕೇಳಿದಳು. ಲಿಂಗಪ್ಪನವರ ಮನೆಯವರು ಯಾರೋ "ಸೀತೆ! ನಾಚಿಕೊಳ್ಳಬೇಡ, ಹೇಳಮ್ಮ ಹೇಳು" ಅಂದರು.

ಸೀತೆ—ಗುಂಡನೇ ಚೆನ್ನಾಗಿದ್ದಾನೆ.

ಅಲ್ಲಿಗಾದರೂ ಬಿಟ್ಟರೆ? ಅಕ್ಕಮ್ಮಣ್ಣಿಯ ತಿಳುವಳಿಕೆಯಲ್ಲಿ ಅವಳ ಮಗನು ರೂಪಿನಲ್ಲಿ ಸಾಕ್ಷಾನ್ಮನ್ಮಥ; ಸೀತೆಯೆಂದುದಕ್ಕೆ ಅಕ್ಕಮ್ಮಣ್ಣಿಯ ವಾತ್ಸಲ್ಯವೂ ಅಸೂಯೆಯೂ ಹೆಚ್ಚಿತು.

ಅಕ್ಕ—ಹಾಗಾದರೆ ನೀನು ಯಾರನ್ನು ಮದುವೆ ಮಾಡಿಕೊಳ್ಳುತ್ತೀ ಹೇಳು? ನಿಮ್ಮಪ್ಪ ನಿನ್ನನ್ನು ನಂಜುವಿಗೆ ಕೊಡುತ್ತಾನಂತಲ್ಲ.

ಸೀತೆ—ನಾನು ಯಾರನ್ನೂ ಮಾಡಿಕೊಳ್ಳುವುದಿಲ್ಲ.

ವಿನೋದದ ವಿಷಯವಲ್ಲ ಅಂತಲ್ಲ. ಅಸಮಾಧಾನದೊಡನೆ ಆಡಬಾರದೆಂತಿಲ್ಲ. ವಿಷಮಪರಿಣಾಮವಾದೀತೆಂತಿಲ್ಲ. ಅಸಲಿಗೇ ಮೋಸ ಬಂದೀತೆಂತಿಲ್ಲ. ಹೆಣ್ಣು ಹುಡುಗರನ್ನು ಕಂಡರೆ ಈ ರೀತಿಯಾಗಿ ಆಟವಾಡಿಸುವುದೂ, ಕುಹಕಮಾಡುವುದೂ ಲೋಕದಲ್ಲುಂಟು. ಅದರಲ್ಲಿಯೂ ಹೆಂಗಸರಲ್ಲಿ ಇದು ಹೆಚ್ಚು. ಅಕ್ಕಮ್ಮಣ್ಣಿಯು ವಿನೋದಕ್ಕಲ್ಲ ನಿಜವಾಗಿ ಕೇಳಿದಳು. "ನಂಜುವನ್ನು ಮಾಡಿಕೊಳ್ಳುತ್ತೀಯೋ ಇಲ್ಲವೋ" ಎಂದು ಮತ್ತೆ ಮತ್ತೆ ಕೇಳಿದಳು. "ನಿಜವನ್ನು ಹೇಳಮ್ಮ. ಹೇಳಬಹುದು. ಹೇಳು" ಎಂದು ಯಾರೋ ಸೀತೆಯನ್ನು ಉಬ್ಬಿಸಿ ಬಿಟ್ಟರು. ಸೀತೆಯು "ನಾನು ಗುಂಡನನ್ನೇ ಮಾಡಿಕೊಳ್ಳುವುದು. ಹಾಳ ನಂಜು ನನಗೆ ಬೇಡ" ಎಂದುಬಿಟ್ಟು ಅಲ್ಲಿಂದೆದ್ದು ಹೊರಟುಹೋದಳು. ಹೆಂಗಸರು ನಕ್ಕರು. ಇದಕ್ಕೆ ಊರೇ ಹೋಯಿತೆಂದು ಅಕ್ಕಮ್ಮಣ್ಣಿಯ ಆಕ್ಷೇಪವು ಬಹಳವಾಯಿತು. ಯಾರೋ ಸುಮ್ಮನಿರದೆ "ಬಿಡಿ ಹಾಗಾದರೆ, ಇಂಥಾ ಹೆಣ್ಣಿಗೆ ಯಾಕೆ ಒದ್ದುಕೊಳ್ಳುತ್ತೀರಿ" ಎಂದೇಬಿಟ್ಟು ಅಕ್ಕಮ್ಮಣ್ಣಿಯಿಂದ ಅಟ್ಟಹಾರಿಸಿಕೊಂಡರು.

ಹುಡುಗರು ಹುಡುಗರೇ! ದೊಡ್ಡವರೇ ಹುಡುಗಾಟವಾಡಬಹುದು. ಹುಡುಗರನ್ನು ಕೇಳಬೇಕೆ? ಸೀತೆಯೂ ಲಕ್ಷ್ಮಿಯೂ ಆಟವಾಡುತ್ತಿದ್ದರು. ಗುಂಡನೂ ಆ

ಕಡೆಯೇ ಬಂದನು. ಸೀತೆಯು ಅವನನ್ನು ಕೂಗಿ ಕರೆದಳು. ನಂಜುವು ಎಲ್ಲಿಂದಲೋ ಬಂದು ಮರೆಯಾಗಿ ಕೇಳುತ್ತಿದ್ದನು.

ಸೀತೆ—ಗುಂಡಾ! ಮಧ್ಯಾಹ್ನದಲ್ಲಿ ಒಂದು ಮಾತು ನಡೆಯಿತು, ಕೇಳಿದೆಯಾ?

ಗುಂಡ—ಏನು ನಡೆಯಿತು?

ಸೀತೆ—ಅತ್ತಿಮ್ಮಣ್ಣಿಯವರು ಕೇಳಿದರು, ನಂಜುವನ್ನು ಮದುವೆಮಾಡಿಕೊಳ್ಳುತ್ತೀಯೋ ಗುಂಡನನ್ನು ಮಾಡಿಕೊಳ್ಳುತ್ತೀಯೋ ಅಂತ.

ಗುಂಡ—ನೀನೇನಂದೆ?

ಸೀತೆ—ಹಾಳು ನಂಜುವನ್ನೊಲ್ಲೆ. ಗುಂಡನನ್ನೇ ಮಾಡಿಕೊಳ್ಳುತ್ತೇನೆ ಅಂದುಬಿಟ್ಟೆ.

ಗುಂಡ—ನಂಜಪ್ಪನನ್ನು ಯಾತಕ್ಕೆ ಒಲ್ಲೆ ಅಂದೆ?

ಸೀತೆ—ಕರ್‍ರಗೆ ಕೋಡದಹಾಗಿದ್ದಾನೆ, ಅಸಹ್ಯಾಪ್ಪಾ! ಒಲ್ಲೇ ಅಂದುಬಿಟ್ಟೆ.

ಮೂವರೂ ನಕ್ಕರು. ಗುಂಡನು ಅಲ್ಲಿಂದ ಹೊರಟನು. ನಂಜುವು ಅವನನ್ನು ಹಿಂಬಾಲಿಸಿದನು. ಅಷ್ಟು ದೂರ ಹೋದರು. ಇಬ್ಬರೇ ಆದರು. ಯಾರೂ ಇಲ್ಲವೆಂದು ನಂಜುವು ಗುಂಡನನ್ನು ಕೀಟಲೆ ಮಾಡಲಾರಂಭಿಸಿದನು. ಲಿಂಗಪ್ಪಾಜಿಯವರು ಆಕಡೆ ಹೋಗುತ್ತಿದ್ದವರು ಇವರು ಕಾಣದಂತೆ ನೋಡುತ್ತಾ ನಿಂತುಕೊಂಡರು. ಗುಂಡನು ಸಹಿಸಿಕೊಂಡು ಸುಮ್ಮನಿದ್ದನು. ಸುಮ್ಮನಾದುದಕ್ಕೆ ನಂಜುವಿನ ಕೀಟಲೆಯು ಬಲವಾಯಿತು. ಗುಂಡನು ಸುಮ್ಮನಿರುತ್ತೀಯೋ ಇಲ್ಲವೋ ಎಂದನು. ಕೀಟಲೆಯು ಹೆಚ್ಚಿ ಅಸಾಧ್ಯವಾಯಿತು. ವಿವಾದವು ಹತ್ತಿತು. ಬಹಳಹೊತ್ತು ಕಾದಿದರು. ನಂಜು ದೊಡ್ಡವನು; ಗುಂಡನನ್ನು ಕೆಳಗೆ ಕೆಡವಿಕೊಂಡು ಹಣ್ಣುಗಾಯಿ ನೀರುಗಾಯಿ ಮಾಡಿದನು. ಗುಂಡನು ಸ್ವಲ್ಪವೂ ಧೈರ್ಯಕೆಡಲಿಲ್ಲ. ಸಮಯವನ್ನು ಕಾಯುತ್ತಿದ್ದನು. ಗೆದ್ದೆನೆಂಬ ದುರಹಂಕಾರದಿಂದ ನಂಜುವಿನ ಹಿಡಿತವು ಶಿಥಿಲವಾಯಿತು. ಗುಂಡನು ನಂಜುವನ್ನು ಎತ್ತಿಹಾರಿಸಿ ಕೆಡವಿಕೊಂಡು ಬಲವಾಗಿ ಇಕ್ಕಿ ಎಡಕೈಯಲ್ಲಿ ಕುತ್ತಿಗೆಯನ್ನು ಹಿಡಿದು ಬಲಕೈಯಲ್ಲೊಂದು ದೊಡ್ಡ ಕಲ್ಲನ್ನು ತೆಗೆದುಕೊಂಡು ಎತ್ತಿದನು. ನಂಜುವು ಹೆದರಿ ಅಳುತ್ತಾ "ಬೇಡಪ್ಪಾ, ಬಿಡು; ತಪ್ಪಾಯಿತಪ್ಪಾ, ಬಿಡು; ಇನ್ನು ನಿನ್ನ ತಂಟೆಗೆ ಬರುವುದಿಲ್ಲಪ್ಪಾ, ಬಿಡು" ಎಂದು ಗುಂಡನನ್ನು ಬೇಡಿಕೊಂಡನು. ಗುಂಡನು ಬಿಟ್ಟುಬಿಟ್ಟನು. ಇಬ್ಬರೂ ಮೆಲ್ಲಗೆ ಎದ್ದು ನಿಂತುಕೊಂಡರು.

ಗುಂಡ— ಇನ್ನುಮೇಲೆ ನನ್ನ ತಂಟೆಗೆ ಬರುತ್ತೀಯಾ ?

ನಂಜ— ಇಲ್ಲಪ್ಪಾ, ಇಲ್ಲ.

ಗುಂಡ — ಎರಡೂ ಕಿವಿಗಳನ್ನು ಹಿಡಿದುಕೊಂಡು ಹತ್ತುಸಲ ಕೂತುಕೊಂಡು ಎದ್ದು ತಪ್ಪಾಯಿತು ತಪ್ಪಾಯಿತು ಎನ್ನು. ಇಲ್ಲದಿದ್ದರೆ ಅಲ್ಲೇ ತೀರಿಸಿಬಿಡುತ್ತೇನೆ.

ನಂಜುವು ಎರಡುಕೈಗಳಿಂದಲೂ ಕಿವಿಗಳನ್ನು ಹಿಡಿದುಕೊಂಡು ಹತ್ತುಸಲ ಕೂತು ಎದ್ದು, ಹತ್ತುಸಲ ತಪ್ಪಾಯಿತು ಎಂದನು. ಗುಂಡನು " ನಡಿ ಆಕಡೆ " ಎಂದನು. ನಂಜುವು ಏಳುವುದೂ ಬೀಳುವುದೂ ಕಾಣದೆ ಓಡಿಹೋದನು. ಗುಂಡನ ಎರಡು ಮುಂಡಿಗಳೂ ಕಿತ್ತು ರಕ್ತವು ಹರಿಯುತ್ತಿತ್ತು. ಮೈಕೈಯೆಲ್ಲಾ ತರಚಿ ಗಾಯ ವಾಗಿತ್ತು. ಗಾಯಕ್ಕೆ ವ್ಯಥೆಪಡದೆ ಜಯಶೀಲನಾದುದಕ್ಕೆ ಸಂತೋಷಪಡುತ್ತಾ ತಮ್ಮ ತಂದೆಯ ಮನೆಗೆ ಹೊರಟುಹೋದನು. " ಈ ವೀರನಿಗೆ ಮಗಳನ್ನು ಕೊಡು ತ್ತೇನೆಂದು ಹೇಳಿದ ಮಾತನ್ನು ಉಳಿಸಿಕೊಳ್ಳದೆ ಆ ಹೇಡಿಗೆ ಕೊಡುತ್ತೇನೆಂದೆನಲ್ಲ " ಎಂದು ಲಿಂಗಪ್ಪಾಜಿಯವರು ಮನಸ್ಸಿನಲ್ಲಿ ಪಶ್ಚಾತ್ತಾಪಪಡುತ್ತಾ ಮನೆಗೆ ಹೋಗಿ ತಮ್ಮ ವ್ರಣವೈದ್ಯನನ್ನು ಕರೆಸಿ ಕೂಡಲೆ ಹೋಗಿ ಗುಂಡನ ಗಾಯಕ್ಕೆ ಔಷಧಿ ಹಾಕಿ ಬಾ ಎಂದು ಹೇಳಿಕಳುಹಿಸಿಕೊಟ್ಟರು.

ಕದನದಲ್ಲಿ ಸೋಲು ಗೆಲುವು ಗೊತ್ತಿಲ್ಲ. ಒಬ್ಬರು ಸೋಲಲೇ ಬೇಕು; ಒಬ್ಬರು ಗೆಲ್ಲಲೇಬೇಕು. ಸೋತ ಮಾತ್ರಕ್ಕೆ ಹೆದರಿಕೊಂಡು ಅಂಗಲಾಚುವುದು ಹೇಡಿತನ. ಇನ್ನೊಬ್ಬರನ್ನು ನಾವಾಗಿ ಹೊಡೆಯುವದಕ್ಕೆ ಹೋಗಿ ನಮಗೂ ಏಟು ಬಿದ್ದರೆ ಅಳುವುದು ಅದಕ್ಕಿಂತಲೂ ನೀಚತನ. ಹೆಂಗಸರ ಮುಂದೆ ಸುಳ್ಳು ಹೇಳಿ ಕೊಂಡು ಅಳುವುದು ಹೆಣ್ಣಿನ ತನಕ್ಕಿಂತ ಹೀನವಾದುದು. ಸುಮ್ಮನಿರದೆ ನಂಜಪ್ಪನು ಮನೆಗೆ ಬಂದು, ಅಕ್ಕಮ್ಮಣ್ಣಿಯಕೂಡೆ ಸೀತೆಯ ಮೇಲೂ ಗುಂಡನ ಮೇಲೂ ಇದ್ದುದು ಇಲ್ಲದ್ದು ಬೇಕಾದಷ್ಟು ಚಾಡಿಯನ್ನು ಹೇಳಿಕೊಂಡು ಅತ್ತನು. ಅಕ್ಕಮ್ಮ ಣ್ಣಿಯು ಕ್ರೋಧ ಮೂರ್ಛಿತಳಾದಳು. ತಮ್ಮನನ್ನು ಕಂಡ ಕೂಡಲೇ ಒಂದಕ್ಕೆ ಹತ್ತು ಸೇರಿಸಿಕೊಂಡು ಗುಂಡನ ಮೇಲೆ ಚಾಡಿಯನ್ನು ಹೇಳಿ ಅವನಿಗೆ ತಕ್ಕ ಶಿಕ್ಷೆ ಯನ್ನು ಮಾಡು ಎಂದಳು. ಲಿಂಗಪ್ಪ ಕಣ್ಣಾರೆ ಕಂಡುದು ; ಅವರಿಗೆ ಸುಳ್ಳು ಸಹಿಸಲಿಲ್ಲ. ಅಕ್ಕನ ಮುಂದೆ ನಿಜವನ್ನು ಹೇಳಿ ನಂಜಪ್ಪನ ಹೇಡಿತನವನ್ನು ಮೂದಲಿಸಿ ಗುಂಡನ ಕಾರ್ಯವನ್ನು ಹೊಗಳಿದರು. ಉರಿಯುವ ಬೆಂಕಿಗೆ ತುಪ್ಪ ವನ್ನು ಸುರಿದಂತಾಯಿತು. ಅಥವಾ ಮದ್ಯಪಾನದಿಂದ ಪ್ರಮತ್ತವಾದ ಮರ್ಕಟನಿಗೆ ಚೇಳೂ ಕಚ್ಚಿದಂತಾಯಿತು. ತಮ್ಮನಿಗೆ ಗುಂಡನ ಮೇಲೆಯೇ ವಿಶ್ವಾಸವೆಂತಲೂ, ನಂಜುವನ್ನು ಕಂಡರೆ ಆಗುವುದಿಲ್ಲವೆಂತಲೂ, ತಾನೇ ನಿಂತುಕೊಂಡು ಮಗನನ್ನು ಹೊಡೆಸಿದನೆಂತಲೂ ತಿಳಿದುಕೊಂಡು ಬಾಯಿಗೆ ಬಂದಹಾಗೆ ಗುಂಡನನ್ನು ಬೈದು ಸೀತೆಯನ್ನೂ ಎಲ್ಲರನ್ನೂ ಆಕ್ಷೇಪಿಸಿಬಿಟ್ಟಳು. ಲಿಂಗಪ್ಪಾಜಿಯವರಿಗೆ ಸಹಿಸಲಿಲ್ಲ.

ಲಿಂಗ—ಅಕ್ಕಮ್ಮಣ್ಣಿ! ಸುಮ್ಮನಿರಬಾರದೆ ಮತ್ತೆ. ಸುಮ್ಮಸುಮ್ಮನೆ ಆ ವೀರನನ್ನು ನಿಂದಿಸಬೇಡ. ಅವನಿಗಿರುವ ಶೌರ್ಯವೂ, ಪ್ರತಾಪವೂ, ತೇಜಸ್ಸೂ, ಈ ದಡಿಮೂದೇವಿಗಿಲ್ಲ. ತಾನಾಗಿ ಅವನ ಕೀಟಲೆಗೆ ಹೋಗಿ ಅವನಿಗೆ ಸೋತು ಹೇಡಿಯಂತೆ ಕಿವಿಗಳನ್ನು ಹಿಡಿದುಕೊಂಡು ತಪ್ಪಾಯಿತು ಅಂದು ಬಿಡಿಸಿಕೊಂಡು ಬಂದ. ಅವನೇ ವಾಸಿ. ಇವನನ್ನು ಅಲ್ಲೇ ಭೂಗತ ಮಾಡದೇ ಬಿಟ್ಟು ಬಿಟ್ಟ. ಈ ಹೇಡಿಯ ಬಾಳಿಗೆ ನನಗೇ ನಾಚಿಕೆಯಾಯಿತು. ಇವನ ಮುಖ ನೋಡುವುದಕ್ಕೂ ಅಸಹ್ಯವಾಗುತ್ತೆ. ಸುಮ್ಮನಿರು.

ಎಂದುಬಿಟ್ಟು ಲಿಂಗಪ್ಪಾಜಿಯುವರು ಹೊರಟುಹೋದರು. ಗುಂಡನಿಗೆ ಏಟು ಬಿದ್ದಮಾತು ಕಿವಿಗೆ ಬಿದ್ದು ಲಕ್ಷ್ಮಿಯೂ ಸೀತೆಯೂ ಅವರ ಮನೆಗೆ ಓಡಿ ಹೋದರು. ವ್ರಣವೈದ್ಯರು ಔಷಧಿಯನ್ನು ಹಾಕಿ ಬಟ್ಟೆಯನ್ನು ಕಟ್ಟಿದ್ದರು. ಇಬ್ಬರೂ ಉದ್ವೇಜಿತರಾಗಿ "ಏನಾಯಿತು, ಏನಾಯಿತು ಗುಂಡ, ಶಾನೆ ಏಟಾಯಿತೆ, ನೋಯುತ್ತದೆಯೋ?'' ಎಂದು ಕೇಳಿದರು. ಗುಂಡನು ಬಾಧೆಯನ್ನು ಸರಾಗವಾಗಿ ಸಹಿಸಿಕೊಂಡು "ಏನೂ ಇಲ್ಲ, ಎಲ್ಲೋ ಸ್ವಲ್ಪ ತರಚಿದೆ" ಎಂದು ಹೇಳಿ ವೈದ್ಯರು, ಮಲಗಿಕೋ ಎಂದರೂ ಕೇಳದೆ ಕೂತುಕೊಂಡೇ ಮಾತನಾಡಿದನು. ಲಕ್ಷ್ಮಿಯು ಅವನನ್ನು ಬಲತ್ಕಾರದಿಂದ ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು. ಸೀತೆಯು ಮಾತನಾಡಿಸಿದಳು.

ಸೀತೆ—ಯಾತಕ್ಕೆ ವ್ಯಾಜ್ಯವಾಯಿತು?

ಗುಂಡ—ಏನೋ ಮಾತಿಗೆ ಮಾತು ಬಂದು ಪ್ರಮಾದವಾಯಿತು.

ಸೀತೆ—ಆ ದಡಿಯನೇ ಕೀಟಲೆ ಮಾಡಿದನಂತೆ, ಅಪ್ಪಾಜಿಯುವರು ಹೇಳಿದರು.

ಗುಂಡ—ಅವನೂ ಮಾಡಿದ, ನಾನೂ ಮಾಡಿದೆ.

ಸೀತೆ—ಚೆನ್ನಾಗಿ ಇಕ್ಕಿದೆಯೋ ಇಲ್ಲವೋ?

ಗುಂಡ—ಅವನೂ ಹೊಡೆದ, ನಾನೂ ಹೊಡೆದೆ.

ಸೀತೆ—ಅವನ ಕೈಕಾಲು ಮುರಿದು ಹಾಕಬೇಕಾಗಿತ್ತು, ಅಲ್ಲೇ

ಲಕ್ಷ್ಮಿ—ಏನೂ ಮಾಡದೇ ಅಕ್ಕಮ್ಮಣ್ಣಿಯವರು ಆಪಾಟಿ ರಂಪ ಮಾಡಿದರು. ಇನ್ನು ಕೈಕಾಲು ಮುರಿದಿದ್ದರೆ ಗುಂಡನನ್ನು ಜೀವಸಹಿತ ಬಿಡುತ್ತಿರಲಿಲ್ಲ.

ಸೀತೆ—ಅವಳೇನು ಮಾಡುತ್ತಿದ್ದಳು, ಮುಖ ಮೂರುಕಡೆಗೆ. ಅಪ್ಪಾಜಿಯವರು ಇರಲಿಲ್ಲವೇ?

ಬಹಳ ಹೊತ್ತಿನವರೆಗೂ ಸೀತೆಯು ಅಲ್ಲಿಯೇ ಇದ್ದಳು. ಅವ್ವೆಯರು ಬಂದು ಎಷ್ಟೋ ಸಲ ಮನೆಗೆ ಕರೆದರು. ರಾತ್ರಿ ಮೊದಲನೆಯ ಜಾವವು ಮುಗಿಯುವ

ವೇಳೆಗೆ ಸೀತೆಯು ಮನಸ್ಸಿಲ್ಲದೆ ಮನೆಗೆ ಬಂದಳು. ಲಕ್ಷ್ಮಿಯು ಅಲ್ಲಿಯೇ ನಿಂತು ಬಿಟ್ಟಳು.

ರಾಜಮ್ಮಣ್ಣಿ—(ಸೀತೆಯನ್ನು) ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ ಸೀತೆ?

ಸೀತೆ—ಅಮ್ಮಣ್ಣಿ! ಹಾಳ ನಂಜು ಇವನ ಕೈ ಸೇದಿಹೋಗ, ಗುಂಡನನ್ನು ಹೊಡೆದು ಗಾಯಮಾಡಿ ಬಿಟ್ಟಿದ್ದಾನೆ. ನೋಡುವುದಕ್ಕೆ ಹೋಗಿದ್ದೆ.

ರಾಜ—ಶಾನೇ ಗಾಯವಾಗಿದೆಯೇನೆ, ಪಾಪ!

ಸೀತೆ—ಅದೇನೋ ಕಾಣಲಿಲ್ಲ. ಎರಡು ಕೈಗೂ ಎರಡು ಮಂಡಿಗೂ ಬಟ್ಟೆ

ಕಟ್ಟಿದ್ದಾರೆ. ಮೈ ಎಲ್ಲಾ ತರಚಿ ಹೋಗಿದೆ.

ರಾಜ—ಅಯ್ಯೋ ಪಾಪ! ಎಷ್ಟು ಅತ್ತನೋ ನೋವಿಗೆ.

ಸೀತೆ—ಅವನು ಅಳುವುದೇ ಇಲ್ಲ ಅಮ್ಮಣ್ಣಿ. ನಗುತ್ತಲೇ ಇದ್ದಾನೆ. ರಾಜಮ್ಮಣ್ಣಿಗೆ ಗುಂಡನಮೇಲೆ ತುಂಬಾ ವಾತ್ಸಲ್ಯ. ವನವಿಹಾರದ ದಿವಸ ಅವನಿಗೆ ಮಗಳನ್ನು ಕೊಡುವಮಾತು ನಡೆದಾಗಿನಿಂದಲೂ ರಾಜಮ್ಮಣ್ಣಿಯವರಿಗೆ ಅದೇ ಮನಸ್ಸಿನಲ್ಲಿ ನಾಟಿಹೋಗಿತ್ತು. ಗುಂಡನನ್ನು ಕರೆಸಿ ನೋಡಬೇಕೆನ್ನಿಸಿತು. ಈಗಲೇ ಕರೆಸಲೋ ಬೇಡವೋ ಎಂದು ಆಲೋಚಿಸುತ್ತಿದ್ದಳು. ತಾಯಿ ಮಗಳ ಸಲ್ಲಾಪವನ್ನು ಕೇಳಿ ಅಕ್ಕಮ್ಮಣ್ಣಿಗೆ ಚೇಳು ಕುಕ್ಕಿದ ಕಪಿಗೆ ಪಿಶಾಚವೂ ಆವರಿಸಿಕೊಂಡಂತಾಯಿತು ಇನ್ನೊಬ್ಬರ ಮನೆಯ ಗಂಡುಹುಡುಗನ ಜತೆಯಲ್ಲಿ ಹೆಣ್ಣುಮಗಳನ್ನು ಆಡುವುದಕ್ಕೆ ಬಿಟ್ಟು ಸಂಪ್ರದಾಯವನ್ನೂ ಹುಡುಗಿಯನ್ನೂ ಕೆಡಿಸುತ್ತಾರೆಂದು ವಿಧವಿಧವಾಗಿ ಆಕ್ಷೇಪಿಸಿ ಅಲಿಬಿಟ್ಟಳು. ರಾಜಮ್ಮಣ್ಣಿಗೆ ಸಹಿಸಲಿಲ್ಲ. ಕೋಪವನ್ನು ಮಾತಿನಲ್ಲಿ ತೋರಿಸಲಿಲ್ಲ. ಕಾರ್ಯದಲ್ಲಿ ತೋರಿಸಿದಳು.

ಕೂಡಲೇ ವ್ಯಾನವನ್ನು ಕೊಟ್ಟು ಕಳುಹಿಸಿ ಗುಂಡನನ್ನು ಕರೆಸಿದಳು. ಜತೆಯಲ್ಲಿ ಲಕ್ಷ್ಮಿಯೂ ಬಂದಳು. ಗುಂಡನನ್ನು ಆದರದಿಂದ ಮಾತನಾಡಿಸಿದಳು. ಅವನ ಗಾಯವನ್ನು ನೋಡಿ ಪೇಚಾಡಿದಳು. ದೊಡ್ಡವನ ಗೋಜಿಗೆ ಯಾಕೆ ಹೋದೆಯಪ್ಪಾ ಎಂದಳು. ಲಕ್ಷ್ಮಿಯನ್ನೂ, ಸೀತೆಯನ್ನೂ ಬೇಗ ಊಟಮಾಡಿಕೊಂಡು ಬನ್ನಿ ಎಂದು ಕಳುಹಿಸಿದಳು. ಅವರು ಬಂದರು. ಇಬ್ಬರನ್ನೂ ನಾನು ಬರುವವರೆಗೂ ಗುಂಡನ ಹತ್ತಿರವೇ ಕೂತಿರಿ ಎಂದು ನೇಮಿಸಿ ತಾನು ಆರೋಗಣೆಗೆ ಹೋದಳು. ಅಕ್ಕಮ್ಮಣ್ಣಿಯ ಹೊಟ್ಟೆಯುರಿಚಚ್ಚು ಕಾಡುಗಿಚ್ಚಾಯಿತು; ಅನ್ನುವುದಕ್ಕಿಲ್ಲ, ಅನುಭವಿಸುವುದಕ್ಕಿಲ್ಲ, ಒಳಗೊಳಗೆಯೇ ಸುಟ್ಟು ಕರಿಯಾಗುತ್ತಿದ್ದಳು.

ರಾತ್ರಿ ಊಟವಾದ ಮೇಲೆ, ಅಕ್ಕಮ್ಮಣ್ಣಿಯು ತಮ್ಮನಿಗೆ ಲಗ್ನವನ್ನು ಕಟ್ಟಿಸು ಎಂದಳು. ನಿಜವಾಗಿ ಮದುವೆಯನ್ನು ಮಾಡಬೇಕೆಂದವರು ಯಾರು? ಆಗಲೇ ಮದುವೆಗೆ ಏನವಸರ? ನಂಜುವಿನ ಹೇಡಿತನವನ್ನು ನೋಡಿ ಅವನಿಗೆ ಕೊಡಬೇಕೆನ್ನುವವರು ಯಾರು? ಲಿಂಗಪ್ಪನವರು ನೆಪಗಳನ್ನು ಹೇಳಿ ಜಾರಿಕೊಂಡರು. ಬೆಳಗಾಗುತ್ತಲೇ ಅಕ್ಕಮ್ಮಣ್ಣಿಗೆ ನಾನು ಬರುವವರೆಗೂ ಇರು ಎಂದು ಉಪಚಾರವನ್ನು ಹೇಳಿ ಲಿಂಗಪ್ಪನವರು ತಾವು ಹಿಂದಿನ ದಿವಸ ನಿಲ್ಲಿಸಿದ್ದ ಪ್ರಯಾಣವನ್ನು ಬೆಳೆಸಿದರು.

## ೫ನೆಯ ಭಾಗ

ಭಾರತದ ಇತಿಹಾಸದಲ್ಲಿ ಹದಿನೆಂಟನೆಯ ಶತಮಾನವು ಕೇವಲ ಶೋಚನೀಯವಾದುದು. ಆಗಿನ ಇತಿಹಾಸವನ್ನು ಓದಿದರೆ ಕಣ್ಣಿನಲ್ಲಿ ನೀರಲ್ಲ, ರಕ್ತವೇ ಬರುವುದು. ಆಗಿನ ರಾಜಕೀಯಾವ್ಯವಸ್ಥೆಯನ್ನೂ, ದೇಶದ ದುರ್ದೆಸೆಯನ್ನೂ, ಹೊರಗಿನವರ ಹಾವಳಿಯನ್ನೂ, ಪ್ರಜೆಗಳ ಸಂಕಟವನ್ನೂ, ಇಷ್ಟೆಂದು ಹೇಳಲು ಆಳವೇ ಇಲ್ಲ. ಕಷ್ಟಪಟ್ಟು ಕಟ್ಟಿ, ಪರಾಕ್ರಮದಿಂದ ವಿಸ್ತರಿಸಿ, ವಿವೇಕದಿಂದ ಬಿಗಿಮಾಡಿ, ವೈಭವದಿಂದ ಆಳಿ, ಸುಮಾರು ಎರಡು ಶತಮಾನದವರೆಗೂ ನಡೆದ ಮೊಗಲ ಸಾಮ್ರಾಜ್ಯವು ಹಾಳಾಗಿ ಹೋಯಿತು. ಪಟ್ಟಕ್ಕೆ ಬರುವವರೇ ಗೊತ್ತಿಲ್ಲ; ಬಂದವರು ಅನಾಮಧೇಯರು. ಕೇಂದ್ರ ಸರ್ಕಾರದಲ್ಲಿಯೂ ಪ್ರಾಂತ ಸೀಮೆಗಳಲ್ಲಿಯೂ ಅಧೀನರ ನಿರಂಕುಶ ಪ್ರಭುತ್ವ, ಸ್ವಕಾರ್ಯ ನಿರತೆ, ಸ್ವಾಮಿ ದ್ರೋಹ, ದುಷ್ಟರ ದಬ್ಬಾಳಿಕೆ, ಶಿಷ್ಟರ ಸಂಕಟ, ಇವು ನಿತ್ಯವಾದವು. ಸಿಕ್ಕಿದವರು ಸಿಕ್ಕಿದುದನ್ನು ಕೊಳ್ಳೆ ಹೊಡೆದರು. ಸಾಲದ ಕಡಿಮೆಗೆ ಈರಾನಿನಿಂದ ನಾದಿರ್ ಷಾಹನು ದಂಡೆತ್ತಿ ಬಂದು ದೇಶವನ್ನೂ ರಾಜಧಾನಿಯನ್ನೂ ಕೊಳ್ಳೆಹೊಡೆದು ಬೇಕಾದಷ್ಟು ಜನರನ್ನು ಕೊಂದು ಜಗತ್ಪ್ರಸಿದ್ಧವಾದ ಕೋಹಿನೂರ್ ಎಂಬ ವಜ್ರಮಣಿಯನ್ನೂ ಮಯೂರಸಿಂಹಾಸನವನ್ನೂ ಹೊತ್ತುಕೊಂಡು ಹೋದನು. ದೊಡ್ಡ ಚಕ್ರಾಧಿಪತ್ಯದ ಗತಿ ಹೀಗಾಯಿತು.

ದಕ್ಷಿಣದಲ್ಲಿ ಮರಾಠೆಯವರ ರಾಜ್ಯವು ಹುಟ್ಟಿ ಬೆಳೆದು ಬಲವಾಯಿತೆಂದರೆ, ದೆಹಲಿಯಲ್ಲಿ ಉತ್ಪನ್ನವಾದ ಸ್ವಾಮಿದ್ರೋಹವೆಂಬ ಸಾಂಕ್ರಾಮಿಕ ಜಾಡ್ಯವು ಇದಕ್ಕೂ ತಗಲಿ, ಸ್ವಲ್ಪ ದಿವಸದಲ್ಲಿಯೇ ಇದೂ ಹಾಳಾಯಿತು. ಆಳುವ ರಾಜರನ್ನು ಮೂಲೆಗೆ ಕೂರಿಸಿ ಪೂನೆಯಲ್ಲಿ ಪೇಷ್ವೆಯರು ಸ್ವತಂತ್ರರಾದರು. ಪೇಷ್ವೆಗಳ ಮಾತನ್ನು ಕೇಳದೆ ಬಾರಾಭಾಯಿಗಳು ಸ್ವತಂತ್ರರಾದರು. ಆಸೇತುಹಿಮಾಚಲ

ಪರ್ಯಂತ ಚೌಥಾಯಿಯನ್ನು ವಸೂಲು ಮಾಡುತ್ತಿದ್ದ ಮರಾಠೆಯವರ ಚಕ್ರಾಧಿಪತ್ಯವು ಮಾಯವಾಗಿಹೋಯಿತು. ಇಷ್ಟು ಬಲಿಷ್ಠರನ್ನು ಪಠಾಣರು ಪಾಣೀಪಟ್ಟದ ಮೂರನೆಯ ಕದನದಲ್ಲಿ ಸೋಲಿಸಿದರೆಂದರೆ ಇವರ ಬಿಗಿಯನ್ನೂ ಐಕಮತ್ಯವನ್ನೂ ಹೇಳುವುದೇನಿದೆ ?

ಚಕ್ರಾಧಿಪತ್ಯಗಳ ಗತಿಯೇ ಹೀಗಾದ ಮೇಲೆ ಪ್ರಾಂತಗಳ ವ್ಯವಸ್ಥೆಯನ್ನು ಹೇಳಬೇಕಾದುದೇನಿದೆ? ದ್ವೇಷ, ಕಲಹ, ಕೊಲೆ, ಲೂಟಿ, ಎಲ್ಲಿ ನೋಡಿದರೂ ಇವೇ. ಅರಣ್ಯದಲ್ಲಿ ಶ್ವಾಪದಗಳು ವಿಧಿನಿಷೇಧಗಳೆಂಬ ನಿಯಮವನ್ನರಿಯದೆ ಒಂದನ್ನೊಂದು ಕೊಂದು ತಿನ್ನುವಂತೆ ನಡವಳಿಕೆಗಳು ನಡೆಯುತ್ತಿದ್ದವೆಂದರೆ ಕೇವಲ ಆತ್ಮ ರಕ್ಷಣೆಗಾಗಿ ಮಾಡುತ್ತಿದ್ದ ಅಕಾರ್ಯಗಳನ್ನು ಹೇಳಿದಂತಾಗುವುದೇ ಹೊರತು, ಪರಸ್ಪರ ಈರ್ಷ್ಯಾದ್ವೇಷಗಳಿಂದ ಸ್ವಕಾರ್ಯಸ್ವಾಮಿಕಾರ್ಯಗಳೆರಡನ್ನೂ ಕೆಡಿಸಿಕೊಂಡು ಪರರಿಗೆ ಅಪಕಾರವನ್ನು ಮಾಡುತ್ತಿದ್ದ ನಿತ್ಯವಾದ ಘೋರಕೃತ್ಯಗಳು ಬಿಟ್ಟು ಹೋಗುತ್ತವೆ. ಇದರಮೇಲೋ ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂದ ಹಾಗೆ ಐರೋಪ್ಯರು ಬೇರೆ ಯುಕ್ತಿ ಶಕ್ತಿಯಿಂದ ಇಲ್ಲಿಯವರನ್ನು ಸರ್ವಪ್ರಕಾರದಿಂದಲೂ ತುಳಿದು ರಾಜ್ಯವನ್ನು ಸ್ಥಾಪಿಸುತ್ತಾ ಬಂದರು. ಹಿಂದೂಸ್ಥಾನದ ಸ್ವರಾಜ್ಯ ಲಕ್ಷ್ಮಿಯ ಕಾಲಿಗೆ ಬಲವಾದ ಬೇಡಿಯು ಬಿದ್ದಿತು. ಕುಂಬಾರನು ವರ್ಷವೂ ಮಾಡಿದುದನ್ನು ದೊಣ್ಣೆಯು ನಿಮಿಷದಲ್ಲಿ ಪೂರೈಸಿತು. ಕರ್ಮ ಪರಿಪಾಕದಿಂದ ಈಶ್ವರಾನುಗ್ರಹವು ತಪ್ಪಿದರೆ ಎಲ್ಲವೂ ಹೀಗೆಯೇ.

ಈ ಅವಾಂತರದಲ್ಲಿ ಪ್ರಜೆಗಳಿಗೆ ಕ್ಷೇಮವೆಲ್ಲಿ ಬಂತು. ಅವರ ದುರವಸ್ಥೆಯನ್ನಂತೂ ಹೇಳುವುದಕ್ಕೇ ಸಾಧ್ಯವಿಲ್ಲ. ಅಧಿಪತಿಯು ಯಾರೋ ಅಧೀನರು ಯಾರೋ, ನಿಯಮವೇನೋ, ನಿಷೇಧವೇನೋ, ಮಿತ್ರರು ಯಾರೋ-ಶತ್ರುಗಳು ಯಾರೋ, ರಕ್ಷಕರು ಯಾರೋ, ಸಂಹಾರಕರು ಯಾರೋ, ಯಾವುದೂ ಗೊತ್ತೆಹತ್ತುತ್ತಿರಲಿಲ್ಲ. ಕೈಗಾರಿಕೆಗಳು ನಿಂತುಹೋದವು. ಕೃಷಿ ವಾಣಿಜ್ಯಗಳೆಂದರೆ ಆಸಕ್ತಿಯಿಲ್ಲ. ಮನೆ ಬಾಗಿಲುಗಳೇ ಗೊತ್ತಿಲ್ಲ. ಕರ್ತೃವೇ ಭೋಕ್ತೃವೆಂಬ ಧೈರ್ಯವಿದ್ದರೋ ಕಾರ್ಯದಲ್ಲಿ ಪ್ರವೃತ್ತಿ? ಕಳ್ಳರು, ಕಾಕರು, ಪಂಜುಕಳ್ಳರು, ಒಂದು ಬಗೆಯ ಕಳ್ಳರ ಉಪದ್ರವವಲ್ಲ. ಆ ದಂಡು ಬಂತು, ಈ ದಂಡು ಬಂತು, ಆ ಯುದ್ಧ, ಈ ಕದನ, ಆ ಮುತ್ತಿಗೆ, ಈ ಕೊಲೆ, ಮುಂತಾದ ರಾಜಿಕೋಪದ್ರವಗಳು ಬೇರೆ. ಅವರಿಗೆ ಕಪ್ಪ, ಇವರಿಗೆ ಕಾಣಿಕೆ, ಅವರ ಲೂಟಿ, ಇವರ ದರೋಡೆ, ಈ ಸುಲಿಗೆಗಳು ಬೇರೆ. ಮಳೆಯಿಲ್ಲ, ಬೆಳೆ ಹೋಯಿತು; ಬೆಳೆ ಬೆಳೆಯಿತು, ನಾಶವಾಯಿತು; ಕ್ಷಾಮ, ರೋಗ, ಜಾಡ್ಯ,ಮುಂತಾದ ದೈವಿಕೋಪದ್ರವಗಳು ಬೇರೆ, ಇಂಥಾ ಅಸಹ್ಯಸಂಕಟಕ್ಕೆ ಸಿಕ್ಕಿ ಯಾವ ಕ್ಷಣಕ್ಕೇನೋ ಎಂದು ಬಾಯಿಗೆ ಅಕ್ಕಿಯ ಕಾಳನ್ನು ಹಾಕಿಕೊಂಡು ಅವಶಿಷ್ಟವಾದ ಆಯುಷ್ಯವನ್ನು ವ್ಯತೀತ ಮಾಡುತ್ತಾ ಹುಟ್ಟಿದ ತಪ್ಪಿಗೆ ಇದ್ದೀಯಾ ಎಂದರೆ ಇದ್ದೇನೆ ಎಂದು ಇದ್ದರು.

ಮೈಸೂರು ಸಂಸ್ಥಾನದ ಪರಿಸ್ಥಿತಿಯೂ ಇದೇ ರೀತಿಯಾಯಿತು. ಕ್ರಿ. ಶ. ೧೭೩೪ ರಲ್ಲಿ ಶಿಶುವಾಗಿದ್ದ ಚಿಕ್ಕ ಕೃಷ್ಣರಾಜ ವಡೆಯರಿಗೆ ಪಟ್ಟವಾಯಿತು. ರಾಜ್ಯದ ಸರ್ವಾಧಿಕಾರವನ್ನು ನಡೆಸುತ್ತಿದ್ದ ನಂಜರಾಜಪ್ಪನವರು ದೈವಾಧೀನರಾದರು. ಆ ಮೇಲೆ ಸಜ್ಜನರ ಸರ್ವಾಧಿಕಾರವು ಬರಲಿಲ್ಲ. ದಳವಾಯಿ ದೇವರಾಜಪ್ಪನವರೂ ಇವರ ತಮ್ಮ ಕರಚೂರಿ ನಂಜರಾಜಪ್ಪನವರೂ ರಾಜ್ಯದ ಸರ್ವಾಧಿಕಾರವನ್ನು ಅಪಹರಿಸಿದರು. ಆರ್ಕಾಟಿನ ಸೇನೆಯನ್ನು ಕೈಲಂಚದ ಬಳಿ ಸೋಲಿಸಿದ ಕಾರಣ ದಳವಾಯಿಯವರ ಬಡಾಯಿಯು ಹೆಚ್ಚಾಯಿತು. ಇವರ ತಮ್ಮನು ಧಾರಾಪುರದ ಪಾಳಯಗಾರನನ್ನು ಗೆದ್ದು ಪ್ರಾಮುಖ್ಯಕ್ಕೆ ಬಂದನು. ನಂಜರಾಜಪ್ಪನ ಮಗಳನ್ನು ಆಳುವ ಅರಸಿಗೆ ಕೊಟ್ಟು ವಿವಾಹವಾಯಿತು. ನಂಜಪ್ಪನ ಕೈ ಮೇಲಾಯಿತು. ದಳವಾಯಿಯವರು ಎಂಥವರಾದರೂ ಅವರ ಪ್ರಕೃತಿಯಲ್ಲಿ ಸಹನೆಯೂ ಸೌಮ್ಯತೆಯೂ ಅಷ್ಟಿಷ್ಟಾದರೂ ಇತ್ತು. ತಮ್ಮಂದಿರಲ್ಲಿ ಅದೂ ಕೇಳಬೇಕಾದುದಿರಲಿಲ್ಲ. ಸಿಕ್ಕಿದ ವ್ಯಾಜ್ಯವನ್ನು ಗಂಟುಹಾಕಿಕೊಳ್ಳುತ್ತಿದ್ದರು. ತೋರಿದ ಕಡೆ ದಂಡೆತ್ತಿ ಹೋಗುತ್ತಿದ್ದರು. ಕೋಶವು ಬರಿದಾಯಿತು. ಉಪದ್ರವವು ಹೆಚ್ಚಿತು. ಅಸಮಾಧಾನವು ವೃದ್ಧಿಯಾಯಿತು. ಹೊರಗಿನವರ ಹಾವಳಿಯು ನಿತ್ಯವಾಯಿತು. ಮಾವ ಅಳಿಯನಿಗಾದರೂ ಸರಿಬಿತ್ತೆ ? ಅದು ಮೊದಲೇ ಇಲ್ಲ. ತಮಗೆ ದುಡ್ಡುಬೇಕು. ತಮ್ಮ ದಂಡಿಗೆ ದುಡ್ಡುಬೇಕು. ತಮ್ಮ ಜೈತ್ರಯಾತ್ರೆಗೆ ದುಡ್ಡುಬೇಕು ಮರಾಠೆಯವರಿಗೆ ಕಪ್ಪ, ನೈಜಾಮನಿಗೆ ಕಪ್ಪ, ಆರ್ಕಾಟಿನ ನವಾಬನಿಗೆ ಕಪ್ಪ, ತೆರಬೇಕು. ಆದಾಯವಿಲ್ಲ. ಸಂಚಯದ ಹೆಸರೇ ಇಲ್ಲ. ಪ್ರಜೆಗಳ ಸುಲಿಗೆ ಸೇವೆಯು ಆರಂಭವಾಯಿತು. ಪ್ರಜೆಗಳಿಗೆ ರಾಜಭಕ್ತಿಯು ಇರು ಅಂದರೆ ಏನಿದ್ದೀತು ?

ರಾಜನಿಗೆ ವಯಸ್ಸು ಬಂತು. ತನ್ನ ಅನಾಮಧೇಯತೆಗೆ ತನಗೇ ನಾಚಿಕೆಯಾಯಿತು. ದಳವಾಯಿಯವರ ಅಧಿಕಾರವನ್ನು ಮುರಿದು ಸ್ವತಂತ್ರನಾಗಬೇಕೆಂದು ಇಚ್ಛೆಯಾಯಿತು. ಇದಕ್ಕಾಗಿ ಎಲ್ಲರೂ ಕಂಡಹಾಗೆ ಪ್ರಯತ್ನಮಾಡಲು ಧೈರ್ಯವಿರಲಿಲ್ಲ; ಒಳಗೊಳಗೆಯೇ ಒಂದು ಕೂಟವಾಯಿತು. ರಾಜನ ಪಕ್ಷದವರನೇಕರು ಇದಕ್ಕೆ ಸೇರಿದರು. ಅಷ್ಟರಲ್ಲಿಯೇ ಕೂಟದ ಗುಟ್ಟು ಹೊರಬಿತ್ತು. ದಳವಾಯಿಯವರು ದೂರದೃಷ್ಟಿಯಿಟ್ಟು ಕ್ಷಮೆಯಿಂದಲೂ ಸಹನೆಯಿಂದಲೂ ಶಿಕ್ಷೆಯನ್ನು ವಿಧಿಸಬೇಕೆಂದು ತಮ್ಮನಿಗೆ ಬಹಳವಾಗಿ ಹೇಳಿದರು. ಕ್ರೂರ ಪ್ರಕೃತಿಯವನಾದ ನಂಜರಾಜನಿಗೆ ಇದು ಸರಿಬೀಳಲಿಲ್ಲ. ಆಳುವ ರಾಜನನ್ನು ಗದ್ದಿಗೆಯ ಮೇಲೆ ಕುಳ್ಳಿರಿಸಿ ಅವನೆದುರಿಗೆ ಅವನ ಪಕ್ಷದವರನ್ನು ಕರೆಸಿ ಅವರ ಕಿವಿ ಮೂಗುಗಳನ್ನು ಕೊಯಿಸಿದನು. ಆಳುವ ರಾಜನಿಗೆ ಅಧಿಕಾರವನ್ನು ಕೊಡಬೇಕೆಂದು ಪ್ರಯತ್ನಪಟ್ಟರೆ ಅದು ತಪ್ಪೆಂದು ಯಾರೂ ಹೇಳುವುದಿಲ್ಲ. ಈ ಘೋರ ಶಿಕ್ಷೆಗೆ ಸರ್ವರೂ ನಂಜರಾಜ ಅರಸಿನವರ ಮೇಲೆ ಜಗುಪ್ಸಿತರಾದರು. ದಳವಾಯಿಯವರಿಗೇ ಇದು

ಒಪ್ಪಲಿಲ್ಲ. ರಾಜಧಾನಿಯನ್ನು ಬಿಟ್ಟು ತಮ್ಮ ಪರಿವಾರದೊಡನೆ ಸತ್ಯಮಂಗಲಕ್ಕೆ ಹೊರಟುಹೋದರು. ನಂಜಪ್ಪನವರಿಗೆ ಬೆಂಬಲವು ಕಡಿಮೆಯಾಯಿತು. ಮಾಡಿ ದ್ದುಣ್ಣೋ ಮಹಾರಾಯ ಎಂಬಂತಾಯಿತು. ಈ ಸಂದರ್ಭದಲ್ಲಿ ದೊಡ್ಡ ವಿಪತ್ತೊಂ ದೊದಗಿತು. ಸೈನಿಕರ ಸಂಬಳವು ಬಹು ಕಾಲದಿಂದ ನಿಂತಿತ್ತು. ಕೇಳಿ ಕೇಳಿ ಸಾಕಾಗಿದ್ದರು. ಅವರನ್ನು ಯಾರೋ ಎತ್ತಿಕಟ್ಟಿಬಿಟ್ಟರು. ಸೈನಿಕರು ದಂಗೆ ಎದ್ದು ಸಂಬಳವನ್ನು ತೆಗೆದುಕೊಂಡೇ ಹೋಗುತ್ತೇವೆಂದು ನಂಜಪ್ಪನವರ ಮನೆಯ ಮುಂದೆ ಮುಷ್ಕರ ಹಿಡಿದು ಕೂತುಕೊಂಡುಬಿಟ್ಟರು. ದುಡ್ಡಿಲ್ಲ, ಸಹಾಯವಿಲ್ಲ, ಕೊಡು ವವರು ಮೊದಲೇ ಇಲ್ಲ. ಯಾರ ಸಹಾಯದಿಂದ ಬೇಕಾದ ಅತ್ಯಾಚಾರ ಅನಾ ಚಾರಗಳನ್ನು ಮಾಡುತ್ತಿದ್ದರೋ ಆ ಸೈನಿಕರು ದಂಗೆ ಎದ್ದರೆಂದರೆ ನಂಜಪ್ಪಾಜಿ ಯವರ ಅವತಾರವು ಅಲ್ಲಿಗೆ ಪೂರ್ತಿಯಾಯಿತು. ಆಗ ಲಿಂಗಪ್ಪಾಜಿಯವರಿಗೆ ದೈವ ಬಲವಿದ್ದು ಚಿತ್ತಶುದ್ಧಿ ಇದ್ದಿದ್ದರೆ ಸುಖವಾಗಿ ಮುಂದಕ್ಕೆ ಬಂದುಬಿಡುತ್ತಿದ್ದರು. ಅವರು ಬಂದಿದ್ದರೆ ಬಹುಶಃ ರಾಜ್ಯದಲ್ಲಿ ಶಾಂತಿಯೂ ವಿವೇಕವೂ ನೆಲೆಸುತ್ತಿತ್ತು. ಮುಂದೆ ಹೇಳುವ ಘೋರಸಂಘಟನೆಯಿಂದ ಇದಕ್ಕೆ ಅವಕಾಶವು ತಪ್ಪಿತು. ನಂಜ ಪ್ಪನವರು ಅಧಿಕಾರವನ್ನು ಹೈದರಲ್ಲಿಗೂ ಖಂಡೇರಾಯನಿಗೂ ವಹಿಸಿಬಿಟ್ಟರು.

ಹೈದರಲ್ಲಿಯೂ ಖಂಡೇರಾಯನೂ ಸೈನಿಕರನ್ನು ಬುದ್ಧಿಕುಶಲತೆಯಿಂದ ಸಮಾ ಧಾನಮಾಡಿ ತಾವು ಮುಂದಕ್ಕೆ ಬಂದುಬಿಟ್ಟರು. ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ ಎಂಬಂತೆ ರಾಜನಿಗೆ ಮೊದಲಿನವರಿಗೆ ಬದಲಾಗಿ ಮತ್ತಿಬ್ಬ ರಾದರು; ಸ್ವಾತಂತ್ರ್ಯವು ಬೇರೆ ಬರಲಿಲ್ಲ. ಮತ್ತೊಂದಾವೃತ್ತಿ ಪ್ರಯತ್ನವಾಯಿತು. ಖಂಡೇರಾಯನು ರಾಜನ ಪಕ್ಷವನ್ನು ವಹಿಸಿದನು. ಹೈದರಲ್ಲಿಯನ್ನು ಮುರಿಯುವ ಪ್ರಯತ್ನವಾಯಿತು. ಮೊದಮೊದಲು ಖಂಡೇರಾಯನಿಗೆ ವಿಜಯವಾಯಿತು. ಕಡೆಗೆ ಹೈದರಲ್ಲಿಯೇ ಗೆದ್ದುಬಿಟ್ಟನು. ಖಂಡೇರಾಯನು ಮೃತ್ಯುವಿನ ಪಾಲಾದನು ಹೈದರಲ್ಲಿಯು ನವಾಬನೆಂದು ಹೆಸರಿಟ್ಟುಕೊಂಡು ರಾಜ್ಯವನ್ನಾಳಿದನು.

## ೬ನೆಯ ಭಾಗ

ಅಕ್ಕಮ್ಮಣ್ಣಿಗೆ ಸೀತೆಯನ್ನು ಮಗನಿಗೆ ಕೊಡುವುದಿಲ್ಲವೆಂದು ನಿರ್ಧರವಾ ಯಿತು. ನಿರಾಸೆಯನ್ನು ಮಾಡಿಕೊಂಡು ಬಂದ ದಾರಿಯನ್ನು ಹಿಡಿಯುವುದಕ್ಕೆ ಎಲ್ಲರೆದುರಿಗೂ ಸೀತೆಯು ಮಗನನ್ನು ನಿರಾಕರಿಸಿ ರಾತ್ರಿ ಅವನನ್ನು ಹೀನಮಾನ ವಾಗಿ ಅಂದುದೂ, ದೊಡ್ಡವರು ಮಗನನ್ನು ನಿರಾಕರಣೆ ಮಾಡಿದುದೂ, ಕೇವಲ ಅಪ

ಮಾನಕ್ಕೆ ಕಾರಣವಾಯಿತು. ಇದನ್ನು ಸಹಿಸಿಕೊಂಡು ಸುಮ್ಮನಿರುವುದಕ್ಕಾಗಲಿಲ್ಲ. ಮನಸ್ಸಿಗೆ ದುರಾಲೋಚನೆಯೇ ತೋರಿತು. ಹೇಗಾದರೂ ಮಾಡಿ ಸೀತೆಗೆ ನಂಜುವಿನ ಕಯ್ಯಿಂದಲೇ ತಾಳಿಯನ್ನು ಕಟ್ಟಿಸಿ, ಇವರ ಸೊಕ್ಕನ್ನು ಮುರಿಯಬೇಕೆಂದು ಮನಸ್ಸಿನಲ್ಲಿ ಕ್ರೂರ ಸಂಕಲ್ಪವನ್ನು ಮಾಡಿಕೊಂಡಳು. ಹಾಳು ಹಠ ದೊಡ್ಡದು. ದುರಾಲೋಚನೆಗೆ ತಕ್ಕ ದುಸ್ಸಂಗ, ದುಸ್ಸಂಗಕ್ಕೆ ತಕ್ಕ ದುರಾಗತ, ದುರಾಗತಕೆ ತಕ್ಕ ದುರ್ಬುದ್ಧಿ, ಎಲ್ಲ ಸಂಪತ್ತೂ ಸೇರಿತು. ಕಾಲವೇ ವಿಷಮಕಾಲ. ಮೋಸ, ತಂತ್ರ, ಕೃತ್ರಿಮ ಸಂಧಾನ, ಮನೆಹಾಳುನಿದ್ಯೆ, ಎಂದರೆ ಆ ಕಾಲಕ್ಕೆ ಎತ್ತಿದ್ದು. ಜನರ ಅಭಿರುಚಿಯೂ ಇಂಥಾದ್ದರಲ್ಲಿಯೇ; ಮನಃಪ್ರವೃತ್ತಿಯೂ ಇಂಥಾ ಹೇಯ ಕಾರ್ಯಗಳಲ್ಲಿಯೇ ; ಅವರಿಗೆ ಸಹಾಯ ಸಂಪತ್ತಿಯೂ ಇಂಥಾ ಕುಕರ್ಮಗಳಿಗೋಸ್ಕರವೇ. ದುರಾಗತದ ಸಂಕಲ್ಪವನ್ನು ಮಾಡಿದುದೇ ತಡ, ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡಲಾರಂಭಿಸಿದಳು. ದುಷ್ಟಪ್ರತಿಭೆಯು ಶಾಖೋಪಶಾಖವಾಗಿ ಪ್ರವರ್ತಿಸಿ ಸರ್ವತೋಮುಖವಾಯಿತು.

ರಾಜಧಾನಿಯಲ್ಲಿ ಪರಸ್ಪರ ವಿರೋಧವಾದ ಎರಡು ಪಕ್ಷಗಳಿದ್ದವು. ರಾಜನ ಪಕ್ಷವೊಂದು, ಪ್ರಧಾನರ ಪಕ್ಷನೊಂದು ; ರಾಜನ ಪಕ್ಷದವರು ಬಲಹೀನರು, ಅಧಿಕಾರ ಹೀನರು ; ಆದರೆ ಕೃತ್ರಿಮಸಂಧಾನದಲ್ಲಿ ಅಗ್ರೇಸರರು. ಪ್ರಧಾನರ ಪಕ್ಷದವರು ಬಲಿಷ್ಠರು, ಅಧಿಕಾರಿಗಳು, ಅಧಿಕಾರಪ್ರಮತ್ತರು. ಲಿಂಗಪ್ಪನವರು ಪ್ರಧಾನರ ಪಕ್ಷದವರು. ವಸ್ತುತಃ ಇವರಮೇಲೆ ಯಾರಿಗೂ ಅಸೂಯಾದ್ವೇಷಗಳಿಲ್ಲದಿದ್ದರೂ ಪ್ರತಿಪಕ್ಷದವರೆಂದು ಇವರಮೇಲೆ ರಾಜನ ಪಕ್ಷದವರು ಕೈಮಾಡಲು ಹಿಂತೆಗೆಯುತ್ತಿರಲಿಲ್ಲ. ನಂಜರಾಜಅರಸಿನವರು ರಾಜನ ಪಕ್ಷದವರನ್ನು ಹಿಡಿದು ಅವರ ಕಿವಿಮೂಗುಗಳನ್ನು ಕೊಯ್ಯಿಸಿದಾಗಿನಿಂದಲಂತೂ ಅವರಿಗೆ ಪ್ರತಿಪಕ್ಷದವರ ಮೇಲೆ ಬದ್ಧದ್ವೇಷವಾಯಿತು. ಎಂಥಾ ನೀಚಕೃತ್ಯವನ್ನಾದರೂ ಸ್ವಲ್ಪವೂ ಹಿಂತೆಗೆಯದೆ ಮಾಡಿ ಪ್ರತಿಪಕ್ಷದವರಿಗೆ ಅಪಮಾನವನ್ನು ಮಾಡಲೇಬೇಕೆಂದು ಕಟಿಬದ್ಧರಾಗಿ ಸಮಯವನ್ನು ಕಾಯುತ್ತಿದ್ದರು.

ಅಕ್ಕಮ್ಮಣ್ಣಿಯವರಿಗೂ ಲಿಂಗಪ್ಪನವರ ಮನೆಯವರಿಗೂ ಸೀತೆಯನ್ನು ನಂಜುವಿಗೆ ಕೊಡುವ ವಿಷಯದಲ್ಲಿ ವೈಮನಸ್ಯವಾದುದೂ, ಅಕ್ಕಮ್ಮಣ್ಣಿಯು ಏನಾದರೂ ಮಾಡಿ ಮಗನ ಕಯ್ಯಿಂದಲೇ ಸೀತೆಗೆ ತಾಳಿಯನ್ನು ಕಟ್ಟಿಸಬೇಕೆಂದು ಸಂಕಲ್ಪ ಮಾಡಿದುದೂ, ಈ ಛಿದ್ರವು ರಾಜನ ಪಕ್ಷದವರಿಗೆ ಗೊತ್ತಾಯಿತು. ಸುಮ್ಮಸುಮ್ಮನೆ ಕತ್ತಿ ಕಟ್ಟುವವರು ಛಿದ್ರವು ದೊರೆತರೆ ಬಿಟ್ಟಾರೆ? ಸಿಕ್ಕಿತೆಂದು ಒಳಹೊಕ್ಕರು. ಅಕ್ಕಮ್ಮಣ್ಣಿಯ ಜತೆಗೆ ಸೇರಿದರು. ಅಂತರಂಗಗಳಾದವು, ದುರಾಲೋಚನೆಗಳಾದವು, ಕೃತ್ರಿಮ ಸಂಧಾನಗಳಾದವು, ಅಕ್ಕಮ್ಮಣ್ಣಿಯ ಅಭೀಷ್ಟವನ್ನು ಸರ್ವಥಾ ನೆರವೇರಿಸಿ ಲಿಂಗಪ್ಪನವರ ಮೂಗು ಕೊಯ್ದಂತೆ ಮಾಡಬೇಕೆಂದು ಅದಕ್ಕೆ ತಕ್ಕ ಏರ್ಪಾ

ಡುಗಳಾದವು. ಹೀಗೆಯೇ ಮಾಡಬೇಕೆಂದು ನಿರ್ಣಯವಾಗಿ ಸಮಯವನ್ನು ಕಾಯುತ್ತಿದ್ದರು.

ದಳವಾಯಿಯವರು ಸತ್ಯಮಂಗಲವನ್ನು ಸೇರಿಕೊಂಡರು. ನಂಜಪ್ಪನವರೊಬ್ಬರೇ ಆದರು. ಅವರ ಸೈನ್ಯದವರಿಗೆ ಸಂಬಳವಿಲ್ಲದೆ ಅಸಂತುಷ್ಟಿಯಾಗಿತ್ತು. ನಂಜಪ್ಪನವರ ಘೋರ ಕೃತ್ಯಕ್ಕೆ ರಾಷ್ಟ್ರವೇ ಅವರನ್ನು ನಿಂದಿಸಿತು. ಕಯ್ಯಲ್ಲಿ ಹಣವಿಲ್ಲ ; ಕೇಳುವುದಕ್ಕೆ ಮುಖವಿಲ್ಲ ; ಹಣವಿಲ್ಲದೆ ಪರಿಣಾಮವಾಗುವಹಾಗಿಲ್ಲ. ಲಿಂಗಪ್ಪಾಜಿಯುವರನ್ನು ಕರೆದು ಎಲ್ಲಿಯಾದರೂ ಅಷ್ಟು ಹಣವನ್ನು ತಂದ ಹೊರತು ಪರಿಣಾಮವಾಗುವುದಿಲ್ಲವೆಂದು ಹೇಳಿಕೊಂಡರು. ಅಧೀನ ಪಾಳಯಗಾರರಿಂದ ಆದಷ್ಟು ವಸೂಲು ಮಾಡಿಕೊಂಡು ಬರಲು ಲಿಂಗಪ್ಪಾಜಿಯುವರು ಫೌಜು ಸಮೇತವಾಗಿ ಹೊರಡಲೇಬೇಕಾಯಿತು. ಪ್ರವಾಸವು ದೀರ್ಘವೂ ಕಷ್ಟವೂ ಆದುದಾಗಿ ಕಂಡಿತು.

ಲಿಂಗಪ್ಪನವರು ಯಾವಾಗ ಎಲ್ಲಿಗೆ ಹೋಗಬೇಕಾದರೂ ಧೈರ್ಯವಾಗಿ ನುಗ್ಗುವುದೇ ಸ್ವಭಾವ. ಈ ಆವೃತ್ತಿ ಅವರ ಮನಸ್ಸು ಅಳುಕಿತು. ಏನೋ ಭಯವು ತೋರಿತು. ಮನೆಯವರಿಗೆಲ್ಲರಿಗೂ ಬೇಕಾದಷ್ಟು ಬುದ್ಧಿಯನ್ನು ಹೇಳಿದರು. ತೋರಿದ ಬಂದೋಬಸ್ತೆಲ್ಲವನ್ನೂ ಮಾಡಿದರು. ಅಲ್ಲಿಗೂ ಮನಸ್ಸಿನ ಉದ್ವೇಗವು ಶಾಂತವಾಗಲಿಲ್ಲ. ಏನಾದರೂ ಗುಟ್ಟಾಗಿ ಹೇಳಿ ಕಳುಹಿಸಬೇಕಾದ ಸಂದರ್ಭ ಬಿದ್ದರೆ ನಂಬಿಕೆಯ ಆಳಿನ ಮುಖಾಂತರ ಸಂದೇಶವನ್ನು ಕಳುಹಿಸಿ, ಪತ್ರವನ್ನು ಬರೆಯಬೇಡಿ, ನಾನೂ ಹಾಗೆಯೇ ಮಾಡುತ್ತೇನೆಂದು ಗೊತ್ತುಮಾಡಿದರು. ನಿಜವಾಗಿ ಕಳುಹಿಸಿದ ಆಳು ಎಂದು ತಿಳಿಯಬೇಕಾದರೆ ಯಾವುದಾದರೂ ಒಂದು ಸಂಕೇತ ಶಬ್ದವನ್ನು ಗೊತ್ತುಮಾಡಬೇಕಾಗಿ ಬಂತು. ಯಾವ ಶಬ್ದವನ್ನು ನಿರ್ಣಯ ಮಾಡೋಣವೆಂದು ಪತಿಪತ್ನಿಯರು ಅಂತರಂಗದಲ್ಲಿ ಆಲೋಚಿಸುತ್ತಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಹೊರಗೆ ಸೀತೆಯು ಆ ಗುಲಾಬಿ ಹೂವನ್ನು ನನಗೆ ಕೊಡೋ ಎಂದು ಕೂಗಿದಳು. ಉಪಶ್ರುತಿಯು ಸಂಕೇತಶಬ್ದದ ನಿರ್ಣಯಕ್ಕೆ ಅನುಕೂಲವಾಯಿತು. ‘‘ ಗುಲಾಬಿ ಹೂವು ” ಎಂದು ಹೇಳಿದರೆ ಅಲ್ಲಿಗೆ ನಿಜವಾದ ಆಳು ಎಂದು ಗೊತ್ತು ಎಂದು ಸಂಕೇತವೂ ನಿರ್ಣಯವಾಯಿತು. ಅಕ್ಕಮ್ಮಣ್ಣಿಯು ಹೊಂಚಿ ಕೇಳಿಕೊಂಡಳು. ಇದನ್ನರಿಯದೆ ಲಿಂಗಪ್ಪನವರು ಗುಟ್ಟು ಗುಟ್ಟಾಗಿದೆಯೆಂದು ಪ್ರಸ್ಥಾನವನ್ನು ಮಾಡಿಬಿಟ್ಟರು.

ಲಿಂಗಪ್ಪಾಜಿಯವರು ಹೋದ ಸ್ವಲ್ಪ ದಿನಗಳ ನಂತರ ಒಬ್ಬ ಸವಾರನು ಅತಿ ವೇಗವಾಗಿ ಬಂದು ಅವರ ಮನೆಯಮುಂದೆ ನಿಂತುಕೊಂಡನು. ಕುದುರೆಯನ್ನು ಕಟ್ಟಿಹಾಕಿ ಅಮ್ಮಣ್ಣಿಯವರನ್ನು ಕೂಡಲೇ ನೋಡಬೇಕೆಂದನು. ಕೆಲಸವೇನೆಂದರು. ಬುದ್ಧಿಯವರು ಕಳುಹಿಸಿದ್ದಾರೆ, ಗುಟ್ಟಾಗಿ ಹೇಳುವ ಮಾತಿದೆ ಅಂದನು. ರಾಜ

ಮ್ಮಣ್ಣಿಯವರಿಗೆ ತಿಳಿಸಿದರು. ಅವರು ಕೂಡಲೇ ಅವನನ್ನು ಕರೆಸಿಕೊಂಡರು. ಅಮ್ಮಣ್ಣಿಯವರಿಗೆ ಅಡ್ಡಬಿದ್ದು ಸವಾರನು ಕೈಕಟ್ಟಿಕೊಂಡು ನಿಂತನು. ಎಲ್ಲರನ್ನೂ ದೂರ ಕಳುಹಿಸಿ ರಾಜಮ್ಮಣ್ಣಿಯವರು ಸಂಕೇತವೇನು ಎಂದು ಕೇಳಿದರು.

ಸವಾರ—(ಮೆಲ್ಲನೆ) ಗುಲಾಬಿ ಹೂವು.

ರಾಜಮ್ಮಣ್ಣಿ—(ಮೆಲ್ಲಗೆ) ಬುದ್ಧಿಯವರ ಅಪ್ಪಣೆಯೇನು ಬೇಗ ಹೇಳು.

ಸವಾರ—ಬುದ್ಧಿಯವರ ಅಪ್ಪಣೆಯಾಯಿತು. ಸೀತಮ್ಮಣ್ಣಿಯವರಿಗೆ ನಾಳೆಯೇ ಮದುವೆ ಮಾಡಿಬಿಡಬೇಕಂತೆ. ನಂಜಪ್ಪನವರಿಗೇ ಕೊಟ್ಟುಬಿಡಬೇಕಂತೆ. ತಪ್ಪಿದರೆ ತುಂಬಾ ಅಪಮಾನವಾಗುತ್ತಂತೆ. ಯಾವುದೋ ನೀಚಸಂಬಂಧಕ್ಕೆ ಕೊಡಬೇಕಾಗುತ್ತಂತೆ. ಬುದ್ಧಿಯವರು ಮದುವೆಯಾಗಿಹೋಗಿದೆಯೆಂದು ಹೇಳಿಬಿಟ್ಟಿದ್ದಾರಂತೆ. ಈ ಮಾತು ಸುಳ್ಳಾದರೆ ಅವರ ಪ್ರಾಣಕ್ಕೇ ಬರುತ್ತಂತೆ. ಖಂಡಿತವಾಗಿ ಹೇಳು ಎಂದು ಅಪ್ಪಣೆಯಾಯಿತು. ಅಮ್ಮಣ್ಣಿಯವರ ಚಿತ್ತ.

ರಾಜಮ್ಮಣ್ಣಿಯ ಪಂಚಪ್ರಾಣಗಳೂ ಹಾರಿಹೋದವು. ದಿಕ್ಕೇ ತೋರಲಿಲ್ಲ. ಗಂಡನಿಗೇನು ಗತಿಯಾಗಿದೆಯೋ ? ಏನು ಸಂದರ್ಭವೋ ಒಂದೂ ತಿಳಿಯಲಿಲ್ಲ.

ರಾಜ— ಯಜಮಾನರು ಸೌಖ್ಯವಾಗಿದ್ದಾರೇನಪ್ಪಾ ?

ಸವಾ—ಇದ್ದಾರಮ್ಮಣ್ಣಿ.

ರಾಜ—ಅದೇನು ಸಂದರ್ಭ, ವಿಸ್ತಾರವಾಗಿ ಹೇಳಪ್ಪ.

ಸವಾ—ನನಗೆ ತಿಳಿಯದು ತಾಯಿ.

ರಾಜ—ಯಜಮಾನರು ಬರುತ್ತಾರೇನಪ್ಪಾ ?

ಸವಾ—ಇಲ್ಲಮ್ಮಣ್ಣಿ.

ರಾಜ—ಅಂತೂ ಮದುವೆಯನ್ನು ಮಾಡಲೇಬೇಕೆಂದು ಅಪ್ಪಣೆಯಾಯಿತೇನಪ್ಪ ?

ಸವಾ—ಆಯಿತಮ್ಮಣ್ಣಿ. ''ಮದುವೆಯಾಗದಿದ್ದರೆ ಪ್ರಾಣಕ್ಕೇ ಬರುತ್ತೆ. ಇಲ್ಲ, ಮಗಳನ್ನು ನೀಚ ಕುಲದವನಿಗೆ ಕೊಡಬೇಕಾಗುತ್ತೆ. ಇಲ್ಲ, ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತೆ. ಖಂಡಿತವಾಗಿ ಹೇಳು'' ಎಂದು ಅಪ್ಪಣೆಯಾಯಿತಮ್ಮಣ್ಣಿ. ಅವರ ಕಡೆಯವರು ವಿಚಾರಿಸಲು ೨-೩ ದಿನಗಳಲ್ಲಿಯೇ ಗುಟ್ಟಾಗಿ ಇಲ್ಲಿಗೆ ಬರುತ್ತಾರಂತೆ. ಅಷ್ಟರಲ್ಲಿ ಮದುವೆಯಾಗಿರಬೇಕು. ಇಲ್ಲದಿದ್ದರೆ ಬುದ್ಧಿಯವರಿಗೆ ಕಷ್ಟ ಬರುತ್ತಮ್ಮಣ್ಣಿ.

ಸವಾರನು ಕೈ ಮುಗಿದು ಹೊರಟು ಹೋದನು. ರಾಜಮ್ಮಣ್ಣಿಗೆ ಸ್ವಲ್ಪ ಹೊತ್ತು ಏನೂ ತೋರಲಿಲ್ಲ. ನಂಜಪ್ಪನಿಗೆ ಹೆಣ್ಣುಕೊಡಲು ಸರ್ವಥಾ ಮನಸ್ಸಿರಲಿಲ್ಲ. "ಮದುವೆ ಯಾಗಿರಬೇಕು. ಮದುವೆಯೇ ಮುಖ್ಯತಾನೆ, ಆಗಲಿ ಗುಂಡನಿಗೇ ಕೊಟ್ಟುಬಿಡುತ್ತೇನೆ" ಎಂದು ನಿಶ್ಚಯವನ್ನು ಮಾಡಿಕೊಂಡಳು. ಅದಕ್ಕೆ ಅಪ್ಪಾಜಿಯವರ ಆಜ್ಞೆಯಾಗ ಬೇಕು. ಅದೇ ಸವಾರನನ್ನು ಕರೆಸಿ "ಕೂಡಲೇ ಯಜಮಾನರ ಹತ್ತಿರಕ್ಕೆ ಹೋಗಿ ನಂಜುವಿಗೆ ಬೇಡ, ಗುಂಡನಿಗೆ ಕೊಡುತ್ತೇನೆ ಅಪ್ಪಣೆಯಾಗಬೇಕು, ಎಂದು ಕೇಳಿಕೊಂಡು ನಾಳೆ ಸಾಯಂಕಾಲದೊಳಗಾಗಿ ಬಾ" ಎಂದು ಹೇಳಿ ಕಳುಹಿಸಿದಳು. ರಾತ್ರಿಯೆಲ್ಲಾ ನಿದ್ರೆ ಹತ್ತಲಿಲ್ಲ. ಬೆಳಗಾಗ ಏನೂ ತೋರದು. ಅಕ್ಕಮ್ಮಣ್ಣಿಯು ಅದೇನು ವರ್ತಮಾನ ಎಂದು ನಾದಿನಿಯನ್ನು ನಾಲ್ಕಾರಾವೃತ್ತಿ ಒತ್ತಿ ಕೇಳಿದಳು. ರಾಜಮ್ಮಣ್ಣಿಯು ಏನೋ ಬಾಯಿಗೆ ಬಂದುದನ್ನು ಹೇಳಿದಳು, ನಿಜವನ್ನು ಹೇಳಲಿಲ್ಲ. ಅಕ್ಕಮ್ಮಣ್ಣಿಗೆ ಕೋಪವೇ ಬಂತು. ಎಲ್ಲಿಗೋ ಹೊರಟು ಹೋದಳು. ಹೋದರೆ ಪೀಡೆಯೇ ಕಳೆಯಿತೆಂದು ರಾಜಮ್ಮಣ್ಣಿಯು ಉಪೇಕ್ಷೆಮಾಡಿಬಿಟ್ಟಳು.

ಹಿಂದಿನ ದಿವಸ ಬೇಗ ಬರುತ್ತೇನೆಂದು ಹೇಳಿ ಗಂಜಾಮಿಗೆ ಹೋದ ಗುಂಡನು ಸಾಯಂಕಾಲಕ್ಕೂ ಬರಲಿಲ್ಲ, ರಾತ್ರಿಯೂ ಬರಲಿಲ್ಲ, ಬೆಳಗಾದರೂ ಬರಲಿಲ್ಲ. ಅವನೇನಾದನೋ ಎಂದು ಸಂಶಯ ಬಂತು. ಯಜಮಾನರಿಂದ ವರ್ತಮಾನವು ಬರುವ ಹೊತ್ತಿಗೆ ಅವನಿರಬೇಕು ಎಂದು ಒಬ್ಬೊರಮೇಲೊಬ್ಬರನ್ನು ಗಂಜಾಮಿಗೆ ಅಟ್ಟಿದಳು. ಗುಂಡನು ನಿನ್ನೆಯ ಸಾಯಂಕಾಲವೇ ಪಟ್ಟಣಕ್ಕೆ ಹೋದನೆಂದು ವರ್ತಮಾನವು ಬಂತು. ಪಟ್ಟಣದಲ್ಲೆಲ್ಲಾ ಹುಡುಕಿಸಿದಳು, ಸಿಗಲಿಲ್ಲ. ಇದೊಂದು ಕೊರತೆಯು ಹತ್ತಿತು. ಪಾಪ, ರಾಜಮ್ಮಣ್ಣಿಯು ಊಟವನ್ನು ಸಹ ಮಾಡಲಿಲ್ಲ. ತನ್ನನ್ನು ಸೃಷ್ಟಿಸಿದ ವಿಧಿಯನ್ನೂ ತನ್ನ ದುರದೃಷ್ಟವನ್ನೂ ನಿಂದಿಸಿಕೊಳ್ಳುತ್ತಾ ಅಳುತ್ತಾ ದಿನವೆಲ್ಲಾ ವ್ಯಸನಪಡುತ್ತಿದ್ದಳು. ರಾತ್ರಿ ಎಂಟು ಗಂಟೆ ಹೊಡೆದು ಹೋಗಿತ್ತು. ಮತ್ತೊಬ್ಬ ಸವಾರನು ಬಂದನು. ಬಹು ಆತುರವಾಗಿ ಒಳಗೆ ಕರೆಸಿಕೊಂಡಳು. ಪ್ರಣಾಮ ಮಾಡಿ ಗುಲಾಬಿ ಹೂವೆಂದು ಸಂಕೇತ ಪದವನ್ನು ಹೇಳಿದನು. ವರ್ತಮಾನವೇನೆಂದಳು.

ಸವಾರ—ಅಮ್ಮಣ್ಣಿಯವರು ಕಳುಹಿಸಿದ ಆಳು ಬುದ್ಧಿಯವರಿಗೆ ಹೇಳಿದ. ಅವನು ಬರಲಿಲ್ಲ. ಬುದ್ಧಿಯವರು ನನ್ನನ್ನು ಕಳುಹಿಸಿದರು.

ರಾಜ—ಏನು ಹೇಳಿದರು ?

ಸವಾ—ಗುಂಡಪ್ಪನವರಿಗೆ ಕೊಡಕೂಡದಂತೆ. ನಂಜಪ್ಪನವರಿಗೇ ಕೊಡಬೇಕಂತೆ. ಇನ್ನೂ ಮದುವೆ ಮಾಡಲಿಲ್ಲವೆ ಅಂತ ಬುದ್ಧಿಯವರು ಚಿತ್ತಕ್ಕೆ ಶಾನೆ

ಬೇಸರಮಾಡಿಕೊಂಡರು ಅಮ್ಮಣ್ಣಿ. ನಾನು ಜೀವ ಸಹಿತ ಬರಬೇಕೆಂದಿದ್ದರೆ ನಾನು ಹೇಳಿದಂತೆ ಮಾಡಲಿ. ಇಲ್ಲದಿದ್ದರೆ ನನ್ನ ಗತಿಯಾಯಿತು ಎಂದು ಹೇಳಿಬಿಡು, ಅಂತ ಬುದ್ಧಿಯವರ ಅಪ್ಪಣೆಯಾಯಿತು. (ಎಂದು ಹೇಳಿ ಹೊರಟುಹೋದನು.)

ರಾಜಮ್ಮಣಿಯು ಬಹಳ ಇಕ್ಕಟ್ಟಿಗೆ ಸಿಕ್ಕಿಕೊಂಡಳು. ಚಿಕ್ಕಂದಿನಿಂದ ಸಾಕಿದ ಗುಂಡನೂ ಸಮಯಕ್ಕಿಲ್ಲ. ಅವನಿಗೆ ಕೊಡುವುದಕ್ಕೆ ಅರಸಿನವರ ಆಜ್ಞೆಯೂ ಇಲ್ಲ. ಬೇಗ ಮಾಡಲೇಬೇಕಾಗಿ ಬಂತು. ಅಕ್ಕಮ್ಮಣ್ಣಿಯು ಅಷ್ಟು ಹೊತ್ತಿಗೆ ಬಂದಳು. "ಏನು ವರ್ತಮಾನ? ಲಿಂಗಪ್ಪ ಸ್ವಸ್ಥವಾಗಿದ್ದಾನೆಯೇ?" ಎಂದು ಕೇಳಿದಳು. ಹೇಳಬೇಕಾಗಿ ಬಂತು. ಹೇಳಿದಳು. ನಡೆದುದೆಲ್ಲಾ ನಿಜವಲ್ಲ; ರಾಜನ ಪಕ್ಷದವರು ಅಕ್ಕಮ್ಮಣ್ಣಿಯ ಜತೆಗೆ ಸೇರಿ ನಡೆಸಿದ ಕೃತ್ರಿಮಸಂಧಾನ. ಬಂದ ಸವಾರರಿಬ್ಬರನ್ನೂ ಕಳುಹಿಸಿದವರು ರಾಜನ ಪಕ್ಷದವರು. ಅವರು ಹೇಳಿದುದೆಲ್ಲಾ ಸುಳ್ಳು. ಸಂಕೇತ ಶಬ್ದವನ್ನು ಅಕ್ಕಮ್ಮಣ್ಣಿಯೇ ಹೊಂಚಿ ಕೇಳಿಕೊಂಡು ಅವರಿಗೆ ತಿಳಿಸಿದ್ದು. ಅದು ತಿಳಿದುದರಿಂದ ಅವರು ಇಷ್ಟು ಸಂಧಾನವನ್ನು ಮಾಡಿಬಿಟ್ಟರು. ಗುಂಡನಿಗೆ ಕೊಡುತ್ತೇನೆಂದು ರಾಜಮ್ಮಣ್ಣಿಯು ಹೇಳಿದುದೂ ಶತ್ರುಪಕ್ಷದವರಿಗೆ ಸವಾರನ ಮುಂಖಾಂತರ ತಿಳಿದುಹೋಯಿತು. ಅದಕ್ಕೆ ಅವರ ಕಡೆಯವರು ಗಂಜಾಮಿನಿಂದ ಬರುತ್ತಿದ್ದ ಗುಂಡನನ್ನು ಹಿಡಿದು ಬಾಯಿಗೆ ಬಟ್ಟೆಯನ್ನು ತುರುಕಿ ಕಣ್ಣು ಕಟ್ಟಿ ಕತ್ತಲೆಯ ಮನೆಗೆ ಕೂಡಿಬಿಟ್ಟರು. ಇಷ್ಟೂ ಮಾಡಿಸಿದವಳು ಅಕ್ಕಮ್ಮಣ್ಣಿ. ಬೆಣ್ಣೆಯನ್ನು ತಿಂದ ಬೆಕ್ಕಿನಂತೆ "ಇಂಥ ಕಕ್ಕಲಾತಿ ಮದುವೆ ಯಾರಿಗೆ ಬೇಕು? ಲಿಂಗಪ್ಪಾಜಿ ಬರಲಿ. ಅವನೇ ಧಾರೆ ಎರೆಯಲಿ. ಮಾಡುವುದೆಲ್ಲಾ ಮಾಡಿ. ನಾನು ತಂದುಕೊಳ್ಳುತ್ತೇನೆ. ಹೀಗೆ ಕಂಗಾಳಿಗೆ ಮಾಡುವಂತೆ ಮಾಡಿದರೆ ನಾನು ಮಾಡಿಕೊಳ್ಳುವುದಿಲ್ಲ". ಎಂದು ಬೇಕೆಂದು ಬೇಳವೆಯ ಮಾತನಾಡಿದಳು. ಅವಳಿಗೆ ಎಷ್ಟೋ ಸಮಾಧಾನವನ್ನು ಹೇಳಿ ಒಪ್ಪಿಸಬೇಕಾಯಿತು. ಹಿಂದೆ ರಾಜಮ್ಮಣ್ಣಿಯು ತೋರಿಸಿದ ಬಿಂಕಕ್ಕೆ ಈಗ ಅವಳನ್ನು ಬೇಕಾದಷ್ಟು ಗೋಳಾಡಿಸಿ ಕಡೆಗೆ ಅಕ್ಕಮ್ಮಣ್ಣಿಯು ಒಪ್ಪಿದಳು. ಸೀತೆಯು ಒಲ್ಲೆನೆಂದು ಅತ್ತಳು. ಅವಳಿಗೆ ಬೇಕಾದಷ್ಟು ಸಮಾಧಾನವನ್ನು ಹೇಳಿ ಒಪ್ಪಿಸಿದರು. ಹುಡುಗಿ, ತಿಳಿಯದು, ಅಳುತ್ತಾ, ಬಲ್ಲೆನೆಂದೆನ್ನುತ್ತಾ, ಒಪ್ಪಿಕೊಂಡಳು. ಮಾರನೆಯ ದಿವಸವೇ ಆಗಲಿ ಎಂದು ಅಕ್ಕಮ್ಮಣ್ಣಿಯು ಹೇಳಿದಳು. ಮುಹೂರ್ತ ದೊರೆಯಲಿಲ್ಲ. ಮೂರನೆಯ ದಿವಸ ಸರಿಯಾಗಿತ್ತು. ಮದುವೆಯು ಗೊತ್ತಾಯಿತು. ಬೇಡವೆಂದು ಹೇಳಿದ ಅಕ್ಕಮ್ಮಣ್ಣಿಯ ಸಡಗರಕ್ಕೆ ಕೊನೆ ಮೊದಲೇ ಇಲ್ಲದೆ ಹೋಯಿತು ಬಲವಂತ ಮಾಡಿದ ರಾಜಮ್ಮಣ್ಣಿಯು ಮನಸ್ಸಿಲ್ಲದೆ ಅಳುತ್ತಾ ಮದುವೆಯ ಅಣಿಯನ್ನು ಮಾಡಿದಳು.

ಲಿಂಗಪ್ಪನವರು ಹಾಸನ, ಚಿತ್ರದುರ್ಗ, ಸೀರಾ, ಕೋಲಾರ, ಇವುಗಳನ್ನು ಸುತ್ತಿಕೊಂಡು ದೇವನಹಳ್ಳಿಗೆ ಬಂದರು. ದ್ರವ್ಯ ಸಂಚಯವೂ ತಕ್ಕಮಟ್ಟಿಗೆ ನಡೆ

ಯಿತು, ಬಹು ಕಟ್ಟುನಿಟ್ಟಿಗೆ ಬಂದಿದೆ, ಸಿಕ್ಕಿರುವಷ್ಟು ಬೇಗ ತರಬೇಕೆಂದು ಕರಚೂರಿ ನಂಜಪ್ಪನವರ ನೀರೂಪವು ಬಂತು. ಸೇನೆಯವರು ಇಷ್ಟರಲ್ಲಿಯೇ ದಂಗೆ ಮಾಡುವರೆಂಬ ವರ್ತಮಾನವೂ ತಿಳಿಯಿತು. ಬೆಳಗಾಗ ಹೊರಡಬೇಕೆಂದು ಗೊತ್ತುಮಾಡಿಕೊಂಡರು. ರಾತ್ರಿ ನಿದ್ದೆ ಹತ್ತಲಿಲ್ಲ. ಏನೋ ಮನಸ್ಸಿಗೆ ತುಂಬಾ ವ್ಯಾಕುಲವಾಗಿದ್ದಿತು. ರಾತ್ರಿಯ ಮೂರನೆಯ ಭಾಗದಲ್ಲಿ ನಿದ್ರೆ ಹತ್ತಿತು. ಸ್ವಪ್ನವಾಯಿತು. ಸೀತೆಯನ್ನು ಯಾರೋ ದುಷ್ಟರು ಅಪಹರಿಸಿಕೊಂಡು ಹೋಗು ವಂತೆಯೂ ರಾಜಮ್ಮಣ್ಣಿಯು ಅಳುತ್ತಿರುವಂತೆಯೂ ಘೋರವಾದ ಕನಸನ್ನು ಕಂಡರು. ಮನಸ್ಸಿಗೆ ಶಾನೆ ವ್ಯಾಕುಲವಾಯಿತು. ಎದ್ದ ಕೂಡಲೇ ಚಿಕ್ಕದೇವಪ್ಪನವರನ್ನು ಕರೆಸಿ ಸೈನ್ಯವನ್ನೂ ಹಣವನ್ನೂ ತರುವಂತೆ ನೇಮಿಸಿ ಕೆಲವು ನಂಬಿಕೆಯ ಆಳು ಗಳನ್ನು ಜತೆಯಲ್ಲಿ ಕರೆದುಕೊಂಡು ಪಟ್ಟಣಕ್ಕೆ ಹಿಂತಿರುಗಿ ಪಯಣದ ಮೇಲೆ ಪಯಣವನ್ನು ಮಾಡಿದರು. ಎಷ್ಟು ಬೇಗ ಬಂದರೂ ದಾರಿಯು ಸವೆಯಬೇಕು. ಕುದುರೆಗಳು ಹುಲ್ಲು ತಿಂದು ನೀರು ಕುಡಿದು ಸ್ವಲ್ಪವಾದರೂ ಸುದಾರಿಸಿಕೊಳ್ಳ ಬೇಕು. ದಾರಿಯು ಸವೆಯುವುದಕ್ಕೆ ದಿನವೆಲ್ಲವೂ ಹಿಡಿಯಿತು. ಅಷ್ಟರಲ್ಲಿ ಪಟ್ಟಣದಲ್ಲಿ ಗುಟ್ಟಿನ ವಿವಾಹವಾಗಿ ಹೋಯಿತು. ಅಕ್ಕಮ್ಮಣ್ಣಿಯವರ ಪರವಾಗಿ ರಾಜನಿಗೂ ರಾಣಿಗೂ ಬರಬೇಕೆಂದು ವಿನಂತಿಯಾಯಿತು. ಅವರೂ ಅವರ ಕಡೆಯವರೂ ಬಂದಿದ್ದರು. ಸಪ್ತಪದಿಯೂ ಮುಗಿಯಿತು. ಲಿಂಗಪ್ಪನವರ ಕುದುರೆಯೂ ಬಾಗಿಲಿನಲ್ಲಿ ಗಟ್ಟಿಯಾಗಿ ಕೆನೆಯಿತು. ಹೊರಗಿನಿಂದ ಬಾಗಿಲು ತಟ್ಟಿದರು. ಒಳಗೆ ಸೇರಿದ್ದ ಕೃತ್ರಿಮ ಸಂಧಾನದವರ ಎದೆಯು ಬಡಿದುಕೊಳ್ಳುವುದಕ್ಕಾರಂಭಿ ಸಿತು. ಬಾಗಿಲು ತೆರೆದರು. ಕಪಟಿಗಳು ತಮ್ಮ ಗತಿಯೇನಾಗುವುದೋ ಎಂದು ಬಾಯಿ ಬಾಯಿ ಬಿಟ್ಟರು. ಲಿಂಗಪ್ಪನವರು ಒಳಗೆ ಬಂದರು. ಎಲ್ಲಿಯವರಲ್ಲಿಯೇ ಅಡಗಿದರು. ಹಸೆಯ ಜಗುಲಿಯ ಮೇಲೆ ವಧೂವರರು ನಿಂತಿದ್ದರು. ದೃಶ್ಯವು ದಿಗ್ಭ್ರಮೆಯನ್ನುಂಟುಮಾಡಿತು. ಸೀತೆಯು ಓಡಿ ಬಂದು ತಂದೆಯನ್ನು ಅಪ್ಪಿಕೊಂಡು ಚೆನ್ನಾಗಿ ಗೊತ್ತಾಗದಿದ್ದರೂ ಒಳಗೆ ಕುದಿಯುತ್ತಿದ್ದ ವ್ಯಸನಕ್ಕೆ ಪರವಶಳಾಗಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಇದೇನೆಂದು ಕೇಳಲು ಆಗ ಸಂಗತಿಯು ತಿಳಿಯಿತು. ಲಿಂಗಪ್ಪನವರಿಗೆ ಕಾಲಾಗ್ನಿಯಂತೆ ಕೋಪವೆದ್ದಿತು. ಹೇಗೆ ಹೇಗೋ ತಡೆದುಕೊಂಡರು.

ಲಿಂಗ—(ಪುರೋಹಿತರನ್ನು) ಮದುವೆಯು ಎಲ್ಲಿಯವರೆಗಾಯಿತು ?

ಶಾಸ್ತ್ರಿ—ಪೂರ್ತಿಯಾಯಿತು.

ಲಿಂಗ— ಈಗಲೂ ನಿಲ್ಲಿಸುವುದಕ್ಕವಕಾಶವುಂಟೋ ?

ಶಾಸ್ತ್ರಿ—ಉಂಟೇ! ಪೂರ್ತಿಯಾಗಿ ಹೋಯಿತು. ಸೀತಮ್ಮಣ್ಣಿಯು ಅವರಗೋ ತ್ರಕ್ಕೆ ಸೇರಿಕೊಂಡಳು. ಇನ್ನು ಅವಕಾಶವಿಲ್ಲ. ಅದು ಸಪ್ತಪದಿಗೆ ಮೊದಲು ಇತ್ತು.

ಲಿಂಗ – ಅಯ್ಯೋ ಶತ್ರುಗಳು ಕೈಕೊಟ್ಟರು !

ಲಿಂಗಪ್ಪಾಜಿಯವರ ಎದೆಯು ಒಡೆದುಹೋಯಿತು. ರಾಜಮ್ಮಣ್ಣಿಯಂತೂ ಅತ್ತೂ ಅತ್ತೂ ಅರೆಯಾಗಿ ಹೋದಳು. ಏನು ಮಾಡುವುದಕ್ಕೂ ಕೈ ಮೀರಿ ಹೋಗಿತ್ತು. ಅಂತೂ ಚೆನ್ನಾಗಿದ್ದೊಂದು ಸಂಸಾರದಲ್ಲಿ ಪರಾಯತ್ತವಾದ ವ್ಯಸನವು ತಲೆಯಿಕ್ಕಿ ಶಾಶ್ವತವಾಗಿ ನೆಲೆಸಿಬಿಟ್ಟಿತು. ರಾಜಧಾನಿಯಲ್ಲೊಂದೊಳ್ಳೆಯ ಪ್ರಾಣಿಯಿತ್ತು. ಅದು ಮೇಲಕ್ಕೆ ಬಂದಿದ್ದರೆ ಸರ್ವರಿಗೂ ಕ್ಷೇಮವಾಗುತ್ತಿತ್ತು. ಕಾಲವೂ ಪರಿಪಕ್ವವಾಗಿ ಅನುಕೂಲಿಸಿತ್ತು. ಹಾಳಭಾಗಧೇಯವು ಹೀಗಿತ್ತು. ಸಂಸ್ಥಾನದವರ ಪಾಪವಿನ್ನೂ ಸವೆದಿರಲಿಲ್ಲವೆಂದೇ ಹೇಳಬೇಕು. ಇವರಿಗೆ ತಪ್ಪಿತು. ಖಂಡೇರಾಯನೂ ಹೈದರಲ್ಲಿಯೂ ಪ್ರಾಮುಖ್ಯತೆಗೆ ಬಂದರು.

ಮದುವೆಯ ಕೆಲಸವೂ ಅಲ್ಲಿಗೇ ಪರಿಸಮಾಪ್ತಿಯಾಯಿತು. ಅಕ್ಕಮ್ಮಣ್ಣಿಯು ಮಾತೇ ಆಡಲಿಲ್ಲ. ಬಂದಿದ್ದವರೆಲ್ಲರೂ ಹೇಳದೇಕೇಳದೇ ಓಟ ಹಾಕಿದರು. ಗುಂಡನೆಲ್ಲಿಯೋ ತಪ್ಪಿಸಿಕೊಂಡನೆಂದು ತಿಳಿಯಿತು. ಲಿಂಗಪ್ಪನವರು ಗುಂಡ ಬರದಿರಲಿ, ಈ ಫಿತೂರಿಗೆ ಸೇರಿದವರೆಲ್ಲರನ್ನೂ ಒಂದುಕಡೆಯಿಂದ ಬಲಿ ಹಾಕುತ್ತೇನೆಂದು ಅಬ್ಬರಿಸಿದರು. ಅಕ್ಕಮ್ಮಣ್ಣಿಯ ಮುಖವು ಕೆಟ್ಟಿತು. ಲಿಂಗಪ್ಪನವರು ಕಂಡರು. ಅನುಮಾನವಾಯಿತು. ಅಕ್ಕಮ್ಮಣ್ಣಿಯು ಬೇಗ ಎದ್ದು ಒಬ್ಬಳೇ ಎಲ್ಲಿಗೋ ಹೋಗಿ ಬಂದಳು. ಹಿಂದೆಯೇ ಗುಂಡನೂ ಬಂದನು. ಲಿಂಗಪ್ಪನವರಿಗೆ ಮತ್ತಷ್ಟು ಅನುಮಾನವಾಯಿತು.

ಲಿಂಗ — ಗುಂಡ, ಎಲ್ಲಿ ಹೋಗಿದ್ದೆ.

ಗುಂಡ — ಸಾಯಂಕಾಲ ಗಂಜಾಮಿನಿಂದ ಬರುತ್ತಿದ್ದೆ. ಮುಖ ಕತ್ತಲೆಯಾಗಿತ್ತು. ಯಾರೋ ಶಾನೆ ಜನ ಹಿಂದಿನಿಂದ ಬಂದು ಭದ್ರವಾಗಿ ಹಿಡಿದುಕೊಂಡು ಬಾಯಿಗೆ ಬಟ್ಟೆಯನ್ನು ತುರುಕಿದರು. ಕಣ್ಣು ಕಟ್ಟಿದರು. ಎಲ್ಲಿಗೋ ಕರೆದುಕೊಂಡು ಹೋಗಿ ಕತ್ತಲುಮನೆಗೆ ಕೂಡಿದ್ದರು ಈಗ ಅಕ್ಕಮ್ಮಣ್ಣಿಯವರು ಬಂದು ಬೇಗ ಬಿಟ್ಟುಬಿಡಿ ಎಂದರು. ಬಿಟ್ಟುಬಿಟ್ಟರು.

ಅಲ್ಲಿಗೆ ಸಂದೇಹನಿವೃತ್ತಿಯಾಯಿತು. ಅಕ್ಕಮ್ಮಣ್ಣಿಯೂ ಫಿತೂರಿಗೆ ಸೇರಿದ್ದಳೆಂದು ಗೊತ್ತಾಯಿತು. ಲಿಂಗಪ್ಪನವರು ಅವಳಮೇಲೆ ಬೇಕಾದಷ್ಟು ಕೂಗಾಡಿದರು. ಅಕ್ಕಮ್ಮಣ್ಣಿಯ ಮುಖವು ಕೆಟ್ಟುಹೋಯಿತು. ನಿಜವನ್ನು ಹೇಳಲಿಲ್ಲ; ಅತ್ತುಬಿಟ್ಟಳು. ಅಂದು ಪ್ರಯೋಜನವಿಲ್ಲವೆಂದು ಲಿಂಗಪ್ಪನವರು ತಮ್ಮಷ್ಟಕ್ಕೆ ತಾವೇ ಸುಮ್ಮನಾಗಬೇಕಾಯಿತು. ಸೀತೆಯು ಮತ್ತೆ ಅತ್ತಳು.

ಲಿಂಗ – (ಮಗಳನ್ನು) ಅಳಬೇಡ ಸುಮ್ಮನಿರಮ್ಮ.

ಸೀತೆ—(ಅಳುತ್ತಾ) ಅಪ್ಪಾಜೀ, ಅಮ್ಮಣ್ಣಿ ನನ್ನನ್ನು ಒಲ್ಲೆ ಅಂದರೂ ಹಾಳ ನಂಜೂಗೆ ಕೊಟ್ಟುಬಿಟ್ಟಳು. ನಾನು ಗುಂಡನನ್ನು ಮಾಡಿಕೊಳ್ಳಬೇಕಾಗಿತ್ತು.

ಲಿಂಗ—ಅಳಬೇಡವಮ್ಮ ಸುಮ್ಮನಿರು. ನಿಮ್ಮಮ್ಮ ನಂಜೂಗೆ ಕೊಡಲಿಲ್ಲ. ಯಾರೋ ಮೋಸಮಾಡಿಬಿಟ್ಟರು. ಈ ಹೊತ್ತಿನಿಂದ ನೀನು ನನಗೆ ಮಗಳಲ್ಲ, ಮಗ. ನಮ್ಮ ಮನೆಯಲ್ಲಿಯೇ ಇರುವಂತೆ ; ಅವರ ಮನೆಗೆ ಕಳುಹಿಸುವುದಿಲ್ಲ ; ಅಳಬೇಡ.

ಲಿಂಗಪ್ಪನವರಿಗೆ ಆ ಕಡೆಯವರೆಲ್ಲರನ್ನೂ ಭೂಗತವಾಡಬೇಕೆಂಬಷ್ಟು ಕ್ರೋಧ ಬಂತು. ಕೈ ಕಡಿಯಿತು ; ತಿಳಿದವರು ತಡೆದರು. ಮಗಳ ಸೌಮಂಗಲ್ಯದ ಮೇಲೆ ದೃಷ್ಟಿಯಿಟ್ಟು ಸುಮ್ಮನಾಗಬೇಕಾಯಿತು. ಬೀಗರು ಬೆಳಗಾಗುವುದರೊಳಗಾಗಿ ಮನೆ ಬಿಟ್ಟು ಮಾಯವಾದರು.

## ೭ನೆಯ ಭಾಗ

---

ಕೃತ್ರಿಮ ಸಂಧಾನವನ್ನು ಮಾಡಿ ಮಗಳನ್ನು ಬಲಾತ್ಕಾರದಿಂದ ನಂಜುವಿಗೆ ಗಂಟುಹಾಕಿದಳೆಂದು ಲಿಂಗಪ್ಪಾಜಿಯವರಿಗೂ ಅವರ ಕುಟುಂಬಕ್ಕೂ ಅಕ್ಕಮ್ಮಣ್ಣಿಯ ಮೇಲೆ ತುಂಬಾ ದ್ವೇಷವಾಯಿತು. ತಾನು ಇಷ್ಟು ಕಷ್ಟಪಟ್ಟು ಕಟ್ಟಬಾರದವರ ಕಾಲು ಕಟ್ಟಿ ಮಾಡಿದ ಕೆಲಸವು ಕೈಗೂಡದೆ ವ್ಯರ್ಥವಾಯಿತಲ್ಲ ಎಂದು ಅಕ್ಕಮ್ಮಣ್ಣಿಗೆ ಇವರಮೇಲೆ ಅಸಮಾಧಾನವಾಯಿತು. ಮುಖಾವಲೋಕನೆಯ ಮಾತಂತಿರಲಿ ; ಯೋಗಕ್ಷೇಮವನ್ನು ಪರಭಾರೆ ವಿಚಾರಿಸುವುದೂ ನಿಂತುಹೋಯಿತು. ಹೊಸಹೊಸದರಲ್ಲಿ ಲಿಂಗಪ್ಪನವರ ಮನೆಯವರು ಅಕ್ಕಮ್ಮಣ್ಣಿಯ ಮನೆಹಾಳು ವಿದ್ಯದ ವಿಷಯದಲ್ಲಿ ಮಾತಾಡಿಕೊಳ್ಳುವ ಸಂದರ್ಭದಲ್ಲಿಯಾದರೂ ಅವಳ ಪ್ರಸಕ್ತಿಯು ಬರುತ್ತಿತ್ತು. ಆಮೇಲಾಮೇಲೆ ಹಳೆಮರೆತಹಾಗೆಲ್ಲಾ ಅದೂ ನಿಂತುಹೋಯಿತು. ಅಕ್ಕಮ್ಮಣ್ಣಿಯು ಮೊದಮೊದಲು ತನ್ನ ಕುತಂತ್ರಕ್ಕೆ ತಾನೇ ನಾಚಿಕೊಂಡು ಸುಮ್ಮನಿದ್ದಳು. ಬರಬರುತ್ತಾ ಹೊಸ ಆಳಾಗುತ್ತಾ ಬಂದಳು. ಸ್ವಲ್ಪ ಕಾಲವಾದಮೇಲೆ "ಏನೋ ಆದುದಾಗಿಹೋಯಿತು ; ಹುಡುಗಿಯ ತಲೆಯಮೇಲೆ ಕಲ್ಲು ಹಾಕಬೇಡಿ ; ದೂರ ಆಲೋಚನೆಯನ್ನು ಮಾಡಿ" ಎಂದು ಹೇಳಿಕಳುಹಿಸಿದಳು. ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. "ನೀವು ಹೀಗೆ ಮಾಡಿದರೆ ನಂಜುವಿಗೆ ಬೇರೆ ಮದುವೆಯನ್ನು ಮಾಡುತ್ತೇನೆ" ಎಂದು ಬೆದರಿಕೆಯನ್ನು ಹೇಳಿ ಕಳುಹಿಸಿದಳು. ಅದನ್ನೂ ಲಕ್ಷ್ಯಮಾಡಲಿಲ್ಲ. ನಂಜುವಿಗೆ ಬೇರೆ ಮದುವೆಯು ಗೊತ್ತಾಯಿ

ತೆಂದು ಲಗ್ನಪತ್ರಿಕೆಯನ್ನು ಕಳುಹಿಸಿದಳು. ತಂದುಕೊಟ್ಟವರೆದುರಿಗೇನೇ ಅದನ್ನು ಹರಿದುಹಾಕಿಬಿಟ್ಟರು. ಕೇಳಿ ಅಕ್ಕಮ್ಮಣ್ಣಿಯು ಆಗಲಿ, ತಕ್ಕುದನ್ನು ಮಾಡಿಸುತ್ತೇನೆಂದು ಅಧರವನ್ನು ಕಚ್ಚಿದಳು. ಇವರೂ ಬೇಕಾದುದನ್ನು ಮಾಡಲಿ ಎಂದು ಹಠ ಸಾಧನೆಗೆ ಕೂತರು. ಏನಾದರೇನು ? ಪ್ರೇಮದಿಂದ ಸಾಕಿದ ಗಿಣಿಯನ್ನು ಬೆಕ್ಕು ಕಚ್ಚಿ ವಿಕಲಮಾಡಿಬಿಟ್ಟಿತು. ಕನ್ಯಾರತ್ನದ ಜೀವಿತ ಪ್ರತ್ಯಾಶೆಯು ಪ್ರಧ್ವಂಸವಾಗಿ ಹೋಯಿತು. ಅನುರೂಪನಾದ ವರನ ಕಯ್ಯಲ್ಲಿಟ್ಟದ್ದರೆ, ದೊಡ್ಡ ವನಸ್ಪತಿಯನ್ನಾಶ್ರಯಿಸಿದ ಲತೆಯು ಚಿಗುರಿ, ಪಲ್ಲವಿಸಿ, ಪ್ರವರ್ಧಮಾನವಾಗಿ, ಪುಷ್ಪಿಸಿ, ಫಲಿಸಿ ಆನಂದವನ್ನುಂಟುಮಾಡುವಂತೆ ಉಭಯ ಕುಲಕ್ಕೂ ಆನಂದವನ್ನುಂಟುಮಾಡುತ್ತಿದ್ದಳು. ಪ್ರಾಪ್ತಿಯಿಲ್ಲದೆ ಹೋಯಿತು. ಹೋಗಲಿ ಎಂದು ಸುಮ್ಮನಿರುವುದಕ್ಕುಂಟೆ ? ಈ ಹೊತ್ತು ಹುಡುಗಿ, ನಾಳೆಗೆ ದೊಡ್ಡವಳು, ಬಾಳಿ ಬದುಕುವ ಹೆಣ್ಣನ್ನು ಮನೆಯಲ್ಲಿರಿಸಿಕೊಂಡರೆ ಆಡಿಕೊಳ್ಳುವ ಜನರ ಬಾಯನ್ನು ಮುಚ್ಚುವವರು ಯಾರು ? ಏನೂ ಎತ್ತಲೂ ಇಲ್ಲದೆ ಇಷ್ಟು ದೊಡ್ಡ ಬೆಟ್ಟವನ್ನು ಮಾಡಿ ಕೂತವರು ಆಧಾರ ಸಿಕ್ಕಿದರೆ ಸುಮ್ಮನೆ ಇರುವ ಪಾಪವುಂಟೆ ? ಎಂದು ಚಿಂತೆಯು ಹಗಲೂ ಇರುಳೂ ಮಾತಾಪಿತೃಗಳ ಹೃದಯವನ್ನು ದಹಿಸುತ್ತಿದ್ದಿತು. ಹಾಳು ವಿಧಾತನ ಕುಚೇಷ್ಟೆ ! ಸೃಷ್ಟಿಸುವುದೇತಕ್ಕೋ ? ನಾಶಮಾಡುವುದೇತಕ್ಕೋ ? ಯಾವ ದೇವರ ಹರಿಕೆಯೆಂದು ಹೀಗೆ ಬಲಿಕೊಡುತ್ತಾನೆಯೋ ಗೊತ್ತಾಗಲಿಲ್ಲ.

ಗುಂಡನ ಮೇಲಿನ ಪ್ರೀತಿ ವಿಶ್ವಾಸಗಳು ಮೊದಲಿಗಿಂತಲೂ ಹೆಚ್ಚಾದವು. ಅವನನ್ನು ಕೇವಲ ಸ್ವೀಯನಂತೆ ಚೆನ್ನಾಗಿ ಸಾಕುತ್ತಾ ಬಂದರು. ಸುಕ್ಷೇತ್ರದಲ್ಲಿಟ್ಟ ಕೃಷಿಯಂತೆ ಅವರ ಶ್ರಮವು ಸಾರ್ಥಕವಾಯಿತು. ಗುಣದಲ್ಲಿಯೂ, ರೂಪದಲ್ಲಿಯೂ, ವಿದ್ಯೆಯಲ್ಲಿಯೂ, ವಿನಯದಲ್ಲಿಯೂ, ಶೌರ್ಯದಲ್ಲಿಯೂ, ಔದಾರ್ಯದಲ್ಲಿಯೂ, ದೇಹಪುಷ್ಟಿಯಲ್ಲಿಯೂ, ಬುದ್ಧಿಕುಶಲತೆಯಲ್ಲಿಯೂ, ಗುಂಡನು ಈ ಹೊತ್ತಿಗೆ ನಾಳೆ ಪ್ರವರ್ಧಮಾನನಾಗುತ್ತಾ ಬಂದನು. ತಂದೆಯ ಮನೆಗೆ ಹೋಗುವುದೇ ಅಪೂರ್ವವಾಯಿತು. ಸರ್ವದಾ ಇಲ್ಲಿಯೇ ಇರುತ್ತಿದ್ದನು. ಒಂದೊಂದು ಸಮಯದಲ್ಲಿ ಸೀತೆಯ ತಾಯಿ ತಂದೆಗಳು ಇವನನ್ನು ದತ್ತು ಮಾಡಿಕೊಳ್ಳಬೇಕೆಂದು ಆಲೋಚಿಸುವರು. ಅದೇತಕ್ಕೆ, ಮಗನಿಗಿಂತಲೂ ಹೆಚ್ಚಾಗಿದ್ದಾನೆ ಎಂದು ಹಾಗೆಯೇ ಸುಮ್ಮನಾಗುವರು. ಅಂತೂ ಪರಸ್ಪರವಾಗಿ ಪುತ್ರನೆಂತಲೂ ಮಾತಾಪಿತೃಗಳೆಂತಲೂ ಭಾವನೆಯೇ ಆಯಿತು.

ಗುಂಡನಿಗೆ ಸೀತೆಯ ಮೇಲಿದ್ದ ಮಮತೆಯು ಮಿತ್ರತ್ವ ಮಾತ್ರದಲ್ಲಿ ಪರ್ಯವಸಾನವಾಯಿತು. ಅವಳನ್ನು ಜತೆಯಲ್ಲಿ ಹುಟ್ಟಿದ ಅಕ್ಕತಂಗಿಯರಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದನು. ಸೀತೆಗೆ ಇವನ ಮೇಲಿನ ಭಾವವು ವಿಚಿತ್ರವಾಗಿದ್ದಿತು. ಮಧುರಾನುರಾಗದ ಕಾಮಚಾರಕ್ಕೆ ಅವಕಾಶವಿರಲಿಲ್ಲ. ಏನೇನು ಮಾಡಿದರೂ ಗುಂಡನನ್ನು

ವರಿಸಬೇಕಾಗಿತ್ತೆಂಬ ಪಶ್ಚಾತ್ತಾಪವು ಮನಸ್ಸಿನಿಂದ ದೂರವಾಗಲಿಲ್ಲ; ಮತ್ತೂ ಗುಂಡನ ರೂಪಗುಣಾತಿಶಯಗಳಿಗೆ ದಿನೇ ದಿನೇ ಹೆಚ್ಚುತ್ತಾ ಬಂತು. ಹೋಗಲಿ, ಭಾವವು ದೌಷ್ಟ್ಯವನ್ನವಲಂಬಿಸಿತು ಎಂದರೆ ಅದೂ ಇಲ್ಲ. ಈ ರೀತಿಯಾಗಿ ಇವಳ ಮನೋಭಾವವು ವಿಚಿತ್ರವಾಗಿದ್ದಿತು. ಆ ಕಡೆ ಗುಂಡನಿಗೂ ಲಕ್ಷ್ಮಿಗೂ ಇದ್ದ ಅನ್ಯೋನ್ಯತೆಯು ಹೆಚ್ಚುತ್ತಾ ಬಂತು. ಬಾಲ್ಯದಲ್ಲಿಯೇ ಹುಟ್ಟಿ ಅವ್ಯಕ್ತಮಧುರ ವಾಗಿದ್ದ ಪ್ರೇಮಾಂಕುರವು ವಯಸ್ಸು ಬಂದಹಾಗೆಲ್ಲಾ ಬೆಳೆದು ಮಾಧುರ್ಯ ವಿಶಿಷ್ಟ ವಾಗುತ್ತಾ ಬಂದಿತು. ಆಟವಾಡುವುದು ಕಡಿಮೆಯಾಯಿತು, ಒಬ್ಬರನ್ನೊಬ್ಬರು ನೋಡುವುದು ಹೆಚ್ಚಾಯಿತು. ಋಜು ದೃಷ್ಟಿಯು ಬಿಟ್ಟುಹೋಯಿತು, ಕಟಾಕ್ಷ ವೀಕ್ಷಣೆಗೆ ಬಂತು ಸಲ್ಲಾಪಗಳು ನಿಂತು ಮಂದಹಾಸಗಳಿಗಿಟ್ಟು ಕೊಂಡಿತು. ಒಬ್ಬ ರನ್ನೊಬ್ಬರು ಕಂಡರೆ ನಿಧಾನವಾಗಿ ನಡೆಯುವುದೂ ನಿಂತುಕೊಳ್ಳುವುದೂ ಪ್ರಾರಂಭ ವಾಯಿತು. ಒಬ್ಬರ ಧ್ವನಿಯು ಒಬ್ಬರಿಗೆ ಮಧುರ ಮನೋಹರವಾಗಿ ಕೇಳಿಸುವುದು. ಒಬ್ಬರ ಮಾತನ್ನೊಬ್ಬರು ತದೇಕ ಧ್ಯಾನದಲ್ಲಿ ಆರೈಸುವದು ರೂಢಿಗೆ ಬಂತು. ಒಬ್ಬರು ಹೊರಟು ಹೋದರೆ ಮತ್ತೊಬ್ಬರು ದೀರ್ಘಕಾಲ ಆ ಕಡೆಯೇ ನೋಡುವುದು ಅಭ್ಯಾಸವಾಯಿತು. ವಯೋಧರ್ಮವು ಹೆಚ್ಚುತ್ತಾ ಬಂದಹಾಗೆಲ್ಲಾ ಶರೀರಗಳು ದೂರದೂರವಾದವು; ಹೃದಯಗಳು ಮಾತ್ರ ಸೇರಿಕೊಂಡವು. ಅನುರಾಗವು ಅನ್ಯೋನ್ಯವಾಗಿ ಮಧುರ ಮನೋಹರವಾಯಿತು. ಆದರೆ ಪರಿಣಾಮವು ಆಪ್ತಾ ನುಮೋದನೆಗೆ ಅಧೀನವಾಗಿದ್ದುದರಿಂದ ಸಂಶಯಾತ್ಮಕವಾಗಿದ್ದಿತು.

ತನಗಿಲ್ಲದುದನ್ನು ಲಕ್ಷ್ಮಿಯು ಅಪೇಕ್ಷಿಸುವಳೆಂದು ತಿಳಿದು ಸೀತೆಗೆ ಲಕ್ಷ್ಮಿಯ ಮೇಲಿನ ಅಸೂಯೆಯು ಬಹುಮಟ್ಟಿಗೆ ಕಡಿಮೆಯಾಗಿ ಹೋಯಿತು. ಸೀತೆಗೆ ತನ್ನದೇ ಖಂಡಗ ದುಃಖವಿದ್ದುದರಿಂದ ಲಕ್ಷ್ಮಿಯ ಸುಖದುಃಖವನ್ನು ಹೆಚ್ಚಾಗಿ ವಿಚಾರಿಸುತ್ತಿರಲಿಲ್ಲ, ಒಂದು ವಿಧದಲ್ಲಿ ತಟಸ್ಥಳಾಗಿದ್ದು ಬಿಟ್ಟಳು. ಗುಂಡ ಲಕ್ಷ್ಮಿ ಇವರಿಬ್ಬರ ಪರಸ್ಪರಾನುರಾಗವು ದೊಡ್ಡವರಿಗೆ ತಿಳಿಯಲೇ ಇಲ್ಲವೆಂದು ಹೇಳುವು ದಕ್ಕೂ ಇಲ್ಲ. ಆಪ್ತವರಣವಿವಾಹವಿಶಿಷ್ಟವಾದ ನಮ್ಮ ಸಮಾಜದಲ್ಲಿ ಇಂಥಾ ಪ್ರೇಮಾವಿರ್ಭಾವಗಳಿಗೆ ಪ್ರಾಧಾನ್ಯವಿಲ್ಲ ಅಷ್ಟೆ. ರಾಜಮ್ಮಣ್ಣಿಯು ಕಂಡೂ ಕಾಣ ದಂತಿದ್ದಳು. ಒಂದು ದಿನ ಮನೆಯಲ್ಲೇನೋ ಹಬ್ಬವಾಯಿತು. ಎಲ್ಲರೂ ಅಲಂ ಕಾರಗಳನ್ನು ಮಾಡಿಕೊಂಡರು. ಗುಂಡನೆಲ್ಲೋ ಬೆಳಗಾಗಿನಿಂದ ಕಣ್ಣಿಗೆ ಬೀಳ ಲಿಲ್ಲ. ಊಟದ ಹೊತ್ತಿಗೆ ಬಂದು ಬೇಗ ಬೇಗ ಊಟ ಮಾಡಿಕೊಂಡು ಹೊರಟು ಹೋದನು. ಊಟವಾದ ಮೇಲೆ ಉಪ್ಪರಿಗೆಯ ಮೇಲೆ ಒಂದು ಕಡೆ ರಾಜಮ್ಮ ಣ್ಣಿಯು ಮಲಗಿಕೊಂಡಳು, ಸೀತೆಯೊಂದುಕಡೆ ಮಲಗಿಕೊಂಡಳು. ಒಬ್ಬೊಬ್ಬ ರಿಗೊಂದೊಂದು ವಿಧದ ಚಿಂತೆ. ನಿದ್ದೆ ಹತ್ತಲಿಲ್ಲ, ಹೊರಳಾಡುತ್ತಾ ಮಲಗಿದ್ದರು. ಲಕ್ಷ್ಮಿಯೂ ಅಲ್ಲಿಯೇ ಬಂದು ಕಿಟಕಿಯ ಬಳಿ ಕೂತುಕೊಂಡು ಗುಂಡನು ಹೋದ

ಕಡೆಯೇ ನೋಡುತ್ತಾ "ಹರಿ ಬಂದನಿಲ್ಲಿ, ಮರೆಯಾದನೆಲ್ಲಿ" ಎಂಬ ಪಲ್ಲವಿಯನ್ನು ಹಾಡಿದ್ದನ್ನೇ ಹಾಡುವ ಕೋಕಿಲೆಯಂತೆ ಶ್ರಮವಿಲ್ಲದೆ ಮಧುರ ಮನೋಹರವಾಗಿ ಹಾಡುತ್ತಾ ಅನನ್ಯಚಿತ್ತಳಾಗಿ ಕುಳಿತಿದ್ದಳು. ರಾಜಮ್ಮಣ್ಣಿಗೆ ಮೊದಮೊದಲು ಅರ್ಥವಾಗಲಿಲ್ಲ, ಆ ಮೇಲೆ ಸಂದೇಹವಾಯಿತು, ಕಡೆಗೆ ಅರ್ಥವಾಯಿತು. ಗೀತವೂ ಭಾವವೂ ಮನಸ್ಸಿಗೆ ಕೇವಲ ಸುಖಾವಹವಾಗಿದ್ದಿತು. ಮಲಗಿಕೊಂಡು ಕೇಳಿದು ದಾಯಿತು, ಕುಳಿತುಕೊಂಡು ಕೇಳಿದುದಾಯಿತು, ನಿಂತುಕೊಂಡು ಕೇಳಿದುದಾಯಿತು, ಸುಳಿದಾಡುತ್ತಾ ಕೇಳಿದುದಾಯಿತು, ಹತ್ತಿರಕ್ಕೇ ಬಂದು ನಿಂತು ಕೇಳಿದುದಾಯಿತು. ಕೇಳುತ್ತಾ ಕೇಳುತ್ತಾ ಮತ್ತಷ್ಟು ಕೇಳಬೇಕೆನ್ನಿಸಿತು. ಪೌನರುಕ್ತ್ಯದಿಂದ ಪಲ್ಲವಿಯ ಮಾಧುರ್ಯವು ಕಡಿಮೆಯಾಗಲಿಲ್ಲ, ಮತ್ತೆ ಹೆಚ್ಚಿತು ಲಕ್ಷ್ಮಿಯು ಏಕಾಗ್ರಚಿತ್ತ ಳಾಗಿದ್ದುದರಿಂದ ರಾಜಮ್ಮಣ್ಣಿಯ ಸಂರಂಭವನ್ನು ಅವಳು ಕಾಣಲಿಲ್ಲ.

ರಾಜ—(ಬಹಳ ಹೊತ್ತು ನಿಂತಿದ್ದು ಮಂದಹಾಸಮಾಡುತ್ತಾ) ಲಕ್ಷ್ಮಿ, ಏನಮ್ಮ, ಎಷ್ಟೊಂದು ಹರಿಧ್ಯಾನಮಾಡಿದೆ? ನಿಜವಾದ ಹರಿಯನ್ನೇನಾದರೂ ಇಷ್ಟು ಧ್ಯಾನಮಾಡಿದ್ದರೆ ಅವನು ಪ್ರತ್ಯಕ್ಷನಾಗುತ್ತಿದ್ದನಲ್ಲಮ್ಮ! ನಿನ್ನ ಹರಿಗೆ ದಯೆ ಬರಲಿಲ್ಲವೇ ?

ರಾಜಮ್ಮಣ್ಣಿ ದೊಡ್ಡವಳು. ಮರ್ಮವನ್ನು ಬಿಡಿಸಿ ಮಾತನಾಡಿದಳು. ಲಕ್ಷ್ಮಿಗೆ ತುಂಬಾ ಸಂಕೋಚವಾಯಿತು. ಎದ್ದು ಕತ್ತು ಬಗ್ಗಿಸಿಕೊಂಡು ಸುಮ್ಮನೆ ನಿಂತು ಕೊಂಡಳು. ರಾಜಮ್ಮಣ್ಣಿಯು ಲಕ್ಷ್ಮಿಯನ್ನು ಬಾಚಿ ತಬ್ಬಿಕೊಂಡು ಗಲ್ಲವನ್ನು ವನ್ನು ಹಿಡಿದೆತ್ತಿ ಮಧುರ ಮನೋಹರವಾದ ಕೆನ್ನೆಗಳಿಗೆ ಮುತ್ತಿಟ್ಟಳು. ಆದರವು ಪ್ರಿಯಹಿತವಾಗಿದ್ದಿತು.

ರಾಜ—ಲಕ್ಷ್ಮೀ ಲಕ್ಷ್ಮಿ, ನೀನು ಯಾವ ಹರಿಗಾಗಿ ಇಷ್ಟು ತೊಳಲಿದೆ? ಹೇಳಮ್ಮ, ನನಗೆ ಹೇಳು. ನಿನ್ನ ಹರಿಯನ್ನು ನಾನು ಕರೆಸಿಕೊಡುತ್ತೇನೆ. ನಿನ್ನ ಹರಿಯನ್ನು ನಿನಗೇ ಕೊಡಿಸುತ್ತೇನೆ ಹೇಳು ?

ಲಕ್ಷ್ಮಿಗೆ ಬಾಯಿಯಲ್ಲಿ ಮಾತೇ ಹೊರಡಲಿಲ್ಲ. ರಾಜಮ್ಮಣ್ಣಿಗೆ ನಿಜವು ಗೊತ್ತಾಗಿಹೋಯಿತು. ಸುಳ್ಳು ಹೇಳುವುದಕ್ಕಿಲ್ಲ. ನಿಜವನ್ನು ಹೇಳಲು ಸಂಕೋಚ ದಿಂದ ಬಾಯಿ ಬರಲಿಲ್ಲ. ಮೌನಿಯಾಗಿಬಿಟ್ಟಳು. ಅಷ್ಟು ಹೊತ್ತಿಗೆ ಸೀತೆಯೂ ಎದ್ದು ಬಂದಳು.

ಸೀತೆ—ಅವಳನ್ನೇನು ಕೇಳುತ್ತೀಯೆ ? ನನ್ನನ್ನು ಕೇಳು ಹೇಳುತ್ತೇನೆ ಗುಂಡನನ್ನು ಕಾಣದೆ ಅವಳು ತೊಳಲುವುದು.

ರಾಜ—(ಮಂದಹಾಸವನ್ನು ಮಾಡುತ್ತಾ) ನಿಜವೇನಮ್ಮ ?

ಲಕ್ಷ್ಮಿಯು ಮಾತನಾಡಲಿಲ್ಲ ; ಮೌನಕ್ಕೆ ಅರ್ಥವಾಯಿತು. ಕೂಡಲೇ ರಾಜಮ್ಮಣ್ಣಿಯು ಲಿಂಗಪ್ಪಾಜಿಯವರಿಗೆ ಹೇಳಿದಳು. ಮದುವೆಯು ಗೊತ್ತಾಗಿಯೇ ಹೋಯಿತು. ಲಿಂಗಪ್ಪಾಜಿಯವರು ತಮ್ಮ ಮನೆಯಲ್ಲಿಯೇ ಸಂಭ್ರಮದಿಂದ ಮದುವೆಯನ್ನು ಮಾಡಿಬಿಟ್ಟರು. ಮದುವೆಯ ಸಂಭ್ರಮವನ್ನು ಹೆಚ್ಚು ಹೇಳ ಬೇಕಾದುದೇನೂ ಇಲ್ಲ. ಆದರೆ ಕೆಲವು ಮಾತುಗಳನ್ನು ಮಾತ್ರ ಹೇಳದಿರುವು ದಕ್ಕೂ ಇಲ್ಲ. ಲಿಂಗಪ್ಪಾಜಿಯವರು ತಮ್ಮ ಆಸ್ತಿಯಲ್ಲಿ ಅರ್ಧವನ್ನು ಗುಂಡನಿಗೆ ಓದಿಸಿಕೊಟ್ಟರು. ರಾಜಮ್ಮಣ್ಣಿಯವರು ಲಕ್ಷ್ಮಿಗೆ ಮೈತುಂಬ ಒಡವೆಗಳನ್ನಿಟ್ಟರು. ಸೀತೆಯು ನಿತ್ಯವೂ ತನ್ನ ಒಡವೆಗಳನ್ನೆಲ್ಲಾ ಲಕ್ಷ್ಮಿಗೆ ಇಟ್ಟು ಅಲಂಕಾರ ಮಾಡು ತ್ತಿದ್ದಳು. ದೊಡ್ಡನವಾಬರು ಮದುವೆಯ ಮಧ್ಯದಲ್ಲಿ ಒಂದು ದಿವಸ ಬಂದು ಗುಂಡನಿಗೆ ಸೇನೆಯಲ್ಲಿ ನಾಲ್ಕುನೂರು ಕುದುರೆ ಆರುನೂರು ಸಿಪಾಯಿಗಳಿಗೆ ನಾಯಕ ನನ್ನಾಗಿ ಮಾಡಿ ಬೇಕಾದಷ್ಟು ಓದಿಸಿದರು. ಮದುವೆಯು ಮುಗಿದು ಹೆಣ್ಣೊ ಪ್ಪಿಸುವಾಗ ಒಂದು ವಿಚಿತ್ರವು ನಡೆಯಿತು. ದೊಡ್ಡವರಿಗೆಲ್ಲರಿಗೂ ಒಪ್ಪಿಸಿದುದಾ ಯಿತು. ಗುಂಡನಿಗೆ ಒಪ್ಪಿಸಲು ಬಸವರಾಜಪ್ಪನವರು ಲಕ್ಷ್ಮಿಯನ್ನು ಕರೆತಂದರು. ಅಷ್ಟುಹೊತ್ತಿಗೆ ಪುರೋಹಿತರಿಗೆ ನೈಶ್ಯದಮೇಲೆ ಜ್ಞಾನವಾಯಿತು. ಅದನ್ನು ಸಂಪಾ ದಿಸುವ ಸಂರಂಭದಲ್ಲಿ ಬೇಗ ಮಂತ್ರವನ್ನು ಹೇಳಲಿಲ್ಲ. ಬಸವರಾಜಪ್ಪನವರಿಗೂ ಬೇರೆ ಯಾವುದೊ ಕೆಲಸದ ಕಡೆ ಧ್ಯಾನವಾಯಿತು ಯಾರೂ ಕೂರಿಸದೆ ಲಕ್ಷ್ಮಿಯು ತಾನಾಗಿ ಗುಂಡನ ತೊಡೆಯಮೇಲೆ ಕುಳಿತುಕೊಂಡುಬಿಟ್ಟಳು. ಎಲ್ಲರೂ ನಕ್ಕರು. ಲಕ್ಷ್ಮಿಯು ಎರಡು ಕಯ್ಗಳಿಂದಲೂ ಮುಖವನ್ನು ಮುಚ್ಚಿಕೊಂಡಳು. ಮೇಲಕ್ಕೆ ಏಳಲಿಲ್ಲ. ವಧೂವರರು ಮೆಲ್ಲಗೆ ಯಾರೂ ಕಾಣದಂತೆ ಒಬ್ಬರನ್ನೊಬ್ಬರು ಒತ್ತಿ ದರು. ಶೃಂಗಾರಲೀಲೆಯು ಆವಿರ್ಭವಿಸಿ ಅವ್ಯಕ್ತವಾಗಿದ್ದು ಹಾಗೆಯೇ ಅಂತರ್ಹಿತ ವಾಯಿತು. ಅಭೀಷ್ಟಾವಾಪ್ತಿಯಾದುದರಿಂದ ಆನಂದವು ಇಬ್ಬರ ಮುಖದಲ್ಲಿಯೂ ಪ್ರಫುಲ್ಲವಾಗಿ ಪ್ರಕಾಶಿಸುತ್ತಿದ್ದಿತು. ಗುಂಡನ ಬಾಯಿಯಲ್ಲಿ ಮೆಲ್ಲಗೆ "ಲಕ್ಷ್ಮಿ" ಎಂತಲೂ, ಲಕ್ಷ್ಮಿಯ ಬಾಯಿಯಲ್ಲಿ ಇನ್ನೂ ಮೆಲ್ಲಗೆ "ಗುಂಡ" ಎಂತಲೂ ಹೊರಟ ತಂತೆ. ಹತ್ತಿರದಲ್ಲಿದ್ದ ಸೀತೆಯೊಬ್ಬಳಿಗೆ ಮಾತ್ರ ಕೇಳಿಸಿತಂತೆ. ಇದ್ದರೂ ಇರ ಬಹುದು. ಈ ಅನುಕೂಲ ದಾಂಪತ್ಯಕ್ಕೆ ಸರ್ವರಿಗೂ ಆನಂದವಾಯಿತು.

ಸೀತೆಗೆ ಹೊಟ್ಟೆಯಲ್ಲೇನೊ ವೇದನಾತ್ಮಕವಾದ ಬುದ್ಬುದವು ಪ್ರಚಲಿಸಿತು. ಯಾರೂ ಇಲ್ಲವೆಂದು ಎಲ್ಲರೂ ಇದ್ದ ಕಡೆಗೆ ತಿರುಗಿದಳು. ಇದ್ದವರು ಯಾರೂ ಕಾಣಿಸಲಿಲ್ಲ. ಎಲ್ಲವೂ ಅಲ್ಲಾಡಿದ ಹಾಗಾಯಿತು. ಸೀರೆಯ ಸೆರಗು ಕಣ್ಣಿನ ವರೆಗೂ ಒಂದು ಮತ್ತೆ ಕೆಳಕ್ಕೆ ಬಂತು. ಇದು ಅಸೂಯೆಯಲ್ಲ, ಅಕ್ಷಾಂತಿಯಲ್ಲ, ಅಭಿಧ್ಯೆಯಲ್ಲ, ಅವಜ್ಞೆಯಲ್ಲ, ಆಮರ್ಷನಲ್ಲ, ಉನ್ಮಾದವಲ್ಲ, ಪ್ರೇಮವಲ್ಲ, ವೈರ ವಲ್ಲ, "ಬಣ್ಣಕ್ಕೆ ಬೆರಗಾಗಿ ಫಲವಿಲ್ಲದ ಗುಲಾಬಿ ಹೂವನ್ನು ತೆಗೆದುಕೊಂಡು

ಕೆಟ್ಟೆನಲ್ಲ, ಹಾಳಾದ ಗುಲಾಬಿ ಹೂವೇ ನನಗೆ ಮೃತ್ಯುವಾಯಿತಲ್ಲ '' ಎಂದು ಪ್ರತೀಕಾರರಹಿತವಾದ ದೌರ್ಭಾಗ್ಯದ ದುಸ್ಸಹವಾದ ವೇದನೆಯಿಂದುತ್ಪನ್ನವಾದ ಪಶ್ಚಾತ್ತಾಪ. ಇವನ್ನು ಕಂಡವರು ಗಂಡಸರಲ್ಲಿ ಗುಂಡ, ಹೆಂಗಸರಲ್ಲಿ ರಾಜಮ್ಮಣ್ಣಿ. ಇಬ್ಬರ ಮನಸ್ಸೂ ಅನುತಾಪದಿಂದ ವ್ಯಾಕುಲಿತವಾಯಿತು.

## ೬ನೆಯ ಭಾಗ

ಮದುವೆಯ ಕೊನೆಯ ದೃಶ್ಯವು ರಾಜಮ್ಮಣ್ಣಿಯ ಹೊಟ್ಟೆಯಲ್ಲೊಂದುಕಡೆ ಕೊರೆಯುತ್ತಲೇ ಇತ್ತು ; ಗುಂಡನ ಹೃದಯಲ್ಲಂತೂ ನಾಟಿಹೋಯಿತು. ಏನಾದರೂಮಾಡಿ ಗಂಡಹೆಂಡಿರನ್ನೊಂದು ಕಡೆ ಸೇರಿಸಿ ಸೀತೆಯ ದಾಂಪತ್ಯಸೌಖ್ಯವನ್ನುದ್ಧರಿಸಬೇಕೆಂದು ಗುಂಡನು ಮನಸ್ಸಿನಲ್ಲಿ ನಿರ್ಧರಮಾಡಿಕೊಂಡನು. ಈ ಸತ್ಕಾರ್ಯದಲ್ಲಿ ಅವನಿಗೆ ಅವನ ಸದ್ವಧುವಾದ ಲಕ್ಷ್ಮಿಯದು ನಿರಂತರವಾದ ಪ್ರೇರಣೆ. ಗುಂಡನು ಕಯ್ಯಲ್ಲಾದ ಸಾಹಸವೆಲ್ಲವನ್ನೂ ಮಾಡಿ ತನ್ನ ಬುದ್ಧಿಕುಶಲತೆಗಳೆಲ್ಲವನ್ನೂ ವ್ಯಯಮಾಡಿ ವಿಶ್ವಪ್ರಯತ್ನವನ್ನೂ ಮಾಡಿ ಮುಗಿದನು. ಬಹಳವಾಗಿ ಬೋಧಿಸಿದ ಮೇಲೆ ರಾಜಮ್ಮಣ್ಣಿಯು ಆ ಮಾತಿಗೆ ಕಿವಿಗೊಟ್ಟಳು. ಲಿಂಗಪ್ಪಾಜಿಯವರನ್ನೊಪ್ಪಿಸುವುದಕ್ಕೆ ಗುಂಡನು ಕಲಿತ ವಿದ್ಯೆಯಲ್ಲವೂ ವ್ಯಯವಾಗಿ ಹೋಯಿತು. ಕಡೆಗೆ ಬಹುದೂರದವರೆಗೂ ಆಲೋಚಿಸಿ '' ನಾನೇನೋ ಉದಾಸೀನವಾಗಿಯೇ ಇರುವುದು, ಅಳಿಯ ಬೀಗರು ಎಂದು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಳ್ಳುವುದಿಲ್ಲ, ಸೀತೆಯನ್ನು ಅತ್ತೆಯ ಮನೆಗೆ ಕಳುಹಿಸುವ ಮಾತನ್ನು ಮರೆತುಬಿಡು, ಅಕ್ಕಮ್ಮಣ್ಣಿಯೂ ಅವಳ ಕಡೆಯವರೂ ಈಕಡೆ ತಲೆಯನ್ನಿಕ್ಕಕೂಡದು, ನಂಜನು ಬೇಕಾದರೆ ಇಲ್ಲಿಗೆ ಬಂದು ಹೋಗಬಹುದು,ಅದೂ ಹೇಳುತ್ತೇನೆ,ಕೇಳು. ಸ್ವಪ್ರತಿಷ್ಠೆಯನ್ನೇನಾದರೂ ತೆಗೆದನೋ, ಸೀತೆಯನ್ನೇನಾದರೂ ಅಂದನೋ, ಆಕ್ಷಣ ಇಲ್ಲಿಂದಾಚೆಗೆ ದಾಟಿಸಿಬಿಡುವುದೇ ಖಂಡಿತ. ಅಂತೂ ಹಾವಿಗೆ ಹಾಲೆರೆಯುವುದಕ್ಕೆ ಪ್ರಯತ್ನ ಪಡುತ್ತೀಯೆ. ರಾತ್ರಿ ಕಂಡ ಭಾವಿಗೆ ಹಗಲು ಬೀಳುತ್ತೀಯೆ. ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಹೊಕ್ಕು ಹೋಗು ಎನ್ನುತ್ತೀಯೆ. ಮುಂದೆ ಪಶ್ಚಾತಾಪ ಪಡಬೇಕಾಗುತ್ತೆ. ಒಳ್ಳೆಯ ಕೆಲಸಕ್ಕೆ ನಾನು ಅಡ್ಡಿಯಾದೆ ಅನ್ನಬೇಡ. ಪ್ರಯತ್ನಮಾಡಿನೋಡು. ನಿನಗೇ ಅನುಭವಕ್ಕೆ ಬರುತ್ತೆ. ನಾವು ಈಗಲೇ ಹೇಳಿದರೆ ನಿನಗೆ ಗೋತ್ತಾಗುವುದಿಲ್ಲ." ಎಂದು ಹೇಳಿದರು. ಅದಕ್ಕಿಂತಲೂ ಹೆಚ್ಚಾಗಿ ಒಪ್ಪಿಸಲು ಸಾಧ್ಯವಾಗಲಿಲ್ಲ. ಎಷ್ಟು ಹೇಳಿದರೂ ಸೀತೆಯು ಒಪ್ಪಲೇ ಇಲ್ಲ. ಒಪ್ಪುವುದಕ್ಕೆ ಅವಳ ವ್ಯಸನವು ಅಗಾಧವಾದುದು; ಹೃದಯದ ವ್ರಣವು

ಹೊಸದಾದುದು; ಆ ವ್ರಣದ ವೇದನೆಯನ್ನು ಅರಿಯುವ ವಯಸ್ಸು ಆಗತಾನೆ ಪ್ರಾಪ್ತವಾಗಿತ್ತು. ಕಾಲಕ್ರಮದಿಂದ ತಿಳುವಳಿಕೆಯು ಬಂದು ದುಃಖವು ಮರೆತು ಆಗ ಸರಿಹೋದರೆ ಲೋಕರೀತಿಗೆ ಆತ್ಮವನ್ನು ಬಲಿಕೊಟ್ಟರೆ ಕೊಡಬಹುದು. ಗುಂಡನು "ಸೀತೆಯೊಳ್ಳೆಯವಳು; ಏನೋಬೇಡವೆನ್ನುತ್ತಾಳೆ; ಕಡೆಗೆ ಒಪ್ಪಿಯೇ ಒಪ್ಪುತ್ತಾಳೆ; ನಾನು ಒಪ್ಪಿಸುತ್ತೇನೆ" ಎಂದುಕೊಂಡು ತನ್ನ ಪ್ರಯತ್ನವನ್ನು ಮಾಡುತ್ತಾಬಂದನು. ಅಕ್ಕಮ್ಮಣ್ಣಿಯೂ ತನ್ನ ಹಠಸಾಧನೆಗಾಗಿ ತೆರಕಣಾಂಬಿಯನ್ನು ಬಿಟ್ಟು ಪಟ್ಟಣವನ್ನು ಸೇರಿದ್ದಳು. ಗುಂಡನು ಬಾಲ್ಯದ ವೈರವನ್ನು ಒತ್ತಟ್ಟುಮಾಡಿ ಸೀತೆಗಾಗಿ ನಂಜಪ್ಪನೊಡನೆ ಸ್ನೇಹವನ್ನು ಬೆಳೆಸಿದನು. ಮೃದುವಾಗಿ ಮಾತನಾಡಿ ಸೌಮ್ಯವಾಗಿ ನಡೆದುಕೊಂಡು ಉಪಾಯವಾಗಿ ಹುಡುಗಿಯ ಮನಸ್ಸನ್ನು ವಶಮಾಡಿಕೊಳ್ಳಬೇಕೆಂದು ನಂಜಪ್ಪನಿಗೆ ಬೋಧಿಸಿ, ಕರಿಯ ನಾಯಿಯನ್ನು ಬಿಳಿಯನಾಯಿ ಮಾಡಲು ಬಹು ಪ್ರಯತ್ನಪಟ್ಟನು.

ರಥಸಪ್ತಮಿಯ ಹಬ್ಬವು ಬಂತು. ಲಿಂಗಪ್ಪಾಜಿಯವರು ಊರಿನಲ್ಲಿರಲಿಲ್ಲ. ಉಪಾಯಮಾಡಿ ನಂಜಪ್ಪನನ್ನು ಊಟಕ್ಕೆ ಕರೆತಂದನು. ಊಟವಾಯಿತು. ಈ ದಿವಸ ಇಷ್ಟೇ ಸಾಕು ಹೋಗು ಎಂದು ನಂಜಪ್ಪನನ್ನು ಕಳುಹಿಸಿಬಿಟ್ಟನು. ಹಬ್ಬವೆಂದೂ, ನಂಜಪ್ಪನು ಬರುತ್ತಾನೆಂದೂ, ಲಕ್ಷ್ಮಿಯು ಸೀತೆಗೆ ಬಲು ಸೊಗಸಾಗಿ ಅಲಂಕಾರವನ್ನು ಮಾಡಿದ್ದಳು. ಸಾಯಂಕಾಲವಾಗುತ್ತಾಬಂತು. ಸೀತೆಯು ನಿಲುಗನ್ನಡಿಯ ಮುಂದೆ ನಿಂತು ನೋಡಿಕೊಂಡಳು. ತನ್ನ ನಿರ್ದುಷ್ಟವಾದ ಸೌಂದರ್ಯಕ್ಕೆ ತಾನೇ ಬೆರಗಾದಳು. ಇಂಥಾ ಸೌಂದರ್ಯವಿದ್ದೂ ವ್ಯರ್ಥವಾಯಿತಲ್ಲ, ಎನ್ನಿಸಿ ಹಾಗೆಯೇ ಚಿತ್ತದಲ್ಲಿ ಗ್ಲಾನಿಯು ಮೂಡಿತು. ಏಕಾಂತವು ಹಿತವಾಗಿ ತೋರಿತು. ಏಕಾಂಗಿಯಾಗಿ ಉದ್ಯಾನಕ್ಕೆ ನಡೆದು ಸುಳಿದಾಡುತ್ತಿದ್ದಳು. ಬಾಲ್ಯವು ಕಳೆದಿತ್ತು, ಮುಗ್ಧತೆಯು ಮುಗಿದಿತ್ತು, ನವಯೌವನವು ಉಕ್ಕುತ್ತಿತ್ತು, ಆಗತಾನೇ ಅರಳುವ ಸಂಪಿಗೆಯ ಹೂವ್ವಿನಂತೆ ಸೀತೆಯ ಸುಂದರ ಗಾತ್ರವು ಮನೋಹರವಾಗಿತ್ತು. ಸೌಂದರ್ಯವೇ ಚನ್ನು. ಅದರಲ್ಲಿಯೂ ನವಯೌವನವು ಮತ್ತೂ ವಿಶೇಷ. ಸುಂದರಿಯು ವೀರಬಾಲೆಯಾಗಿದ್ದರೆ ಮತ್ತಷ್ಟು ಅತಿಶಯ. ಸೀತೆಗೆ ಮೂರೂ ಸೇರಿತ್ತು. ಎಂದೂ ಇಲ್ಲದ ನಂಜಪ್ಪನು ಆ ದಿವಸ ಮನೆಗೆ ಬಂದು ಹೊರಟುಹೋಗಿದ್ದನಷ್ಟೆ. ಇದೊಂದು ನಿಮಿತ್ತ ಕಾರಣವಾಗಿ ಬಾಲ್ಯದಿಂದಲೂ ನಡೆದ ಕಥೆಗಳೆಲ್ಲವೂ ಜ್ಞಾಪಕಕ್ಕೆ ಬಂತು. ಚಿತ್ತದಲ್ಲಿ ವಿಧವಿಧವಾದ ಭಾವವಿಶೇಷಗಳು ಉದ್ದೀಪ್ತವಾಗಿ ಅವುಗಳೊಡನೆ ಅಸಾಧಾರಣವಾದ ಚಿತ್ತಸ್ಥೈರ್ಯದಿಂದ ಹೊಡೆದಾಡುತ್ತಾ ಅಲೆದಾಡಿದಳು.

ಉದ್ಯಾನದ ಸೊಬಗು ಬಹು ಮನೋಹರವಾಗಿದ್ದಿತು. ಮಾವಿನ ಮರಗಳಲ್ಲಿ ಹೂವು ಜಗಿಯುತ್ತಿತ್ತು. ಹೂಗೊಂಚಲುಗಳ ಭಾರಕೆ ಗುಲಾಬಿಯ ಗಿಡಗಳು

ಬಾಗಿದ್ದವು. ವಿಧವಿಧವಾದ ಗುಲ್ಮಲತೆಗಳು ಪುಷ್ಪಭರಿತವಾಗಿದ್ದವು. ವೃಕ್ಷ ಗುಲ್ಮಲತಾದಿ ವಿಶೇಷಗಳೆಲ್ಲವೂ ಚಿಗುರಿ ಪಲ್ಲವಿಸುತ್ತಿದ್ದವು. ಸುಗಂಧವಾದ ಶೀತಲ ಮಾರುತವು ಸ್ಪರ್ಶಾದಿಸುಖವನ್ನು ಬೀರುತ್ತಾ ಮಂದವಾಗಿ ಚಲಿಸುತ್ತಿದ್ದಿತು. ಮಕರಂದಪಾನದಿಂದ ಪ್ರಮತ್ತವಾದ ಮಧುಕರಗಳ ಮಧುರ ಕಲಕಲವು ಬಹು ಹಿತವಾಗಿದ್ದಿತು. ಹಿಮಂತರ್ತುವಿನಲ್ಲಿ ಕಟ್ಟಿದ್ದು ಆಗತಾನೆ ಬಿಟ್ಟಿದ್ದ ಸುಖವಾದ ಶಾರೀರದಲ್ಲಿ ಮತ್ತಕೋಕಿಲೆಗಳು ಮಾನಿನಿಯರ ಮಾನವನ್ನು ವಿನಾಶಮಾಡುವ ಮದನದೇವನ ಶೃಂಗಾರಾಜ್ಞೆಯನ್ನು ಪಂಚಮದಲ್ಲಿ ಕೂಗಿ ಪ್ರಕಟಿಸುತ್ತಿದ್ದವು. ರಾಗವತಿಯಾದ ಸಂಧ್ಯಾದೇವಿಯು ಸಂಗಮಾಭಿಲಾಷೆಯಿಂದ ಮರೆಯಾದ ದಿನಮಣಿಯನ್ನು ಹಿಂಬಾಲಿಸಿ ಹೋಗುತ್ತಿದ್ದಳು. ನೆತ್ತಿಯಮೇಲಕ್ಕೆ ಬಂದು ಅಹಸ್ಸಿನ ಪ್ರಕಾಶದಿಂದ ಅದೃಶ್ಯನಾಗಿದ್ದು ತನ್ನ ಕಾಲವು ಒದಗಿದುದರಿಂದ ಕ್ಷಣೇಕ್ಷಣೇ ಕಳೆಗೂಡುತ್ತಿದ್ದ ನಿಶಾಪತಿಯ ಅಮೃತಮಯವಾದ ಕರಸ್ಪರ್ಶಕ್ಕೆ ವಿರಹಿಣಿಯಾಗಿದ್ದ ಕುಮುದಿನಿಯು ವಿಕಾಸವನ್ನೈದುತ್ತಿತ್ತು. ಪಕ್ಷಿಗಳು ತಮ್ಮತಮ್ಮ ದೈನಂದಿನಜೀವನಯಾತ್ರೆಯನ್ನು ಮುಗಿಸಿಕೊಂಡು ಯದೃಚ್ಛಾಲಾಭಸಂತುಷ್ಟವಾಗಿ ದಂಪತಿಸಮೇತವಾಗಿ ಬಂದು ತಮ್ಮತಮ್ಮ ಗೂಡುಗಳನ್ನು ಸೇರುತ್ತಿದ್ದವು. ಸ್ಪರ್ಶಸುಖದಿಂದ ಅರ್ಧನಿಮೀಲಿತ ನಯನವಾದ ಜಿಂಕೆಯನ್ನು ಕೃಷ್ಣಸಾರವು ತನ್ನ ಕೊಂಬಿನಿಂದ ಕೆರೆಯುತ್ತಿದ್ದಿತು. ಪ್ರಕೃತಿಯ ಪ್ರವೃತ್ತಿಯೆಲ್ಲವೂ ಕೇವಲ ಉನ್ಮಾದಕವಾಗಿದ್ದಿತು. ಎಂಥಾ ಯೋಗಿಯ ಮನಸ್ಸಾದರೂ ಧೈರ್ಯಗೆಟ್ಟು ವಿಕೃತಿಯನ್ನೈದುವದಕ್ಕೆ ತಕ್ಕ ಸಮಯವಾಗಿದ್ದಿತು. ಸೀತೆಯ ಚಿತ್ತವೃತ್ತಿಯು ವಿಕೃತಿಯನ್ನೈದಿತು. ಗುಂಡನ ಮನೋಹರವಾದ ರೂಪವನ್ನು ಜ್ಞಾಪಿಸಿಕೊಂಡು, ಆರ್ಯಸದ್ವರ್ತನದ ಸುಶಿಕ್ಷೆಗೆ ಅಂತರ್ಹಿತವಾಗಿದ್ದ ಮಧುರಪ್ರೇಮವು ಒಂದಾವೃತ್ತಿ ಆವಿರ್ಭವಿಸುವುದು, ಏನಾದರೂ ಪತಿಯೆಂದೆನ್ನಿಸಿಕೊಂಡ ನಂಜಪ್ಪನ ಜ್ಞಾಪಕವು ಬಂದು ಹಾಗೆಯೇ ಶೃಂಗಾರವು ಅಂತರ್ಹಿತವಾಗುವುದು, ಈ ರೀತಿ ಇತ್ತು.

ಸೀತೆ—ಇದೆಂಥಾ ಶಾಸ್ತ್ರ ? ಬಲಾತ್ಕಾರದಿಂದ ಕೊರಳಿಗೆ ತಾಳಿಯನ್ನು ಕಟ್ಟಿದ ಮಾತ್ರಕ್ಕೇ ನನಗೆ ಪತಿಯೇ ? ಎಂದಿಗೂ ಅಲ್ಲ. ಶಾಸ್ತ್ರವನ್ನು ಮಾಡಿದ ಮಹಾತ್ಮರು ಬಲಾತ್ಕಾರವನ್ನು ಮಾಡು ಎನ್ನಲಿಲ್ಲ. (ಆಡುತ್ತಿದ್ದ ಮೃಗಗಳನ್ನು ನೋಡಿ) ಇವಕ್ಕೇನು ಮದುವೆಯಾಗಿದೆಯೇ ? ಇವೇನು ಪಾಪಮಾಡುತ್ತಿವೆಯೇ ? ಅಯ್ಯೋ ಸುಮ್ಮನೆ ಹೊತ್ತುಹೋಗದು. (ಆಲೋಚಿಸಿ) ಗುಂಡಾ, ಗುಂಡ, ನೀನೇ ನನಗೆ ಪ್ರೇಮಿ. ನಿನ್ನ ಮನೋಹರವಾದ ರೂಪವನ್ನು ಜ್ಞಾಪಿಸಿಕೊಂಡರೆ ನನ್ನ ಅಂಗಾಂಗಗಳೆಲ್ಲವೂ ನಿನ್ನಲ್ಲೇ ಐಕ್ಯವಾಗಬೇಕೆಂದು ತಪಿಸುತ್ತಿವೆ; ಎನುಮಾಡಲಿ?ಓಡಿಹೋಗಿ ಗುಂಡನನ್ನು ತಬ್ಬಿಕೊಂಡು ಒಳಗೆ ದಹಿಸುವ ಪ್ರೇಮಪಿಪಾಸೆಯನ್ನು ಅಣಗಿಸಿಕೊಳ್ಳಲೇ ? ಗುಂಡಾ! ನೀನೇ ನನ್ನ ಗುಂಡನೆಂದು ಮುದ್ದಾಡಿಬಿಡಲೆ?(ಆಲೋಚಿಸಿ)

ನಾನೇನೋ ಮಾಡೇನು, ಗುಂಡನೂ ಸೀತೆ! ನೀನೇ ನನ್ನ ಸೀತೇ ಎಂದರಲ್ಲವೇ ಈ ಪ್ರೇಮಪ್ರವೃತ್ತಿಯು ಸಫಲವಾಗುವುದು? ಗುಂಡನು ಲಕ್ಷ್ಮಿಯನ್ನು ಮೋಹಿಸಿ ಅವಳನ್ನು ಮದುವೆ ಮಾಡಿಕೊಂಡು ಸಂತೋಷವಾಗಿದ್ದಾನೆ. ಅವನು ನನ್ನನ್ನು ಪ್ರೀತಿಸದಿದ್ದರೆ ನಾನು ಮಾಡಿದ್ದೂ ವ್ಯರ್ಥವಾಗುವುದು. ವೃಥಾ ನಗೆಗೆ ಕಾರಣ. ಆದಕ್ಕಾಗಿ ಸುಮ್ಮನಿರುವುದೇ ಮೇಲು.

ಎಂದು ಆಲೋಚಿಸುತ್ತಾ, ಅವಶ್ಯವಾಗಿ ಅನುವರ್ತಿಸಬೇಕಾದ ಸದ್ವರ್ತನದ ಸದಿಚ್ಛೆಯು ಒಂದುಕಡೆಗೂ, ಶೈಶವದಿಂದ ಆರಾಧಿತನಾದ ಗುಂಡನ ಮನೋಹರ ವಾದ ರೂಪಾತಿಶಯವು ಮತ್ತೊಂದುಕಡೆಗೂ ಪರ್ಯಾಯಪರ್ಯಾಯದಿಂದ ಚಿತ್ತ ವೃತ್ತಿಯನ್ನು ಆಕರ್ಷಿಸುತ್ತಾ ಇದ್ದುದರಿಂದ, ನದಿಯ ಒಂದು ದಡದಮೇಲೆ ನಿಂತು ಮತ್ತೊಂದು ದಡವನ್ನು ನೋಡಿ ಅಲ್ಲಿ ಇಲ್ಲಿಗಿಂತಲೂ ಸೊಗಸಾದ ಹುಲ್ಲಿದೆಯೆಂದು ಭ್ರಮೆ ಬಂದು ಈ ದಡದಿಂದ ಆ ದಡಕ್ಕೂ ಆ ದಡದಿಂದ ಈ ದಡಕ್ಕೂ ಅಲೆದಾಡಿ ಆಯಾಸಪಟ್ಟು ಒಂದು ದಡದಲ್ಲಿಯೂ ನಿಂತು ಹುಲ್ಲು ಮೇಯದೆ ಖಿನ್ನವಾಗುವ ಕಡಸಿನ ದುರ್ದಸೆಯಂತೆ, ಸೀತೆಯ ಮನಸ್ಸು ಕೇವಲ ಚಂಚಲಾತ್ಮಕವಾಗಿದ್ದಿತು. ಏನೂ ನಿರ್ಣಯವಾಗದೆ ಒಂದಾವೃತ್ತಿ ಮಾವಿನ ಹೂವನ್ನೂ ಒಂದಾವೃತ್ತಿ ಗುಲಾಬಿಯ ಹೂವನ್ನೂ ಪರ್ಯಾಯಪರ್ಯಾಯವಾಗಿ ನೋಡುತ್ತಾ ಇತಿಕರ್ತವ್ಯತಾ ಮೂಢಳಾಗಿ ನಿಂತಿದ್ದಳು.

ಅದೇ ಸಮಯದಲ್ಲಿ ಗ್ಲಾನಿಯನ್ನೈದುತ್ತಿದ್ದ ಅವಳ ಭಾವೋದ್ರೇಕವನ್ನು ಉತ್ತೇಜನ ಕೊಡುವಂಥಾ ರೂಪಯೌವನಸಂಪನ್ನನಾದ ಗುಂಡನೂ ಅದೇ ಉದ್ಯಾನ ದಲ್ಲಿ ಏಕಾಂಗಿಯಾಗಿ ಪರಿಭ್ರಮಿಸುತ್ತಾ, ಪ್ರಕೃತಿಯ ಮಾಧುರ್ಯಕ್ಕೆ ಸಮ್ಮೋಹಿತ ನಾಗಿ ಪ್ರಿಯಳಾದ ಲಕ್ಷ್ಮಿಯ ಸಮಾಗಮವನ್ನು ಅಪೇಕ್ಷಿಸುತ್ತಾ "ಆ ದಿವಸ ಒಂದು ಮಾವಿನಹೂವನ್ನು ಕಿತ್ತುಕೊಟ್ಟೆ. ಈ ದಿವಸ ಬೇಕಾದಷ್ಟು ಮಾವಿನ ಹೂವು ಗಳಿಂದ ನನ್ನ ಲಕ್ಷ್ಮಿಗೆ ಅಲಂಕಾರವನ್ನು ಮಾಡಿ ಆಲಿಂಗಿಸಿ ಮುದ್ದಿಸಬೇಕು." ಎಂದುಕೊಂಡು ಬೇಕಾದಷ್ಟು ಮಾವಿನ ಹೂಗೊಂಚಲುಗಳನ್ನು ಕಿತ್ತುಕೊಂಡು ಹೀಗೆಹೀಗೆ ಶೃಂಗಾರಚೇಷ್ಟೆಯನ್ನು ಮಾಡಬೇಕೆಂದು ಮನಸ್ಸಿನಲ್ಲಿಯೇ ಗುಣಿತವನ್ನು ಹಾಕುತ್ತಾ ಮುಂದಾಗುವ ಆನಂದವನ್ನು ಈಗಲೇ ಮಂದಹಾಸದಿಂದ ಸೂಚಿಸುತ್ತಾ ಸಶರೀರನಾದ ಅನಂಗದೇವನಂತೆ ಆಕಸ್ಮಿಕವಾಗಿ ಆ ಕಡೆಯೇ ಬಂದನು. ಸ್ವಭಾವ ಸುಂದರವಾದ ಅವನ ಮುಖದಮೇಲೆ ಸಂಜೆಯ ಅರುಣಕಾಂತಿಯು ಬಿದ್ದು ರೂಪವು ಮತ್ತಷ್ಟು ಮನೋಜ್ಞವಾಗಿದ್ದಿತು. ಸೀತೆಯನ್ನು ಕಂಡು ಅಲ್ಲಿಗೇ ಬಂದನು.

ಸೀತೆಯು ಗುಂಡನನ್ನು ದೃಷ್ಟಿಸಿನೋಡಿದಳು. ಅವನ ರೂಪಾತಿಶಯಕ್ಕೆ ಅವಳ ಮನಸ್ಸು ಸೋತುಹೋಯಿತು. ಚಿತ್ತವಿಕಾರಕ್ಕೆ ಕಾರಣಭೂತವಾದ ಪ್ರಿಯ ವಸ್ತುವು ಎದುರಿಗೆ ಇಲ್ಲದಿದ್ದರೂ ಅದನ್ನು ಜ್ಞಾಪಿಸಿಕೊಂಡ ಮಾತ್ರಕ್ಕೇ ಅಷು

ಚಂಚಲವಾದ ಮನಸ್ಸು, ಪ್ರಿಯವಸ್ತುವು ಸಮೀಪಕ್ಕೆ ಬಂದೊದಗಿದಾಗ ಸುಮ್ಮನಿರುವುದೇ? ಇಲ್ಲ. ಚಂಚಲತ್ವವು ಓಟ ಹಾಕಿತು. ಬಲವದ್ವಿವಾಹದಿಂದ ಪತಿಯೆನ್ನಿಸಿಕೊಂಡು ಅನಾದೃಶನಾಗಿದ್ದವನ ಅಸ್ತಿತ್ವವೇ ಮರೆತುಹೋಯಿತು. ಮುಖವು ವಿಕಾಸವಾಯಿತು, ಕಣ್ಣುಗಳು ಅರಳಿದವು, ದೃಷ್ಟಿಯು ಕಡೆಗಣ್ಣಿನಲ್ಲಿ ನೆಲೆಸಿತು, ಉಸಿರು ವೇಗವಾಯಿತು, ಹೃದಯವು "ನಡೀ ನಡೀ" ಎಂದು ಗಟ್ಟಿಯಾಗಿ ಬಡಿಯುತ್ತಿತ್ತು, ಶರೀರವು ರೋಮಾಂಚಿತವಾಯಿತು, ದೇಹದಲ್ಲಿ ಕಂಪವು ಕಾಣಿಸಿತು, ಮೈಸಣ್ಣಗೆ ಬೆಮರಿಕ್ಕಿತು, ಕಣ್ಣುಗಳು ಆನಂದದಿಂದ ಒದ್ದೆಯಾದವು, ಅವ್ಯಕ್ತಮಧುರವಾದ ಕಲಧ್ವನಿಯೊಂದು ಕಂಠದೇಶದಲ್ಲುದಿಸಿ, ಅಲ್ಲಿಯೇ ಪ್ರಸರಿಸಿ ಹೊರಗೆ ಬಾರದೆ ಅಲ್ಲಿಯೇ ವಿಲಯವಾಯಿತು, ಇಂದ್ರಿಯ ವ್ಯಾಪಾರಗಳೆಲ್ಲವೂ ಪ್ರಲಯವಾದವು. ಸೀತೆಗೆ ತನ್ನ ಅಂಗಾಂಗಗಳೆಲ್ಲವೂ ಆ ಹೃದಯಂಗಮನಲ್ಲಿ ಐಕ್ಯವಾಗಲು ಪ್ರವರ್ತಿಸಿವೆಯೆಂದೊಂದೇ ತಿಳಿದುದು. ತಾನು ಯಾರು, ಗುಂಡನು ಯಾರು, ಏನು ಮಾಡುತ್ತಿದ್ದೇವೆ, ಇದರ ಪರಿಣಾಮವೇನು, ಇತ್ಯಾದಿಗಳೊಂದೂ ಹೊಳೆಯಲೇ ಇಲ್ಲ.

ಸೀತೆಯ ಮಧುರಪ್ರವೃತ್ತಿಯನ್ನು ಕಂಡು ಗುಂಡನ ಮನಸ್ಸೂ ತಲ್ಲಣಿಸಿತು. ಆ ಪರಮ ಸುಂದರಿಯ ನಿರ್ದುಷ್ಟವಾದ ರೂಪಲಾವಣ್ಯಗಳಿಗೆ ಅವನ ಚಿತ್ತಸ್ಥೈರ್ಯವೂ ಸ್ವಲ್ಪ ಕಡಿಮೆಯಾಯಿತು. ಭಾವವೂ ಸ್ವಲ್ಪಮಟ್ಟಿಗೆ ಮಾಧುರ್ಯವನ್ನವಲಂಬಿಸಿತು. ಆವಿರ್ಭವಿಸಿ ಮೆಲ್ಲಗೆ ಬೆಳೆಯುತ್ತಿದ್ದ ಮಧುರಪ್ರೇಮಕ್ಕೆ ಪರವಶನಾಗಿ ಸೀತೆಯ ಸಮೀಪಕ್ಕೆ ಬಂದನು. ಪ್ರೇಮವು ಅನ್ಯೋನ್ಯವಾಗಿದ್ದುದನ್ನು ಕಂಡು ಸೀತೆಗೆ ಆಪ್ಯಾಯಮಾನವಾಯಿತು. ಮಾತಿಲ್ಲದೆ ಮೆಲ್ಲಗೆ ಹತ್ತಿರಕ್ಕೆ ಬಂದು ರೋಮಾಂಚದಿಂದ ಕೂಡಿ ಮೆಲ್ಲಗೆ ಕಂಪಿಸುತ್ತಾ ಸಣ್ಣಗೆ ಬೆವರಿಕ್ಕುತ್ತಿದ್ದ ತನ್ನ ಸುಕುಮಾರವಾದ ಬಲಗಯ್ಯನ್ನು ಸ್ವಲ್ಪ ಮುಂದಕ್ಕೆ ನೀಡಿದಳು. ನೀಡಿದ ಸುಂದರವಾದ ಹಸ್ತವನ್ನು ಗುಂಡನೂ ಮೆಲ್ಲಗೆ ಹಿಡಿದುಕೊಂಡನು. ಆದರೂ ಅವನ ಚಿತ್ತಸ್ಥೈರ್ಯವಿನ್ನೂ ಸಂಪೂರ್ಣವಾಗಿ ನಾಶವಾಗಿರಲಿಲ್ಲ. ಏನು ಮಾಡುವುದಕ್ಕೂ ನಿರ್ಧರವಾಗಿ ತೋರದೆ ಸಂದೇಹದಿಂದ ಅಧೋಮುಖಿಯಾದನು. ಹಿಡಿದಿದ್ದ ಕಯ್ಯನ್ನು ಸೀತೆಯು ಮೆಲ್ಲಗೆ ಎಳೆದ ಹಾಗಾಯಿತು. ಆ ಸಣ್ಣ ಎಳೆತಕ್ಕಲ್ಲ; ಹೃದಯದಲ್ಲಿ ಆವಿರ್ಭವಿಸಿ, ವಿವೇಕವನ್ನೂ ಬುದ್ಧಿಯನ್ನೂ ಜ್ಞಾನವನ್ನೂ ಮೋಹಾವೃತಮಾಡಿ ಪ್ರಕೃತಿಯನ್ನು ಬಲಾತ್ಕಾರದಿಂದ ಆಕರ್ಷಿಸುತ್ತಿದ್ದ ಪ್ರೇಮದ ಎಳೆತಕ್ಕೆ; ಗುಂಡನೊಂದು ಸಣ್ಣ ಹೆಜ್ಜೆಯನ್ನು ಮುಂದಿಟ್ಟನು. ಸೀತೆಗೆ ಇನ್ನಷ್ಟು ಉತ್ತೇಜನವಾಯಿತು. ಎಡಗಯ್ಯಲ್ಲಿ ಗುಂಡನು ಹಿಡಿದಿದ್ದ ಸುಂದರವಾದ ಮಾವಿನ ಹೂಗೊಂಚಲುಗಳನ್ನು ತನ್ನ ಎಡಗೈಯಿಂದ ಮೆಲ್ಲಮೆಲ್ಲಗೆ ಕಿತ್ತು ಕೆಳಗೆ ಹಾಕಿ ಎಡಗಾಲನ್ನು ಮುಂದಿಟ್ಟು ಹಿಡಿದಿದ್ದ ಕಯ್ಯನ್ನು ಮೆಲ್ಲಗೆ ಸೆಳೆಯುತ್ತಾ ಆಲಿಂಗಿಸಿಕೊಳ್ಳುವುದಕ್ಕಾಗಿ ಎಡಗಯ್ಯನ್ನು ಮುಂದಕ್ಕೆ ನೀಡಿದಳು. ಸೀತೆಯು ಮುಂದಿಟ್ಟ

ಎಡಗಾಲು ಕೆಳಗೆ ಕೆಡವಿದ ಮಾವಿನ ಹೂಗಳಮೇಲೆ ಬಿತ್ತು. ಸೀತೆಯೇನೋ ಬೇಕೆಂದು ಇಟ್ಟವಳಲ್ಲ. ಪರಮ ಪ್ರೇಮಿಯಾದ ಲಕ್ಷ್ಮಿಗಾಗಿ ತಂದ ಆ ಮಾವಿನ ಹೂಗಳನ್ನು ಸೀತೆಯು ಎಡಗಾಲಿನಿಂದ ತುಳಿದುದನ್ನು ಕಂಡು, ಉದ್ಯುಕ್ತವಾದ ತನ್ನ ಅನಾರ್ಯಪ್ರವೃತ್ತಿಯಿಂದ ಪವಿತ್ರವಾದ ದಾಂಪತ್ಯ ಸುಖವೂ ಒಂದಾನೊಂದು ವೇಳೆ ಇದೇ ರೀತಿಯಾಗಿ ಪರಸ್ತ್ರೀಯಳ ಎಡಗಾಲಿನಿಂದ ತುಳಿಯಲ್ಪಡಬಹುದಲ್ಲವೇ ಎಂದು ಗುಂಡನ ಮನಸ್ಸಿಗೆ ಥಟ್ಟೆಂದು ತೋರಿತು. ಸೀತೆಯು ಪ್ರೇಮದಿಂದ ನೀಡಿದ ಕೈಗೆ ಪ್ರತಿಯಾಗಿ ತಾನು ಕೈನೀಡಲಿಲ್ಲ. ಅದಕ್ಕಾಗಿ ಸೀತೆಯೂ ಸ್ವಲ್ಪ ಹಾಗೆಯೇ ಸುಮ್ಮನಾದಳು. "ಖಟ್" ಎಂದು ಗಟ್ಟಿಯಾಗಿ ಶಬ್ದವಾಯಿತು. ಇಬ್ಬರೂ ಅವರ ಧರ್ಮಕ್ಕೆ ಆ ಕಡೆ ತಿರುಗಿ ನೋಡಿದರು. ಸಮೀಪದಲ್ಲೊಂದು ಹೆಣ್ಣು ಜಿಂಕೆಯನ್ನು ಒಂದು ಕೃಷ್ಣಮೃಗವು ಕೊಂಬಿನಿಂದ ಕೆರೆಯುತ್ತಾ ಆಡುತಿತ್ತಷ್ಟೆ. ಮತ್ತೊಂದು ದೊಡ್ಡ ಕೃಷ್ಣಮೃಗವು ಅಲ್ಲಿಗೆ ಬಂದು ಮೊದಲಿನಿಂದ ಇದ್ದ ಕೃಷ್ಣ ಮೃಗದೊಡನೆ ಹೋರಾಡಿ ಒಂದಕ್ಕೊಂದು ಬಲವಾಗಿ ಢಿಕ್ಕಿಯನ್ನು ಕೊಟ್ಟದ್ದರಿಂದ "ಖಟ್" ಎಂದು ಶಬ್ದವಾದುದು. ಬಲವಾದ ಢಿಕ್ಕಿಗೆ ಮೊದಲಿದ್ದ ಕೃಷ್ಣ ಮೃಗದ ಒಂದು ಕೊಂಬು ಮುರಿದುಹೋಯಿತು. ರಕ್ತವು ಹರಿಯಿತು. ಕೆಳಗೆ ಬಿದ್ದು ಯಾತನೆಗೆ ಕೈಕಾಲು ಬಡಿಯಿತು. ಬಲಿಷ್ಠವಾದ ಕೃಷ್ಣಮೃಗದ ಮೇಲೆ ಪಕ್ಷಪಾತವನ್ನು ತೋರಿಸಿದ್ದ ಜಿಂಕೆಯು ಅದನ್ನು ಬಿಟ್ಟು ಕೆಳಗೆ ಬಿದ್ದು ಒದೆದಾಡು ತ್ತಿದ್ದ ಮೃಗವನ್ನು ಮೂಸಿನೋಡಿ ನೆಕ್ಕಿ ಸಂತೈಸುತ್ತಿತ್ತು. ಆ ಕ್ರೋಧಕ್ಕೆ ಗೆದ್ದ ಮೃಗವು ಬಿದ್ದ ಮೃಗವನ್ನು ಮತ್ತೆ ತಿವಿಯಲು ನುಗ್ಗಿತು. ಮೂರೂ ಸೀತೆಯೇ ಸಾಕಿದ ಪ್ರಾಣಿಗಳು. ಸೀತೆಯು "ಅಯ್ಯೋ ಅದನ್ನು ಕೊಂದುಹಾಕುತ್ತೆ." ಎಂದು ಕೂಗಿಕೊಂಡಳು. ಗುಂಡನು ಓಡಿಹೋಗಿ ಅದನ್ನು ಬೆದರಿಸಿ ಓಡಿಸಿದನು. ಸೀತೆಯೂ ಅಲ್ಲಿಗೆ ಬಂದಳು. ಕೊಂಬು ಮುರಿದು ಬಿದ್ದಿದ್ದ ಮೃಗದ ಗಾಯಕ್ಕೆ ಬಟ್ಟೆಯನ್ನು ಹರಿದು ಕಟ್ಟಿ ರಕ್ತವು ಹರಿಯುವುದನ್ನು ನಿಲ್ಲಿಸಿದನು. ಸೀತೆಯು ಸಮೀಪದಲ್ಲಿದ್ದ ಜಲಾಶಯಕ್ಕೆ ಓಡಿಹೋಗಿ ಕಮಲದ ಎಲೆಯಲ್ಲಿ ನೀರು ತಂದು ಆ ಬಟ್ಟೆಯ ಮೇಲೆ ಹಾಕಿದಳು.

ಸೀತೆ—(ದೂರ ನಿಂತಿದ್ದ ದೊಡ್ಡ ಮೃಗವನ್ನು ನೋಡಿ) ಈ ಹಾಳಾದ್ದಕ್ಕೇನು ಬಂತು?

ಗುಂಡ—ಏನೂ ಇಲ್ಲ. ಕ್ಷಣಿಕವಾದ ಸುಖಕ್ಕೆ ಮರುಳಾಯಿತು.

ಆಮಾತು ಸೀತೆಯ ಮನಸ್ಸಿಗೆ ತಟ್ಟಿತು. ಸಮಯವು ದೊರೆತು ಮನಸ್ಸು ಬೇರೆ ಕಡೆಗೆ ತಿರುಗಿದುದು ಒಳ್ಳೆಯದಾಯಿತೆನ್ನಿಸಿತು. ತಾವು ಮಾಡುತ್ತಿದ್ದುದು ತಪ್ಪೆಂದು ತನಗೇ ಒಪ್ಪಿತು. ಸದ್ವರ್ತನವೇ ಸರ್ವಥಾ ಶ್ರೇಯಸ್ಕರವೆಂದು ಹೃದ್ಗತವಾಯಿತು. ಲುಪ್ತವಾಗಿದ್ದ ಇಬ್ಬರ ಚಿತ್ತಸ್ಥೈರ್ಯವೂ ಪುನರುಜ್ಜೀವಿತವಾಯಿತು. ಇಬ್ಬರ

ಕತ್ತೂ ನಾಚಿಕೆಯಿಂದ ತಗ್ಗಿದವು. ಶರೀರಗಳು ತಾವಾಗಿ ದೂರವಾದವು. ಮನಸ್ಸುಗಳ ಅಂತರವು ಬೃಹದಾಕಾಶಕ್ಕಿಂತಲೂ ಹೆಚ್ಚಾಯಿತು. ಕದ್ದ ಪದಾರ್ಥದಸಮೇತವಾಗಿ ಸಿಕ್ಕಿಕೊಂಡ ಕಳ್ಳನಂತೆ ಇಬ್ಬರೂ ಸ್ಥಾಣುವಾದರು. ಗುಂಡನೊಂದು ಬಂಡೆಯ ಮೇಲೆ ಕುಕ್ಕರಿಸಿಕೊಂಡು ಲಜ್ಜೆಯಿಂದ ಬಾಗಿ ಹೋಗುತ್ತಿದ್ದ ತಲೆಗೆ ಬಲಗಯ್ಯಿಂದ ಆಧಾರವನ್ನು ಕಲ್ಪಿಸಿದನು. ಸೀತೆಯು ನಿಂತಕಡೆಯೇ ಬಲಗಾಲಂಗುಷ್ಠದಿಂದ ಭೂಮಿಯನ್ನು ಕೊರೆಯುತ್ತಾ ಹೊಕ್ಕಿಕೊಳ್ಳುವುದಕ್ಕೆ ರಂಧ್ರವನ್ನು ಮಾಡುತ್ತಿದ್ದಳು. ಎಷ್ಟೋ ಹೊತ್ತಾದ ಮೇಲೆ ಗುಂಡನೇ ಮೆಲ್ಲಗೆ ಮಾತನಾಡಿದನು.

ಗುಂಡ—ಸೀತೇ, ಸೀತೆ........ನೀನು ನನಗೆ.... ...ತಂಗಿಯಲ್ಲವೇ ?

ಪ್ರಶ್ನೆಯು ಮರ್ಮಭೇದಕವಾಗಿತ್ತು. ಆಕ್ಷೇಪವೂ ಪ್ರಬಲವಾಗಿತ್ತು. ಪಶ್ಚಾತ್ತಾಪವೂ ನಿಸ್ಸೀಮವಾಗಿಯೇ ಇತ್ತು. ಅವಳ ಶರೀರವು ಅವಳ ಕಾಲಿನ ಮೇಲೆ ನಿಲ್ಲಲಾರದೇ ಹೋಯಿತು. ಅಲ್ಲಿಯೇ ಧರಿತ್ರಿಯ ಮೇಲೆ ಕುಕ್ಕಬಡಿದಳು. ಆಕಸ್ಮಿಕವಾಗಿ ಪ್ರಾಪ್ತವಾದ ಅನಾರ್ಯಚಿತ್ತವೃತ್ತಿಯಿಂದ ಸಂಭವಿಸಿದ ನೈಜವಾದ ವ್ಯಸನಕ್ಕೆ ಎರಡು ಕಯ್ಗಳಿಂದಲೂ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಅತ್ತು ಚಿತ್ತಕ್ಕೆ ಶಾಂತಿಯಾಯಿತು.

ಗುಂಡ—ಸೀತೇ ಸೀತೆ, ಎಂದೂ ಇಲ್ಲ. ಈ ಹೊತ್ತೇನಾಯಿತಮ್ಮ ?

ಸೀತೆ—(ಮೆಲ್ಲಗೆ ಬಿಕ್ಕುತ್ತಾ) ಅಣ್ಣಾ........ಹುಚ್ಚು........ಹಿಡಿದಿತ್ತು. ಈಗ ........ಬಿಟ್ಟಿತು.

ಗುಂಡ—(ಪಶ್ಚಾತ್ತಾಪದಿಂದ) ಸೀತೆ, ಕ್ಷಣಿಕವಾದ ಸುಖಕ್ಕೆ ಭ್ರಮೆಪಟ್ಟು ಪಾಪಕರ್ದಮದಲ್ಲಿ ಬಿದ್ದು ಹೋಗುತ್ತಿದ್ದೆವು. ಶಾಶ್ವತವಾದ ಇಹಪರಗಳೆರಡನ್ನೂ ಕಳೆದುಕೊಳ್ಳುತ್ತಿದ್ದೆವು.

ಸೀತೆ—(ನಿಧಾನವಾಗಿ) ವಿಪತ್ತು ಬಂದಿತ್ತು. ದೇವರೇ ಪರಿಹಾರ ಮಾಡಿದ.

ಗುಂಡ—ಅಮ್ಮಾ ಸೀತೆ, ನಾರಿಗೆ ಪತಿಯೇ ದೇವರು. ಪಾತಿವ್ರತ್ಯವೇ ಪರಮ ಧರ್ಮ. ಸದ್ವರ್ತನವೇ ಅವರ ಜೀವಿತ ಸರ್ವಸ್ವ. ತಿಳಿಯಿತೋ ? ಇನ್ನು ಮೇಲೆ ನೀನು ಪತಿಯ ಮೇಲಿನ ಅನಾದರಣೆಯನ್ನು ಬಿಟ್ಟುಬಿಡಬೇಕು.

ಇಲ್ಲಿಯವರೆಗೂ ಆಕ್ಷೇಪವು ನ್ಯಾಯವಾಗಿದ್ದಿತು. ಸೀತೆಯು ಅದಕ್ಕೆ ತಲೆ ಬಾಗಿದಳು. ಕಡೆಯಲ್ಲಾಡಿದ ಮಾತು ಅವಳಿಗೆ ಸಹಿಸಲಿಲ್ಲ.

ಸೀತೆ—(ಗುಂಡನನ್ನು ಋಜುದೃಷ್ಟಿಯಿಂದಲೇ ನೋಡುತ್ತಾ) ಅಣ್ಣಾಜೀ, ನಾನೇನೂ ಮೂಢಳಲ್ಲ, ಮೂರ್ಖಳಲ್ಲ, ನೀಚಳಲ್ಲ, ಸ್ವೈರಿಣಿಯಲ್ಲ. ಸತೀ ಸದ್ಧರ್ಮವು ನನಗೂ ಗೊತ್ತು. ಸದ್ವರ್ತನವು ನನಗೂ ಇಷ್ಟವಾದುದು. ನಾನೇನು

ಬೇಕೆಂದು ಪಾಪಮಾಡಲುಳಿದವಳಲ್ಲ. ಏನೋ ಬಲವತ್ತರವಾದ ಮೋಹವು ಆವರಿಸಿ ಕೊಂಡಿತು. ಅರೆಕ್ಷಣ ಹುಚ್ಚಿಯ ಹಾಗಾಡಿಬಿಟ್ಟೆ. ಅಷ್ಟಕ್ಕೇ ನಾನು ದುಷ್ಟಳೆಂದು ತಿಳಿಯಬೇಡ. ಲಕ್ಷ್ಮಿಗೆ ಸಿಕ್ಕಿದಂಥಾ ಪತಿಯು ನನಗೂ ಸಿಕ್ಕಬೇಕಾಗಿತ್ತು! ಆಗ ಪತಿಭಕ್ತಿಯು ಹೇಗಿರಬೇಕೆಂಬುದನ್ನು ನಾನೂ ತೋರಿಸುತ್ತಿದ್ದೆ. ಅಣ್ಣಾಜೀ, ಈ ಹೃದಯವನ್ನೇ ಹಿಂಡಿ ಪ್ರೇಮರಸದಿಂದ ಪತಿಗೆ ಅಭ್ಯಂಗವನ್ನು ಮಾಡಿಸುತ್ತಿದ್ದೆ. ಈ ಕಣ್ಣುಗಳನ್ನು ಬೇಕಾದರೂ ಕಿತ್ತು ಆ ಪಾದಗಳಿಗೆ ಅರ್ಪಿಸುತ್ತಿದ್ದೆ. ಪ್ರತ್ಯಕ್ಷ ದೇವರಾದ ಪತಿಯ ಪೂಜೆಯಲ್ಲಿ ನನ್ನ ಜೀವವನ್ನೇ ತೇಯುತ್ತಿದ್ದೆ. ನನ್ನ ಆಸೆಯಲ್ಲವೂ ನಿರಾಸೆಯಾಯಿತು. ಹಾಳ ವಿಧಿಯು ನನ್ನ ಹೃದಯವನ್ನು ವಜ್ರಸಾರ ಮಾಡಿ ನನ್ನನ್ನು ಜೀವಚ್ಛವವಾಗಿ ಮಾಡಿಬಿಟ್ಟ. (ಕೈ ಕೈ ಹಿಸಿಕಿಕೊಳ್ಳುತ್ತಾ) ಅಣ್ಣಾ ಕೇಳು, ಗಿಡವನ್ನು ಪೂಜಿಸಬಹುದು, ಗುಡ್ಡೆಯನ್ನು ಪೂಜಿಸಬಹುದು, ಕಲ್ಲನ್ನು ಪೂಜಿಸಬಹುದು, ಮಣ್ಣನ್ನು ಪೂಜಿಸಬಹುದು, ವೃಕಬಕಗಳನ್ನು ಪೂಜಿಸುವುದಕ್ಕಾಗುವುದಿಲ್ಲ, ರಚ್ಚೆಕೊಚ್ಚೆಗಳನ್ನು ಸೇವಿಸುವುದಕ್ಕಾಗುವುದಿಲ್ಲ, ಉಚ್ಛಿಷ್ಟಾಮೇಧ್ಯಗಳನ್ನು ಮುಟ್ಟುವುದಕ್ಕಾಗುವುದಿಲ್ಲ. ಮೋಸಪಡಿಸಿ ನಾರಿಯನ್ನಪಹರಿಸಿದ ನರಾಧಮನನ್ನು ಪತಿಭಕ್ತಿಯಿಂದ ಪ್ರೀತಿಸುವುದಕ್ಕೆ ಸರ್ವಥಾ ಆಗುವುದಿಲ್ಲ. ಭಕ್ತಿಯೂ ಅನುರಾಗವೂ ಬಲಾತ್ಕಾರದಿಂದ ಹುಟ್ಟುವುದಿಲ್ಲ. ಆಕ್ಷೇಪ ಮಾಡಿದಳೆನ್ನಬೇಡ. ಬೇಡದ ಹೆಣ್ಣನ್ನು ನಿನಗೇ ಕಟ್ಟಿದ್ದರೆ ನೀನೇ ಅವಳನ್ನು ಪ್ರೀತಿಸುತ್ತಿರಲಿಲ್ಲ. ನಾನೇನು ಮಾಡಲಿ? ಇಲ್ಲದುದನ್ನೆಲ್ಲಿ ತರಲಿ? ಅಸಾಧ್ಯವನ್ನು ಹೇಗೆ ಸಾಧಿಸಲಿ? ಕಪಟ ನಟನೆಯನ್ನು ಮಾಡಲೇ ? ಏನು ಮಾಡಲಿ ? ನಾನು ಪಾಪಿ, ಪರದೇಶಿ, ನಾನಿನ್ನು ಬದುಕಿರಬಾರದು.

ಎಂದು ಅತ್ತುಬಿಟ್ಟಳು. ಅತ್ತು ಚಿತ್ತಕ್ಕೆ ಸ್ವಲ್ಪ ಶಾಂತಿಯಾಯಿತು. ಗುಂಡನು ಚಿಂತಾಕ್ರಾಂತನಾಗಿ ವಿಷಾದಪಡುತ್ತಾ ಕುಳಿತುಕೊಂಡನು. ಸೀತೆಗೆ ಅದೂ ದುಃಖಕ್ಕೇ ಕಾರಣವಾಯಿತು. ತನ್ನ ದುಃಖವನ್ನು ನುಂಗಿಕೊಂಡು ಗುಂಡನನ್ನು ಸಮಾಧಾನಪಡಿಸಿದಳು.

ಸೀತೆ—ಅಣ್ಣಾಜೀ, ನೀನು ಚಿಂತಿಸಬೇಡ ; ನಿನ್ನ ಅಭಿಪ್ರಾಯವು ನನಗೆ ಗೊತ್ತಾಯಿತು, ಹೌದು, ಶುದ್ಧವಾದರೂ ಲೋಕವಿರುದ್ಧವಾದ ಆಚರಣೆಯನ್ನು ಮಾಡಬಾರದು. ಅಪವಾದವು ಬರುತ್ತೆ. ಆಗಲಿ, ನಿನಗೆ ಹೇಗೆ ತೋರುತ್ತದೋ ಹಾಗೆಯೇ ಮಾಡು. ನೀನೇ ನನಗೆ ದೇವರು. ದೇವರೆಂದರೆ ನೀನು ಈಗ ಹೇಳಿದೆಯಲ್ಲ, ಅಂಥಾ ದೇವರಲ್ಲ. ಸ್ತ್ರೀಯರೂ ಪುರುಷರೂ ಎಲ್ಲರೂ ಭಕ್ತಿಯಿಂದ ಪೂಜೆ ಮಾಡುವ ದೇವರಂಥಾ ದೇವರು. ನಿನ್ನ ಮಾತಿಗೆ ನನ್ನ ಶರೀರವನ್ನೂ, ಮನಸ್ಸನ್ನೂ,ಆತ್ಮವನ್ನೂ ಬಲಿಕೊಡುತ್ತೇನೆ. ನಿನ್ನ ಮಾತನ್ನು ಮೀರುವುದಿಲ್ಲ, ಇಕೋ ಹಠವನ್ನು ಬಿಟ್ಟೆ, ನಿನ್ನ ಪ್ರಯತ್ನವನ್ನು ಮಾಡಬಹುದು.

ಇಬ್ಬರೂ ಮನೆಗೆ ಬಂದರು. ನಡೆದುದನ್ನು ಸದ್ಯಃ ಯಾರೂ ಕಾಣಲಿಲ್ಲ. ಅಕ್ಕಮ್ಮಣ್ಣಿಯ ಗೂಢಚಾರರು ಛಿದ್ರವನ್ನರಸುತ್ತಲೇ ಇದ್ದರು. ಅವರಿಗಿಲ್ಲಿ ನೋಡಬೇಕೆಂದು ತೋರಲಿಲ್ಲ. ಅವರು ನೋಡಿದ್ದರೆ ಇಷ್ಟುಹೊತ್ತಿಗೆ ಅಭೂತಾಪವಾದದ ಪ್ರತೀತಿಯು ಎಲ್ಲೆಲ್ಲಿಯೂ ಮೊಳಗಿಹೋಗುತ್ತಿತ್ತು. ದೇವರೇ ಕಾಪಾಡಿದನು. ಮನೆಗೆ ಬಂದಕೂಡಲೇ ಸೀತೆಯು ನಡೆದುದೆಲ್ಲವನ್ನೂ ನಿರ್ವ್ಯಂಚನೆಯಾಗಿ ಲಕ್ಷ್ಮಿಗೆ ಹೇಳಿದಳು. ಅಕುಟಿಲಸ್ವಭಾವಳಾದ ಆ ಲಕ್ಷ್ಮಿಯೂ ಸೀತೆಯ ನೈಜವಾದ ವ್ಯಸನಕ್ಕೆ ಮರುಗಿ "ಹಾಳು ಅಕ್ಕಮ್ಮಣ್ಣಿ ಮೋಸಮಾಡದಿದ್ದರೆ ನಾವು ಸವತಿಯರು ಹೇಗೆ ಅಕ್ಕತಂಗಿಯರಹಾಗೆ ಹೊಂದಿಕೊಂಡು ಇರಬಹುದು ಎಂಬುದನ್ನು ಸ್ತ್ರೀಸಮಾಜಕ್ಕೇ ತೋರಿಸಿಕೊಡಬಹುದಾಗಿತ್ತು," ಎಂದು ಪೇಚಾಡಿದಳು. ಗುಂಡನಮೇಲಾಗಲಿ, ಸೀತೆಯಮೇಲಾಗಲಿ, ಅವಳಿಗೆ ಲೇಶವೂ ಸಂಶಯವಾಗಲೀ ಅಸೂಯೆಯಾಗಲೀ ಆಗಲೇ ಇಲ್ಲ.

ಮಾಘಮಾಸದ ಹುಣ್ಣಿಮೆ. ಗುಂಡನು ನಂಜಪ್ಪನನ್ನು ಮನೆಗೆ ಕರೆತಂದನು. ಆದಿವಸವೂ ಲಿಂಗಪ್ಪನವರಿರಲಿಲ್ಲ. ಊಟವಾಯಿತು. ಕುಂಭಕರ್ಣನು ಹೋದಮೇಲೆ ಅವನ ಆಸ್ತಿಯಲ್ಲಿ ನಂಜಪ್ಪನಪಾಲಿಗೆ ಬಂದಿದ್ದ ಸಿದ್ಧಿಯೂ ಗೊರಿಕೆಯೂ ಆಯಿತು. ಲಕ್ಷ್ಮಿಯೂ ಗುಂಡನೂ ಸೇರಿ ಏನೇನೋ ಸಂಘಟನೆಯನ್ನು ಮಾಡಿ ದಂಪತಿಗಳಿಬ್ಬರೂ ಉದ್ಯಾನದಲ್ಲಿ ಆಕಸ್ಮಿಕವಾಗಿ ಸೇರುವಂತೆ ಮಾಡಿದರು. ಎಲ್ಲವೂ ಗುಂಡನ ತಂತ್ರವೆಂದು ಸೀತೆಗೆ ಗೊತ್ತಾಯಿತು. ಮಾತು ಕೊಟ್ಟಿದ್ದುದರಿಂದ ಸುಮ್ಮನಿದ್ದಳು. ಸೀತೆಯೂ ಮಾತನಾಡಲಿಲ್ಲ. ಗುಂಡನು ಹೇಳಿಕೊಟ್ಟುದೆಲ್ಲವೂ ಮರೆತುಹೋಗಿ ನಂಜಪ್ಪನೂ ಆಡಲಿಲ್ಲ.

ನಂಜ—(ಕಡೆಗೆ) ಎಲೇ ಮುದ್ದುಗಿಣಿ! ನಾನೇನಾಗಬೇಕಮ್ಮ ನಿನಗೆ? ಕೂ ಎಂದು ಬಾಯಿಬಿಡು ಮತ್ತೆ.

ಸಂಬೋಧನೆಯೂ, ಶೈಲಿಯೂ, ಅರ್ಥವಿನ್ಯಾಸವೂ, ಮಾತಿನ ಸ್ವಾರಸ್ಯವೂ ವಿಚಿತ್ರವಾಗಿದ್ದಿತು. ಸೀತೆಗೆ ನಗುವೇ ಬಂತು. ತಡೆಯಲಾರದೆ ನಕ್ಕುಬಿಟ್ಟಳು. ಅದನ್ನು ಕಂಡು ನಂಜಪ್ಪನು ಗೆದ್ದೆನೆಂದು ಮೆಲ್ಲಗೆ ಹತ್ತಿರಕ್ಕೆ ಬಂದನು.

ನಂಜ—ನಾನೇನಾಗಬೇಕು ಹೇಳಮ್ಮ.

ಸೀತೆ-(ನಸುನಗುತ್ತಾ) ನನಗೆ ಗೊತ್ತಿಲ್ಲ.

ನಂಜ—ಅಲ್ಲವೇ, ನಾನು ನಿನಗೆ ಗುಂಡನಲ್ಲವೇನೇ?

ಗಂಡನಲ್ಲವೇನೇ ಎನ್ನುವುದಕ್ಕೆ ಹೋದುದು. ಗುಂಡ ಗುಂಡ ಎಂಬುದು ಮನಸ್ಸಿಗೆ ನಾಟಿತ್ತಷ್ಟೆ. ಈಗ ಇವರಾಡುತ್ತಿದ್ದ ನಾಟಕಕ್ಕೆ ಗುಂಡನೇ ಸೂತ್ರಧಾರ-

ಆ ಹೆಸರೇ ನಾಲಿಗೆಯ ತುದಿಯಲ್ಲಿತ್ತು. ಬಾಯಿತಪ್ಪಿ ಗುಂಡನಲ್ಲವೇನೇ ಎಂದುದು. ಸೀತೆಗೆ ಮತ್ತೆ ನಗು ಬಂತು. ಈ ಸಲ ಕಾಣುವಹಾಗೆ ನಗಲಿಲ್ಲ.

ಸೀತೆ—ನೀವು ಗುಂಡನಲ್ಲ ; ಆ ಹೆಸರು ಹೇಳುವುದಕ್ಕೂ ನಿಮಗೆ ಯೋಗ್ಯತೆಯಿಲ್ಲ ; ಸುಮ್ಮನಿರಿ ಮತ್ತೆ.

ನಂಜಪ್ಪನಿಗೆ ಅಷ್ಟು ತಡೆಯಲಿಲ್ಲ. ಮೃದುವರ್ತನದ ಪಾಠವು ಮರೆತು ಹೋಯಿತು. ನೈಜವಾದ ವಾಕ್ಕಾಠಿಣ್ಯವು ಉಪಸ್ಥಿತವಾಯಿತು.

ನಂಜ-ಹಾಗಾದರೆ ನಿನಗೆ ಗುಂಡನೇ ಗಂಡ, ನಾನಲ್ಲ? ಹೋಗೆ ಆಚೆಗೆ ಕತ್ತೆ?

ಸೀತೆ—(ನಂಜುವನ್ನು ದುರುದುರನೆ ನೋಡುತ್ತಾ) ಈ ಕತ್ತೆಯ ಕುತ್ತಿಗೆಗೆ ಬಲಾತ್ಕಾರದಿಂದೇಕೆ ತಾಳಿಯನ್ನು ಕಟ್ಟಿದಿರಿ? ನೀವು ಕಟ್ಟದಿದ್ದರೆ ಕಾಲು ಕಟ್ಟಿಕೊಂಡು ಗುಂಡನನ್ನು ವರಿಸುತ್ತಿದ್ದೆ.

ನಂಜ-ತಿರುಗೂ ನನ್ನ ಮುಂದೆ ಆ ಕತ್ತೆಯ ಮಾತೆತ್ತಬೇಡ. ಎತ್ತಿದೆಯೋ ನೋಡಿಕೋ ಅಲ್ಲಿ.

ಸೀತೆ—ನಾನೇನು ಮಾತೆತ್ತಿದವಳಲ್ಲ. ನಿಮ್ಮನ್ನು ಬರಮಾಡಿ ಈ ಮಾತು ಎತ್ತಿಸಿದವನೇ ಗುಂಡ. ಅವನು ಕತ್ತೆಯೋ, ಕತ್ತೆಯ ಕತ್ತಿಗೆ ತಾಳಿಯನ್ನು ಕಟ್ಟಿದವರು ಕತ್ತೆಯೋ ಯಾರು ಕಂಡವರು?

ನಂಜ—ತಿರಿಗೂ ಅವನ ಹೆಸರೆತ್ತುತ್ತೀಯಾ? ಅಲ್ಲೇ ನಾಲಿಗೆ ಸೀಳಿಬಿಟ್ಟೇನು!

ಸೀತೆಗೆ ಅಸಹ್ಯವಾಗಿ ಹೊರಟುಹೋದಳು. ನಂಜಪ್ಪನು ಗುಂಡನಿಗೆ ನಾನೆಷ್ಟು ಸಮಾಧಾನವಾಗಿ ಮಾತನಾಡಿಸಿದರೂ ಅವಳು ಕೋಪಿಸಿಕೊಂಡು ಹೊರಟೇಹೋದಳು ಎಂದು ಹೇಳಿದನು. ಸೀತೆಯು ನಡೆದುದನ್ನು ಯಾರಿಗೂ ಹೇಳಲಿಲ್ಲ.

ನಂಜಪ್ಪನು ಮನೆಗೆ ಹೋಗಿ ತಾಯಿಯಕೂಡೆ ಖಂಡಗದೂರು ಹೇಳಿಕೊಂಡನು. ಆಕೆಯು ಈಚೆಗೆ ಬಹು ಪರಿಶ್ರಮದಿಂದ 'ಸ್ತ್ರೀಷಾಷುರಾಜಯ'ವೆಂಬ ನವೀನ ಗ್ರಂಥಮಾಲೆಯನ್ನು ವಿರಚಿಸುತ್ತಿದ್ದಳಷ್ಟೆ. "ಅಲ್ಲೇ ಕೆನ್ನೆಗೆರಡು ಬಲವಾಗಿ ಬಿಗಿದು ಮುಂದಲೆಯನ್ನು ಹಿಡಿದು ದರದರನೆ ಎಳೆದುಕೊಂಡು ಬರಬೇಕಾಗಿತ್ತು" ಎಂದು ತನ್ನ ಗ್ರಂಥಮಾಲೆಯಲ್ಲಿ ಒಂದಾದ 'ಪತ್ನೀವಶೀಕರಣ'ವೆಂಬ ಪ್ರಥಮ ಪಾಠವನ್ನು ಮಗನಿಗೆ ಉಪದೇಶಿಸಿದಳು. ಪಾಪ, ಈಕೆಯ ಪತಿಯು ವಿದ್ಯೆಯನ್ನು ಕಲಿಯುವಾಗ ಅವನಿಗೆ ಇಂಥಾ ಗ್ರಂಥವಾವುದೂ ದೊರೆಯಲೂಇಲ್ಲ; ಇಂಥಾ ಗುರುವೂ ಸಿಗಲಿಲ್ಲ. ಮೇಲಾಗಿ ಅಕ್ಕಮ್ಮಣ್ಣಿಯೇ "ಪತಿದಾಸ್ಯ", "ಪುರುಷ ವಶೀಕರಣ ವ್ಯವಸ್ಥಾ" ಎಂಬ ಕೆಲವು ಗ್ರಂಥಗಳನ್ನು ತಾನೇ ವಿರಚಿಸಿ ತನಗೆ ಬೇಕಾದ

ಕೆಲವರಿಗೆ ಸ್ವಾನುಷ್ಠಾನ ಪುರಸ್ಸರವಾಗಿ ಉಪದೇಶವನ್ನು ಮಾಡಿದ್ದಳು. ಸೊಸೆಯನ್ನು ಮಾಡಿಕೊಂಡಮೇಲೆ ಮಾತ್ರ ಈ ಹಳೆಯ ಸಂಪ್ರದಾಯಗಳು ಸರಿಯಲ್ಲವೆಂದು ಆ ಗ್ರಂಥಗಳನ್ನು ನಾಶಪಡಿಸಿ ಮೇಲೆ ಹೇಳಿದ ನೂತನ ಗ್ರಂಥಮಾಲೆಯ ರಚನೆಯನ್ನು ಕೈಗೊಂಡುದು. ತಾಯಿಯ ಪಾಠವೆಂದರೆ ನಂಜಪ್ಪನಿಗೆ ಅದೆಲ್ಲಿನ ಮೇಧಾಶಕ್ತಿಯೋ, ಏಕಗ್ರಾಹಿಯಾಗಿದ್ದನು.

ಕಾಮನಹಬ್ಬವು ಬಂತು. ನಾಳೆಯೆಂದು ಈ ದಿನವೇ ಗುಂಡನು ನಂಜಪ್ಪನನ್ನು ಮನೆಗೆ ಕರೆತಂದನು. ಈಸಲ ಲಿಂಗಪ್ಪನವರು ಮನೆಯಲ್ಲಿಯೇ ಇದ್ದರು. ಗುಂಡ,ಲಕ್ಷ್ಮಿ, ಈ ಯಮಳ ಕವಿಗಳು ಬೇರೆ 'ಪ್ರಿಯಪ್ರಸಾದನ' 'ದಂಪತೀಸಮ್ಮೇಳನ ತಂತ್ರ' 'ವೈರಶಮನವಿಧಾನ' ಇತ್ಯಾದಿ ಸಣ್ಣಸಣ್ಣ ಗ್ರಂಥಗಳನ್ನು ಬರೆದು ಅವನ್ನು ಗುಂಡನು ನಂಜಪ್ಪನಿಗೆ ಪಾಠಹೇಳುತ್ತಿದ್ದನು. ಒಬ್ಬ ಗುರುಸಾಲದೆಂದು ಈ ಸಲ ಲಕ್ಷ್ಮಿಯೂಕೂಡ ಆದಷ್ಟು ಉಪದೇಶವನ್ನು ಮಾಡಿದಳು. ಸೀತೆಗೆ ಅಪೇಕ್ಷೆಯಾದ ತಿಂಡಿ ಒಡವೆ ವಸ್ತು ಮುಂತಾದವುಗಳನ್ನು ಯಥೇಚ್ಛೆಯಾಗಿ ಸಂಗ್ರಹಿಸಿಟ್ಟದು ನಂಜಪ್ಪನೇ ತಂದುದೆಂದು ಸುಳ್ಳುಹೇಳಿ ಅವನ ಕಯ್ಯಿಂದಲೇ ಸೀತೆಗೆ ಕೊಡಿಸಿದರು. ಸೀತೆಯು ತೆಗೆದುಕೊಂಡು ಗುಂಡನನ್ನು "ಮಾಡಣ್ಣ, ಮಾಡು, ಕೊನೆಗೆ ನೋಡು ವಂತೆ." ಎಂದುಬಿಟ್ಟಳು. ಮೊದಲನೆಯ ದಿವಸ ನಂಜಪ್ಪನು ಓಡಾಡಿಕೊಂಡಿದ್ದನು. ಹಬ್ಬದ ದಿವಸ ಲಕ್ಷ್ಮಿಯು ಸೀತೆಗೆ ಬೇಕಾದಷ್ಟು ಅಲಂಕಾರವನ್ನು ಮಾಡಿದಳು. ತಲೆಹೊಯ್ಯಿಸಿಕೊಳ್ಳುವವರು ಹೂವು ಮುಡಿಸಿಕೊಳ್ಳುವಂತೆ ಸೀತೆಯು ನೇಪಥ್ಯವನ್ನು ಮಾಡಿಸಿಕೊಂಡಳು. ಊಟವಾದ ಮೇಲೆ ದಂಪತಿಗಳನ್ನು ಒಂದು ಕಡೆ ಸೇರಿಸಿ ವೈರಶಮನವಿಧಾನವನ್ನು ಪ್ರಯೋಗಿಸಬೇಕೆಂದು ಆಲೋಚಿಸಿದ್ದರು. ಮನೆ ಎಂದಮೇಲೆ ಎಷ್ಟೋಸಲ ಅವಕಾಶವು ದೊರೆತೇದೊರೆಯುತ್ತಷ್ಟೆ. ಊಟಕ್ಕೆ ಸಿದ್ಧಪಡಿಸುತ್ತಿದ್ದರು. ಅಳಿಯ ಮಯಾವೂ ಊಟದ ಮನೆಯ ಹತ್ತಿರವೇ ಸುಳಿದಾಡುತ್ತಿತ್ತು. ನವಯೌವನಶ್ರೀವಿರಾಜಮಾನಸೌಂದರ್ಯವಿಶಿಷ್ಟಳಾದ ಸೀತೆಯು ಸ್ವಲಂಕೃತಳಾಗಿ ಏತಕ್ಕೋ ಆಕಡೆ ಬಂದಳು. ನೋಡಿ ನಂಜಪ್ಪನ ಹೃದಯದಲ್ಲಿ ಆ ಹಬ್ಬದ ದೇವರು ಆವಿರ್ಭವಿಸಿದನು. ಕಣ್ಣುಗಳು ಕೆಂಪಗಾಗಿ ಗುಡ್ಡೆಗಳು ತಿರುಗಿದವು. ಮಾತು ಸ್ಖಲನಪ್ರಾಯವಾಯಿತು. ಯಾರೂ ಇರಲಿಲ್ಲ. ಸೀತೆಯ ಕಯ್ಯನ್ನು ಹಿಡಿದು ಬಲವಾಗಿ ಎಳೆಯುತ್ತಾ "ನಮ್ಮ ಮನೆಗೆ ಬರುತ್ತೀಯೋ ಇಲ್ಲವೇ ?" ಎಂದು ಪರುಷವಾಗಿ ಕೇಳಿದನು. ಸೀತೆಯು ನಂಜಪ್ಪನನ್ನು ದುರುದುರನೆ ನೋಡುತ್ತಾ "ಬರುವುದಿಲ್ಲ" ಎಂದು ಕೈ ಕಿತ್ತುಕೊಂಡು ಹೊರಟಳು. ಆ ಮೇಧಾವಿಗೆ ಮಾತೃಪದೇಶವು ಥಟ್ಟೆಂದು ಸ್ಮೃತಿಗೆ ಬಂತು. ಸೀತೆಯ ಸುಕುಮಾರವಾದ ಕಪೋಲಗಳೆರಡು ಬಲವಾಗಿ ಬಿಗಿದು ಅಭಿರಾಮವಾದ ಮುಂಗುರುಳನ್ನು ಹಿಡಿದು ದರದರನೆ ಎಳೆದನು. ಬೆಕ್ಕಿನ ಕೈಗೆ ಸಿಕ್ಕಿದ ಗಿಣಿಯಂತೆ ಸೀತೆಯು ಒದೆ

ದಾಡಿದಳು. ನೋವಿಗೂ ಭೀತಿಗೂ ಅಪಮಾನಕ್ಕೂ ಬಾಯಿಯಲ್ಲಿ ಧ್ವನಿಯೇ ಹೊರಡಲಿಲ್ಲ. ಏಟಿನ ಶಬ್ದವನ್ನು ಕೇಳಿ ಅವ್ವೆಯರು ಓಡಿಬಂದು ಕಿರಿಚಿಕೊಂಡರು. ಲಿಂಗಪ್ಪನವರು ಒಂದೇ ಉಸುರಿಗೆ ಓಡಿಬಂದರು. ಅವ್ವೆಯರು ಬಿಡಿಸುತ್ತಿದ್ದರೂ ಬಿಡದೆ ಕುಮಾರಕಂಠೀರವನು ತನ್ನ ರಾಕ್ಷಸವೃತ್ತಿಯಲ್ಲಿ ನಿರತನಾಗಿದ್ದನು. ಲಿಂಗಪ್ಪನವರ ಸಹನೆಯೆಲ್ಲವೂ ಪ್ರಲಯವಾಗಿಹೋಯಿತು. ನಂಜಪ್ಪನ ಕೈ ಕಿತ್ತುಹಾಕಿ ಅವನನ್ನು ದರದರನೆ ಬೀದಿಯಬಾಗಿಲಿಗೆಳೆದುಕೊಂಡುಹೋಗಿ ಹೊರಮುಖವಾಗಿ ನಿಲ್ಲಿಸಿ ನಡುವಿನಮೇಲೆ ಬಲವಾಗಿ ಝಾಡಿಸಿ ಒದೆದುಬಿಟ್ಟರು. ಬಲಿಷ್ಠರು ನಿಜವಾದ ಕೋಪದಲ್ಲಿ ಕೊಟ್ಟ ಒದೆ. ನಂಜಪ್ಪನು ನಾಲ್ಕುಮಾರುದೂರ ಹೋಗಿ ಮುಖಕಡೆಯಾಗಿ ಬಿದ್ದುಬಿಟ್ಟನು. ಸೀತೆಯ ಅರಿಶಿನ ಕುಂಕುಮದ ಆಲೋಚನೆಯಿಲ್ಲದಿದ್ದರೆ ಇನ್ನೊಂದು ಒದೆತದಲ್ಲಿ ಅವನನ್ನು ಪೂರೈಸಿಬಿಡುತ್ತಿದ್ದರು. ಅಷ್ಟುಹೊತ್ತಿಗೆ ಬಂದ ಗುಂಡನು 'ಅವನನ್ನೆತ್ತಿಕೊಂಡುಹೋಗಿ' ಎಂದು ಆಳುಗಳಿಗೆ ಸಂಜ್ಞೆಯನ್ನು ಮಾಡಿದನು. ಅವರು ಹೆದರಿಹೆದರಿಕೊಂಡು ನಂಜಪ್ಪನನ್ನು ಅನಾಮತ್ತಾಗಿ ಎತ್ತಿಕೊಂಡು ಹೋಗಿ ಅವರ ಮನೆಯ ಬಾಗಿಲಿನಲ್ಲಿ ಬಿಟ್ಟುಬಿಟ್ಟರು. ಲಿಂಗಪ್ಪನವರು ಒಳಗೆ ಬಂದು ಕುಕ್ಕರಿಸಿ ತಲೆಯಮೇಲೆರಡು ಕೈಗಳನ್ನೂ ಹೊತ್ತುಕೊಂಡು ಬಿಕ್ಕಿಬಿಕ್ಕಿ ಅತ್ತು-ಬಿಟ್ಟರು. ರಾಜಮ್ಮಣ್ಣಿಯು ಮಗಳನ್ನು ಒಳಗೆ ಕರೆದುಕೊಂಡುಹೋಗಿ ತೊಡೆಯಮೇಲೆ ಹಾಕಿಕೊಂಡು 'ಅಯ್ಯೋ ನಿನಗೆ ಸೀತೆಯೆಂದೇಕೆ ಹೆಸರಿಟ್ಟೆವಮ್ಮಾ' ಎಂದು ಗೋಳಾಡಿಬಿಟ್ಟಳು. ಕಾಮನಹಬ್ಬ, ಕಾಮದಹನವೇನೋ ಪೂರ್ತಿಯಾಯಿತು. ಗುಂಡಪ್ಪನು ತಾನು ಮಾಡಿದುದು ತಪ್ಪೆಂದು ಪಶ್ಚಾತ್ತಾಪದಿಂದ ಕಣ್ಣೀರು ಸುರಿಸಿದನು. ಆ ದಿವಸ ಒಬ್ಬರೂ ಊಟವೇ ಮಾಡಲಿಲ್ಲ.

## ೯ನೆಯ ಭಾಗ

ಹೈದರಲ್ಲಿಯ ಪ್ರಾಬಲ್ಯವನ್ನು ಮುರಿಯುವುದಕ್ಕಾಗಿಯೂ, ಮೈಸೂರು ಸಂಸ್ಥಾನದ ಹಿಂದೂರಾಜನನ್ನು ಸ್ವತಂತ್ರನಾಗಿ ಮಾಡುವುದಕ್ಕಾಗಿಯೂ, ಪ್ರಯತ್ನವಾಯಿತು. ಮೊದಲನೆಯ ಮೈಸೂರು ಯುದ್ಧವು ಆರಂಭವಾಯಿತು. ಮೊಟ್ಟಮೊದಲು ಮಾಧವರಾಯನ ಕೈಕೆಳಗೆ ಮರಾಠೆಯ ದಂಡು ಸಂಸ್ಥಾನದಮೇಲೆ ನುಗ್ಗಿ ಸೀರಾ ಪ್ರದೇಶವನ್ನೂ ಮಧುಗಿರಿಯ ದುರ್ಗಗಳನ್ನೂ ಸ್ವಾಧೀನಪಡಿಸಿಕೊಂಡಿತು. ಮರಾಠೆಯವರನ್ನು ತಡೆಯುವುದಕ್ಕೆ ಹೈದರಲ್ಲಿಯು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಯಿತು. ನಂಬಿದ ಸರದಾರರೇ ದ್ರೋಹಮಾಡಿದರು. ನೈಜಾಮನ

ದಂಡೂ ಫರಂಗಿಯವರ ದಂಡೂ ಇನ್ನೂ ಬಂದಿರಲಿಲ್ಲ. ಯುದ್ಧಮಾಡಿ ಪ್ರಯೋಜನವಿಲ್ಲವೆಂದೂ, ಇನ್ನಿಬ್ಬರು ಶತ್ರುಗಳು ಬರುವುದರೊಳಗಾಗಿ ಮರಾಠೆಯವರನ್ನು ಸಮಾಧಾನಗೊಳಿಸಿ ಕಳುಹಿಸಿಬಿಡಬೇಕೆಂದೂ, ಹೈದರಲ್ಲಿಯು ಕೌಲು ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿದನು. ಅದಕ್ಕೆ ಮಾಧವರಾಯನು "ಬರಿಯ ಮಾತಿನಿಂದ ಪ್ರಯೋಜನವಿಲ್ಲ, ಆಡಿದ ಮಾತಿನಂತೆ ಆಗಲೇ ನಡೆಯುವುದಕ್ಕೆ ಸಿದ್ಧವಾಗಿರಬೇಕು ಬರುವ ರಾಯಭಾರಿಗೆ ಸಂಪೂರ್ಣ ಅಧಿಕಾರವಿರಬೇಕು. ಗೊತ್ತಾಗುವ ಕೌಲಿನ ಷರತ್ತುಗಳು ಪೂರ್ತಿಯಾಗುವವರೆಗೂ ರಾಯಭಾರಿಯು ತನ್ನ ಶರೀರವನ್ನೇ ಒತ್ತೆ ಇಡಬೇಕು. ದೊಡ್ಡ ಆಡಂಬರದಿಂದ ಬರಕೂಡದು. ಹಣವನ್ನು ಜತೆಯಲ್ಲಿಯೇ ತರಬೇಕು." ಎಂದು ಖಂಡಿತವಾಗಿ ಹೇಳಿಕಳುಹಿಸಿದನು. ಇಂಥಾ ಕಠಿಣ ಕಾರ್ಯಕ್ಕೆ ಕೈಹಾಕುವವರು ಯಾರೂ ಸಿಗಲಿಲ್ಲ. ದೊಡ್ಡದೊಡ್ಡವರೆಲ್ಲರೂ ಹಿಂಜರಿದರು. ಮಾತಿನಲ್ಲಿಯೂ ಬುದ್ಧಿಯಲ್ಲಿಯೂ ಬೃಹಸ್ಪತಿಯೆನ್ನಿಸಿಕೊಂಡಿದ್ದ ಅಪ್ಪಾಜಿರಾಮನೆಂಬ ಬ್ರಾಹ್ಮಣನನ್ನು ರಾಯಭಾರಿಯಾಗಿ ನೇಮಿಸಿದರು. ಇವನ ಜತೆಯಲ್ಲಿ ಸ್ವಲ್ಪ ಸೈನ್ಯವನ್ನೂ ತುಂಬಾ ಹಣವನ್ನೂ ತೆಗೆದುಕೊಂಡು ಧೈರ್ಯವಾಗಿ ಹೊರಡಲು ಯಾರೂ ಮುಂದೆ ಬರಲಿಲ್ಲ. ದೊರೆಗಳ ದೃಷ್ಟಿ ಬಿದ್ದರೆ ಅಲ್ಲಿಗೆ ಆಯಿತಷ್ಟೆ. ಹೈದರಲ್ಲಿಯ ದೃಷ್ಟಿಯು ಮುದುವೆಯಲ್ಲೇ ವೀರರಾಜನಮೇಲೆ ಬಿದ್ದಿತ್ತು. ಹೈದರಲ್ಲಿಯು ಲಿಂಗಪ್ಪಾಜಿಯವರನ್ನು ಕರೆಸಿ ಅವರೊಡನೆ ಆಲೋಚಿಸಿದನು. ನಾನೇ ಹೋಗುತ್ತೇನೆಂದರು. "ತಾವು ಬೇಡ, ಯಾರಾದರೂ ಚಿಕ್ಕವರನ್ನು ನೋಡಬೇಕು" ಎಂದನು. ಲಿಂಗಪ್ಪಾಜಿಯವರು ಗುಂಡನನ್ನು ಕರೆದು "ನೀನು ಹೋಗುತ್ತೀಯಾ ?" ಎಂದು ಕೇಳಿದರು. ತರುಣವೀರನು ಧೈರ್ಯವಾಗಿ ಹೋಗುತ್ತೇನೆಂದನು. "ಮರಾಠೆಯವರು ಬಲು ತುಂಟರು, ಯುದ್ಧದುರ್ಮದರು, ಅನುಭವಶಾಲಿಗಳು, ನೋಡಪ್ಪಾ." ಎಂದರು. "ಅಷ್ಟೇತಾನೆ, ನಾನು ಹೋಗುತ್ತೇನೆ. ಶ್ರೀಮಂತರು ಸ್ವತಃ ವೀರಶಿಖಾಮಣಿಗಳು. ಭಯವಿಲ್ಲ." ಎಂದನು. ಲಿಂಗಪ್ಪಾಜಿಯವರು ವೀರರಾಜನನ್ನು ಹೈದರಲ್ಲಿಗೆ ಒಪ್ಪಿಸಿದರು. ಅವನು ತನ್ನ ಸಣ್ಣ ಸೇನೆಯೊಡನೆ ರಾಯಭಾರಿಯ ಜತೆಯಲ್ಲಿ ಹೋಗಬೇಕೆಂದು ನವಾಬರ ಆಜ್ಞೆಯಾಯಿತು.

ತಾವೆಷ್ಟು ಯುದ್ಧದುರ್ಮದರಾದರೂ ತಮ್ಮ ಚಿರಂಜೀವಿಗಳನ್ನು ಯುದ್ಧರಂಗಕ್ಕೆ ಕಳುಹಿಸಬೇಕೆಂದರೆ ಹಿರಿಯರ ಹೃದಯವು ತಲ್ಲಣಿಸುವುದು ದೇಹಧರ್ಮ. ಮನೆದೇವರಾದ ಲಕ್ಷ್ಮೀನೃಸಿಂಹದೇವರ ಆರಾಧನೆಯಾಯಿತು. ಬ್ರಾಹ್ಮಣರ ಸಂತರ್ಪಣೆಯಾಯಿತು. ಗುರುಗಳು ಲಕ್ಷ್ಮೀನೃಸಿಂಹಕವಚವನ್ನು ಪುನಶ್ಚರಣೆ ಮಾಡಿ ಕವಚಯಂತ್ರವನ್ನು ಬರೆದು ಬಲಗೈಗೆ ಕಟ್ಟಿದರು. ಗುಂಡನ ಕಯ್ಯಲ್ಲಿ ಬೇಕಾದಷ್ಟು ದಾನಧರ್ಮಗಳನ್ನು ಮಾಡಿಸಿದರು. ಲಿಂಗಪ್ಪಾಜಿಯವರು ಗುಂಡನನ್ನು ಕರೆದು ತಲೆಯನ್ನು ತಡವರಿಸಿ ಅನುಭವದ ಮಾತುಗಳನ್ನೂ, ಪ್ರವಾಸದ ಗುಟ್ಟುಗಳನ್ನೂ

ಹೇಳಿ "ಅಸತ್ಯಕ್ಕೆ ಹೋಗಬೇಡ, ಸ್ವಾಮಿದ್ರೋಹವನ್ನು ಮನಸ್ಸಿನಲ್ಲಿಯೂ ಎಣಿಸಬೇಡ, ಅಧಿಕಾರಪ್ರಮತ್ತನಾಗಬೇಡ, ಅಧೀನರನ್ನು ಮಕ್ಕಳಂತೆ ಕಾಪಾಡು, ಪ್ರಜೆಗಳಿಗೆ ಹಿಂಸೆ ಮಾಡಬೇಡ, ತಪ್ಪಿಗೆ ತಕ್ಕಷ್ಟು ಶಿಕ್ಷೆಯನ್ನು ಶಾಂತಿಯಿಂದಲೂ ಸಮಾಧಾನದಿಂದಲೂ ವಿಧಿಸು, ಯಾರನ್ನೂ ನಂಬಬೇಡ, ನಿನ್ನ ಬುದ್ಧಿ ನಿನ್ನ ಕಯ್ಯಲ್ಲಿರಲಿ" ಎಂದು ಸದುಪದೇಶವನ್ನು ಮಾಡಿ ಶಿರಸ್ಸನ್ನಾಘ್ರಾಣಿಸಿದರು. ಗುಂಡನು ಮಹಾಪ್ರಸಾದವೆಂದು ಅವರ ಅನುಶಾಸನವನ್ನು ಶಿರಸಾವಹಿಸಿ ನಮಸ್ಕರಿಸಿದನು. ವೀರನ ಕುರುಹನ್ನು ವೀರನೇ ಬಲ್ಲನಲ್ಲವೆ? ಗುಂಡನ ಧೀರಗಂಭೀರಾಕೃತಿಯನ್ನು ನೋಡಿ ಲಿಂಗಪ್ಪಾಜಿಯವರಿಗೆ ಧೈರ್ಯವಾಯಿತು. ಗುಂಡನ ಜನನೀಜನಕರೂ ಹೇಳುವುದನ್ನೆಲ್ಲಾ ಹೇಳಿದರು. ರಾಜಮ್ಮಣ್ಣಿಯಂತೂ ದಿನವೆಲ್ಲಾ ಹೇಳಿದಳು, ರಾತ್ರಿಯೂ ಬಹಳ ಹೊತ್ತು ಹೇಳಿದಳು, ಆದರೂ ಹೇಳುವುದು ಮುಗಿಯಲೇ ಇಲ್ಲ. ಪತಿಯು ಪ್ರಸ್ಥಾನಮಾಡಿದರೆ ಪತ್ನಿಯ ಮನಸ್ಸಿಗೆ ವ್ಯಥೆಯಾಗುವುದಿಲ್ಲವೆ? ಲಕ್ಷ್ಮಿಯ ಮನಸ್ಸೂ ವಿಷಾದವಿಶಿಷ್ಟವಾಯಿತು. ಪತಿಯ ಪ್ರಸ್ಥಾನದಲ್ಲಿ ಪತ್ನಿಯು ಅಳ್ತು ಮಾಡುವುದು ಅಪಶಕುನವೆಂಬುದು ಸದಾಚಾರವಷ್ಟೆ. ಲಕ್ಷ್ಮಿಯು ಪತಿಯ ಎದುರಿಗೆ ವ್ಯಸನಪಡಲಿಲ್ಲ. ತನ್ನ ದುಃಖವನ್ನು ನುಂಗಿಕೊಂಡು "ಆರ್ಯಪುತ್ರರ ಅಭ್ಯುದಯವೇ ನನ್ನ ಅಭ್ಯುದಯ. ಅವಶ್ಯವಾಗಿ ದಯಮಾಡಿಸಬಹುದು. ಆರ್ಯಪುತ್ರರಿಗೆ ವಿಜಯವಾಗಲೆಂದೂ, ಕ್ಷೇಮವಾಗಲೆಂದೂ, ಪುನರಾಗಮನವಾಗಲೆಂದೂ, ಆರಾಧ್ಯದೇವನನ್ನು ಅರ್ಚಿಸುತ್ತಾ ಏಕಭುಕ್ತವ್ರತಿ (¹) ಯಾಗಿರುತ್ತೇನೆ. ಹಿರಿಯರ ಪುಣ್ಯವು ಆರ್ಯಪುತ್ರರನ್ನು ಕಾಯಲಿ" ಎಂದು ಸಮಾಧಾನವಾಗಿ ಹೇಳಿದಳು.

ಸೀತೆಯು ಏಟುತಿಂದಾಗಿನಿಂದಲೂ ಗುಂಡನೊಡನೆ ಮಾತಾಡಿರಲಿಲ್ಲ. ಇಂದು ಗುಂಡನು ವಿಜಯಯಾತ್ರೆಗಾಗಿ ಪ್ರಸ್ಥಾನಮಾಡುವನೆಂದು ತಿಳಿದು ಸುಮ್ಮನಿರಲು ಮನಸ್ಸು ನಿಲ್ಲಲಿಲ್ಲ. ಗುಂಡನಿದ್ದಕಡೆಗೆ ತಾನೇ ಬಂದಳು. ಸುಕುಮಾರ ಕಪೋಲಗಳಮೇಲೆ ಎದ್ದಿದ್ದ ಬಾಸುಂಡೆಯ ಗುರುತು ಇನ್ನೂ ಪೂರ್ತಿಯಾಗಿ ಇಳಿದಿರಲಿಲ್ಲ. ಅವಳನ್ನು ಕಂಡಕೂಡಲೇ ಗುಂಡನು ಹಿಂದೆ ಎಷ್ಟೋ ಆವೃತ್ತಿ ಆಗಿದ್ದರೂ ಮತ್ತೊಂದಾವೃತ್ತಿ ಅಪರಾಧಕ್ಷಮೆಯನ್ನು ಬೇಡಿದನು. ಹಿಂದೆ ಯಾವಾಗಲೂ ಪ್ರತ್ಯುತ್ತರವನ್ನು ಕೊಡದಿದ್ದವಳು ಈಗ "ಅಣ್ಣಾಜಿ! ನಿನ್ನ ಅಪರಾಧವೇನೂ ಇಲ್ಲ. ನೀನು ನನಗೆ ಒಳ್ಳೆಯದನ್ನೇ ಮಾಡಿದೆ. ನನ್ನ ಕರ್ಮಕ್ಕೆ ನೀನೇನು ಮಾಡೀಯೆ? ಅದನ್ನು ನೀನು ಮರೆತುಬಿಡು" ಎಂದಳು. "ಸೀತೆ! ನೀನು ನನ್ನನ್ನು ಎಂದಿನಂತೆ ಗುಂಡ ಎಂದು ಕರಿ" ಎಂದನು ಸೀತೆಯ ಮುಖವು ಈಷದವದನವಾಯಿತು. ಕೂಡಲೇ ಕತ್ತೆತ್ತಿ "ಇಲ್ಲ, ನೀನು ನನಗೆ ಅಣ್ಣ. ನಿನ್ನನ್ನು ನಾನು ಅಣ್ಣಾಜಿಯೆಂದೇ ಕರೆಯುವುದು. ಆ ಹೆಸರು ಕೂಗುವುದನ್ನು ಬಿಟ್ಟು ಎಷ್ಟೋ ದಿವಸ

---

(¹) ಒಪ್ಪತ್ತು ಊಟಮಾಡುವ ವ್ರತವನ್ನು ಹಿಡಿದಿರುವಳು.

ವಾಯಿತು" ಎಂದಳು. ಇಬ್ಬರೂ ಎಷ್ಟೋಹೊತ್ತು ಮಾತನಾಡಿದರು. ಬೇಕಾದು ದೊಂದು ಮಾತಿಲ್ಲದೆ ಮಾತು ಮುಗಿಯಲೇ ಇಲ್ಲ.

ಪ್ರಸ್ಥಾನವೇಳೆಯು ಸಮೀಪಿಸಿತು. ದೇವರಿಗೆ ನಮಸ್ಕರಿಸಿದನು. ಗುರು ಹಿರಿಯರ ಪಾದಾಭಿವಂದನವಾಯಿತು. ವೇದಮೂರ್ತಿಗಳ ಆಶೀರ್ವಾದವು ದೊರ ಗಿತು. ರಾಜಮ್ಮಣ್ಣಿಗೆ ನಮಸ್ಕಾರವನ್ನು ಮಾಡಿದನು. ಆಕೆಯು ಬಹುಕಾಲ ದಿಂದ ಸಾಕಿ ಸಲಹಿದ ಮಮತೆಗೆ ವೀರರಾಜನನ್ನು ತಬ್ಬಿಕೊಂಡು "ಮಗು! ನಿನಗೆ ವೀರರಾಜನೆಂದು ಯಾಕೆ ಹೆಸರಿಟ್ಟರಪ್ಪಾ! ನನ್ನ ಹೊಟ್ಟೆಯಲ್ಲಿ ಗಂಡು ಹುಟ್ಟ ಲಿಲ್ಲ, ನೀನೇ ಹುಟ್ಟಿದವನೆಂದು ಸಾಕಿದರೆ ನೀನೂ ಶೂರನಾಗಬೇಕೇ? ಗುಂಡ ನೆಂದು ಕರೆಯುತ್ತಿದ್ದೆ. ಕಲ್ಲುಗುಂಡಾಗಿ ಆಯುಷ್ಮಂತನಾಗಿ ಸಾವಿರವರ್ಷ ತಣ್ಣಗೆ ಬದುಕು. ಹೋಗಿಬಾರಪ್ಪಾ, ಹೋಗಿಬಾ. ಕುಂತಿಯು ಶೂರನೂ ವಿದ್ಯಾವಂತನೂ ಆದ ಮಗನು ಆಗಬೇಡವೆಂದು ಹರಸಿದಳಂತೆ. ಆ ಮಾತು ಈಗ ಅನುಭವಕ್ಕೆ ಬಂತು. ದಿನಕ್ಕೆ ಸಾವಿರಸಲ ಗುಂಡ ಗುಂಡ ಎಂದು ಕೂಗುತ್ತಿದ್ದೆ. ಒಂದು ಗಳಿಗೆ ಕಾಣದಿದ್ದರೆ ಒದ್ದುಕೊಳ್ಳುತ್ತಿದ್ದೆ. ನಿನ್ನನ್ನು ಅಗಲಿ ನಾನೊಬ್ಬಳೇ ಹೇಗಿರಲಿ?" ಎಂದು ಒಳಗೆ ಹೋಗಿ ಬಿಕ್ಕಿಬಿಕ್ಕಿ ಅಳುತ್ತಾ ನಿಂತುಕೊಂಡಳು. ಪ್ರಸ್ಥಾನ ಮುಹೂ ರ್ತವು ಒದಗಿತೆಂದು ಅವಸರಿಸಿದರು. ಹಿಂದೆಹಿಂದೆಯೇ ತಿರುಗುತ್ತಿದ್ದ ಸೀತೆಯು ಮುಂದುವರಿದು ಅಣ್ಣನ ಕೈಹಿಡಿದುಕೊಂಡು "ಅಣ್ಣಾಜೀ! ಧೈರ್ಯವಾಗಿ ಹೋಗು. ಜಯಶೀಲನಾಗಿ ಬಾ. ವಿಜಯಲಕ್ಷ್ಮಿಯನ್ನು (........ಧ್ವನಿಯು ನಡುಗಿತು) ನನ್ನನ್ನು ಹೊಡೆದೆಳೆದಂತೆ ಎಳೆಯಬೇಡ. ನಮ್ಮ ಲಕ್ಷ್ಮಿಯು ಯಾವರೀತಿಯಲ್ಲಿ ನಿನ್ನನ್ನು ಹಿಂಬಾಲಿಸಿ ವರಿಸಿದಳೋ ಜಯಲಕ್ಷ್ಮಿಯೂ ಆ ರೀತಿಯಲ್ಲ ನಿನ್ನ ಹಿಂದೆ ಓಡಿಬರಲಿ. ಹೋಗಿಬಾ ಅಣ್ಣಾಜೀ, ಹೋಗಿ ಬೇಗಬಾ. ನಿನ್ನ ಹೆಸರನ್ನೂ ಕೀರ್ತಿ ಯನ್ನೂ ಕೇಳಿ ಆನಂದಪಡುತ್ತೇನೆ. ಹೋಗಿಬಾ. ನಿನ್ನ ಭಾಗ್ಯದ ಅಧಿದೇವಿ ಯನ್ನು ಸರ್ವದಾ ಆರಾಧಿಸುತ್ತಿರುತ್ತೇನೆ. ಧೈರ್ಯವಾಗಿ ಹೋಗಿಬಾ. ನೀನು ಬರುವವರೆಗೂ ನಿನಗೆ ಕ್ಷೇಮವೂ ವಿಜಯವೂ ಆಗಲೆಂದು ನಿತ್ಯವೂ ಸೂರ್ಯನಮ ಸ್ಕಾರವನ್ನು ಮಾಡುತ್ತಾ ಆ ಪ್ರತ್ಯಕ್ಷದೇವನ ಪ್ರಸಾದರೂಪವಾದ ಪಾಯಸವೊಂದ ಲ್ಲದೆ ಬೇರೆ ಆಹಾರವನ್ನು ಮಾಡುವುದಿಲ್ಲ. ಶುದ್ಧವ್ರತವನ್ನು ಮಾಡುತ್ತಿರುತ್ತೇನೆ, ಹೋಗಿಬಾ" ಎಂದಳು. ಗುಂಡನು ಹೇಗೆಹೇಗೋ ಬಾಯಿಯನ್ನು ಸೌರಿಸಿಕೊಂಡು "ಸೀತೇ ಸೀತೆ! ಉಪವಾಸ ಮಾಡಬೇಡ ಬೇಡ" ಎಂದನು. ಸೀತೆಯು "ಅಣ್ಣಾಜೀ! ನೀನು ಪೇಚಾಡಬೇಡ. ಸುಮ್ಮನೆ ಹೋಗು. ಈ ಹಾಳು ಶರೀರವನ್ನು ಇನ್ನು ಹೇಗೆ ಸಾರ್ಥಕಮಾಡಿಕೊಳ್ಳಲಿ? ನೀನೇ ನನಗೆ ದೇವರು. ಅಣ್ಣಾ! ನಿನ್ನ ಭಾಗ ಧೇಯವೇ ನನಗೆ ಧ್ಯೇಯ. ನಿನ್ನ ಶ್ರೇಯಸ್ಸೇ ನನ್ನ ಜೀವಿತಾವಲಂಬನೆ. ಈ ಶರೀರವನ್ನು ಬಿಟ್ಟಮೇಲೆ ನನ್ನ ಪರಮಾತ್ಮವು ನಿನ್ನಲ್ಲೇ ಐಕ್ಯವಾಗು

ವುದು. ನನಗಿನ್ನೇನಿದೆ ? ” ಎಂದಳುತ್ತಾ ಗುಂಡನ ಉಷ್ಣೀಷಕ್ಕೆ ಸೊಗಸಾದ ಮಯೂರಬರ್ಹವನ್ನು ಕಟ್ಟಿ, ಕೈಗೊಂದಂಗುಳೀಯಕವನ್ನಿಟ್ಟು, ಕತ್ತಿಯನ್ನೆತ್ತಿ ಕಯ್ಗೆ ಕೊಟ್ಟು “ ಹೋಗಿಬಾ ದೇವರೂ,ಹೋಗಿಬಾ ” ಎಂದಳುತ್ತಾ ಕಾಲುಮುಟ್ಟಿ ನಮಸ್ಕಾರವನ್ನು ಮಾಡಿದಳು. ಗುಂಡನಿಗೆ ಬಾಷ್ಪವೃತ್ತಿಯು ಕಂಠದಲ್ಲಿ ಸ್ತಂಭಿತ ವಾಗಿದ್ದುದು ಕಟ್ಟೆಯೊಡೆದ ನೀರಿನಂತೆ ಹೊರಗೆ ನುಗ್ಗಿ ಹರಿದುಹೋಯಿತು. ಮಾತು ಹೊರಡಲಿಲ್ಲ. ಹೊರಗೆ ಹೊತ್ತಾಯಿತು, ಹೊತ್ತಾಯಿತೆಂದು ಅವಸರಿಸಿದರು. ಬೇಗ ಹೊರಡಬೇಕಾಗಿ ಬಂದುದರಿಂದ ಬಲವಂತಕ್ಕೆ ಮಾತೂ ಹೊರಟಿತು. “ ಸೀತೆ! ಹೋಗಿಬರುತ್ತೇನೆ.” ಎಂದನು. “ ಹೋಗಿಬಾ ನನ್ನ ದೇವರೂ, ಹೋಗಿಬಾ. ಬರುವಾಗ ಮೊದಲೇ ಹೇಳಿಕಳುಹಿಸು. ನೀನು ಬರುವ ಉತ್ಸವವನ್ನು ದೂರದಿಂದಲೂ ನೋಡುತ್ತಿರಬೇಕು. ಹೊತ್ತಾಯಿತು ಹೋಗಿಬಾಪ್ಪಾ.” ಎಂದು ಅಣ್ಣನಿಗೆ ದಾರಿ ಯನ್ನು ಬಿಟ್ಟು ಒಂದು ಪಾರ್ಶ್ವದಲ್ಲಿ ನಿಂತುಕೊಂಡಳು.

ಗುಂಡನು ಹೊರಟು ಹೊರಗೆ ಬಂದು ಸಿದ್ಧವಾಗಿದ್ದ ಸದಶ್ವವನ್ನೇರಿದನು. ಜಯಭೇರಿಗಳೂ ಮಂಗಳವಾದ್ಯಗಳೂ ಮೊಳಗಿದವು. ಬ್ರಾಹ್ಮಣರು ವೇದಮಂತ್ರಗ ಳಿಂದ ಆಶೀರ್ವದಿಸಿದರು. ಪುರಂಧ್ರಿಯರು ಆರತಿಯನ್ನೆತ್ತಿದರು. ಭೃತ್ಯರು ಇಡಿ ಗಾಯಿಗಳನ್ನಿಡಿದರು. ಮೇಲಿನಿಂದ ರಾಜಮ್ಮಣ್ಣಿಯೂ ಸೀತೆಯೂ ಲಕ್ಷ್ಮಿಯೂ ಲಾಜಾಕ್ಷತೆಗೆ ಹೂವನ್ನೂ ಕಂಠೀರಾಯ ಹಣವನ್ನೂ ಯಥೇಚ್ಛೆಯಾಗಿ ಬೆರೆಸಿ ಎರೆಚಿದರು. ಭಟರು “ ವೀರರಾಜನಿಗೆ ಜಯವಾಗಲಿ.” ಎಂದುದ್ಘೋಷಿಸಿದರು. ಮುಂದೆ ಬಲಗಡೆ ಲಿಂಗಪ್ಪಾಜಿಯವರೂ ಎಡಗಡೆ ದೇವಪ್ಪಾಜಿಯವರೂ ಕುದುರೆ ಗಳನ್ನೇರಿ ಹೊರಟರು. ಹಿಂದೆ ವೀರರಾಜನ ಸದಶ್ವವು ಕೆನೆಯುತ್ತಾ ಕುಣಿಯುತ್ತಾ ಪ್ರಸ್ಥಾನಮಾಡಿತು. ಗುರುಗಳು,

“ ಗಮ್ಯತಾಮರ್ಥಲಾಭಾಯ ಕ್ಷೇಮಾಯ ವಿಜಯಾಯಚ |
ಶತ್ರುಪಕ್ಷಸ್ವಪಕ್ಷಾಯ ಪುನರಾಗಮನಾಯಚ || ”

ಎಂದು ಆಶೀರ್ವಾದವನ್ನು ಮಾಡಿದರು. ಹಿಂದೆ ದಂಡುದಾಳಿಯೆಲ್ಲವೂ ಹೊರಟು ಬಿಟ್ಟಿತು. ಗುಂಡನು ಮರೆಯಾಗುವವರೆಗೂ ಮೇಲೆ ಕಿಟಕಿಯಿಂದ ನೋಡುತ್ತಿದ್ದ ಮೂವರು ಹೆಂಗಸರನ್ನೂ ಹಿಂತಿರುಗಿ ಹಿಂತಿರುಗಿ ನೋಡುತ್ತಾ ಹೊರಟುಹೋದನು. ಕೊನೆಯಆವೃತ್ತಿ ಹಿಂತಿರುಗಿದಾಗ ಕಿಟಕಿಯಿಂದ ಹೊರಗೆ ಕೈನೀಡಿ ಸೀತೆಯು “ ಹೋಗಿಬಾ.” ಎಂದು ಸಂಜ್ಞೆಯನ್ನು ಮಾಡಿದಳು. ಈ ಮೆರವಣಿಗೆಯು ಅಕ್ಕ ಮ್ಮಣಿಯು ವಾಸಮಾಡುತ್ತಿದ್ದ ಮನೆಯ ಮುಂದೆಯೇ ಬಂತು. ಏನೋ ಎಂದು ನೋಡುವುದಕ್ಕೆ ಅಕ್ಕಮ್ಮಣ್ಣಿಯು ಕಿಟಿಕಿಯ ಬಳಿ ಬಂದಳು. ಲಿಂಗಪ್ಪಾಜಿಯವರ ಕುದುರೆಯೂ ದೇವಪ್ಪಾಜಿಯವರ ಕುದುರೆಯೂ ಮುಂದಕ್ಕೆ ಹೋಗಿದ್ದವು. ನೋಡು

ತ್ರಲೇ ಅವಳ ಕಣ್ಣು ಗುಂಡನಮೇಲೆ ಬಿತ್ತು. ಗುರುತೇ ಸಿಕ್ಕಲಿಲ್ಲ. ಯಾರೋ ವೀರನೆಂದು ಆನಂದದಿಂದ "ವಿಜಯಿಯಾಗಪ್ಪ" ಎಂದು ಹರಸಿದಳು. ಎಲ್ಲರೂ ಮುಂದಕ್ಕೆ ಹೋದಮೇಲೆ ನಂಜಪ್ಪನು ಬಂದು ಗುಂಡನೆಂದು ಹೇಳಿದನು. ಆಗ ಆಸೂಯೆಪಟ್ಟು ಬೈಯಲಾರದೆ ಬೈದಳು. ನಂಜಪ್ಪನು "ನಾನೂ ಗುಂಡನ ಜತೆ ಯಲ್ಲಿ ಹೋಗುತ್ತೇನೆ" ಎಂದನು. ಅದಕ್ಕೆ ಅಕ್ಕಮ್ಮಣ್ಣಿಯು "ಸುಮ್ಮನಿರೋ ಮೂದೇವಿ, ಭೂಭಾರವಾಗಿ ಹುಟ್ಟಿವೆ, ಮಡಿಯುಕ್ಕೆ ಹೋಗುತ್ತವೆ, ನಿನಗೇನೋ ಅಂಥಾದ್ದು ಬಂದಿರೋದು?" ಎಂದು ಮೂದಲಿಸಿದಳು. ಅಲ್ಲಿಗೆ ನಂಜಪ್ಪನ ಯುದ್ಧ ದೌರ್ಮದವು ಪರಿಸಮಾಪ್ತಿಯಾಗಿಹೋಯಿತು. ಸವಾಬರನ್ನು ಕಂಡು ಅವರಿಗೆ ಭೇಟಿಯನ್ನೊಪ್ಪಿಸಿ ಅವರಿಂದ ಬೆನ್ನುತಟ್ಟಿಸಿಕೊಂಡು ಗುಂಡನು ರಾಯಭಾರಿಯೊ ಡನೆ ಪ್ರಯಾಣವನ್ನು ಮಾಡಿಬಿಟ್ಟನು. ಲಿಂಗಪ್ಪಾಜಿಯವರು ಮನೆಗೆ ಬಂದು "ಗುಂಡ ವೀರ, ಧೀರ, ಕೆಚ್ಚೆದೆಯ ಕಟ್ಟಾಳು. ಧೈರ್ಯವಾಗಿ ನುಗ್ಗಿ ಹೋಗು ತ್ತಾನೆ. ಅದೃಷ್ಟವಿದ್ದರೆ ಎಂಥಾ ರಾಜ್ಯವನ್ನು ಕೊಟ್ಟರೂ ಆಳುತ್ತಾನೆ. ಸಾಕಿದ ಕ್ಕೆ ಸಾರ್ಥಕವಾಯಿತು" ಎಂದು ಹೆಂಡತಿಗೆ ಹೇಳಿ "ಒಂದು ಮಾತು ಮಾತ್ರ ನಡೆ ಯಲಿಲ್ಲ. ನಡೆದಿದ್ದರೆ?" ಎಂದರು. ರಾಜಮ್ಮಣ್ಣಿಯು "ವನಭೋಜನದ ದಿವಸ ಆಡಿದ ಮಾತು ನಡೆದಿದ್ದರೆ ನಮ್ಮ ಅದೃಷ್ಟವನ್ನು ಹಿಡಿಯುವವರೇ ಇರಲಿಲ್ಲ" ಎಂದಳು. "ಆಗ ಪಾಪ, ಲಕ್ಷ್ಮಿಗೆ ಕಷ್ಟ ಬರುತ್ತಿತ್ತು" ಎಂದರು. "ಯಾಕೋ? ಇಬ್ಬರನ್ನೂ ಒಬ್ಬನಿಗೇ ಮಾಡುತ್ತಿದ್ದೆ" ಎಂದಳು.

ಶ್ರೀಮಂತನಾದ ಮಾಧವರಾಯನು ಸ್ವಲಂಕೃತವಾದ ಪಟಾಗಾರದಲ್ಲಿ ವೀರಾ ಸನವನ್ನು ಹಾಕಿಕೊಂಡು ಠೀವಿಯಾಗಿ ಕುಳಿತಿದ್ದನು. ವೈತಾಳಿಕರೂ ವಂದಿಮಾಗಧಿ ಗಳೂ, ಶರೀರರಕ್ಷಕರೂ, ದರ್ಬಾರಿಗಳೂ ನೆರೆದಿದ್ದರು. ಮಂತ್ರಿಗಳೂ, ಸೇನಾ ನಾಯಕರೂ, ಸಾಮಂತ ನರಪತಿಗಳೂ ಯಥಾಸ್ಥಾನವಾಗಿ ಪೀಠಗಳನ್ನಲಂಕರಿಸು ತ್ತಿದ್ದರು. ಹಸ್ತ್ಯಶ್ವ ಪದಾತಿವರ್ಗದವರು 'ಹ್ಞೂ' ಎಂದರೆ ಸಂಸ್ಥಾನವನ್ನೇ ಏಕಾ ಪೋಶನವನ್ನು ಮಾಡಿಬಿಡಲು ಸಿದ್ಧರಾಗಿ ಆಜ್ಞಾಪ್ರತೀಕ್ಷಕರಾಗಿ ನಿಂತಿದ್ದರು. ಭಾರತ ಭೂಮಿಯ ಭಾಗಧೇಯವನ್ನು ಸಂರಕ್ಷಿಸುವುದಕ್ಕೆ ಸಮರ್ಥವಾದ ತೇಜಃಪ್ರತಾಪವು ಮೂರ್ತಿಮಯಿಯಾಗಿ ಅವತರಿಸಿದ್ದಂತೆ ಆ ದರ್ಬಾರು ರಂಜಿಸುತ್ತಿದ್ದಿತು. ಯಮನ ಕೋರೆದವಡೆಗಳಂತಿದ್ದ ಈ ಭಯಂಕರವಾದ ದರ್ಬಾರಿಗೆ ಅಪ್ಪಾಜೀರಾಮನೂ ವೀರ ರಾಜನೂ ನಿರ್ಭಯವಾಗಿ ನುಗ್ಗಿಬಂದರು. ಆಚಾರಸತ್ಕಾರಗಳಾದವು. ಅಪ್ಪಾಜೀ ರಾಮನ ವಾಕ್ಕಿನಿಂದಲೂ ಬುದ್ಧಿಚಮತ್ಕೃತಿಯಿಂದಲೂ ಎರಡನೆಯ ದಿವಸ ಮರಾಠೆ ಯವರು ಮೂವತ್ತೈದುಲಕ್ಷವನ್ನು ತೆಗೆದುಕೊಂಡು ಹಿಂತಿರುಗುವುದಾಗಿ ಕೌಲು ನಡೆಯಿತು. ಅರ್ಧ ಹಣವನ್ನು ಆಕ್ಷಣವೇ ಕೊಟ್ಟುದೂ ಆಯಿತು. ಇನ್ನರ್ಧಕ್ಕೆ ಏರ್ಪಾಡೂ ಆಯಿತು. ಕೌಲೇನೋ ನಡೆಯಿತು. ಮಾಧವರಾಯನಿಗೆ ಕೌಲಿಗಿಂ

ತಲೂ ಹೆಚ್ಚಾಗಿ ವೀರರಾಜನಮೇಲೆ ವಿಶ್ವಾಸವಾಯಿತು. ಅವನನ್ನು ನೋಡಿದಾಗಿ ನಿಂದ ಅವನ ಅಪೂರ್ವವಾದ ಧೀರೋದಾತ್ತ ಲಕ್ಷಣಗಳು ಶ್ರೀಮಂತನ ಮನಸ್ಸನ್ನು ಆಕರ್ಷಿಸಿದವು. ಶ್ರೀಮಂತರು ವೀರರಾಜನೊಡನೆ ಅನೇಕವಾದ ಸ್ನೇಹಸಲ್ಲಾಪ ಗಳನ್ನು ಮಾಡಿದರು. ಪ್ರದರ್ಶನಕ್ಕಾಗಿ ಅವನು ಪೂನೆಯ ಪ್ರಸಿದ್ಧರಾದ ಜಟ್ಟಿಗ ಳೊಡನೆ ಕಾದು ಗೆದ್ದನು. ಕತ್ತಿ, ಬರ್ಜಿ, ಈಟಿ, ಬಂದೂಕ ಇತ್ಯಾದ್ಯಾಯುಧ ಪ್ರಯೋಗಗಳಲ್ಲಿ ವೀರರಾಜನು ಅದ್ವಿತೀಯ ಸಾಮರ್ಥ್ಯವನ್ನೂ ಹಸ್ತಲಾಘವವನ್ನೂ ತೋರಿಸಿದನು. ಕಡೆಗೆ ಮಾಧವರಾಯನೊಡನೆಯೇ ಕುಸ್ತಿಯಾಯಿತು. ಚತುರ ನಾದ ಆಪ್ಪಾಜೀರಾಮನು ಮೊದಲೇ ಗುಟ್ಟಾಗಿ ಹೇಳಿಕೊಟ್ಟಿದ್ದುದರಿಂದ ವೀರರಾ ಜನು ಶ್ರೀಮಂತರನ್ನು 'ಚಿತ್ತು'ಮಾಡಲಿಲ್ಲ. ಪೇಷ್ವೆಗೆ ಈ ತರುಣವೀರನಮೇಲೆ ಅಸಾಧಾರಣವಾದ ಮಮತೆಯುಂಟಾಯಿತು. ಹೈದರಲ್ಲಿಯನ್ನೂ ಮೂಲೆಗೆ ಕೂರಿಸಿ ಮೈಸೂರು ಸಂಸ್ಥಾನದ ಆಧಿಪತ್ಯವನ್ನೇ ನಿನಗೆ ವಹಿಸುತ್ತೇನೆಂದು ಪೇಷ್ವೆಯು ವೀರ ರಾಜನಿಗೆ ಎಷ್ಟೋ ಬೋಧಿಸಿದನು. ವೀರರಾಜನು ಸ್ವಾಮಿದ್ರೋಹಕ್ಕೆ ಮನಗೊಡ ಲಿಲ್ಲ. ಪೇಷ್ವೆಯು ಮೆಚ್ಚಿ ವೀರರಾಜನಿಗೆ ಬೇಕಾದಷ್ಟು ಬಹುಮಾನಗಳನ್ನೂ ಖಿಲ್ಲತ್ತುಗಳನ್ನೂ ಕೊಟ್ಟು ಆಗಾಗ ಪೂನೆಗೆ ಬರುತ್ತಿರೆಂದು ಹೇಳಿ ಬೀಳ್ಕೊಟ್ಟನು. ಪೇಷ್ವೆಯೂ ಪೂನೆಗೆ ಪ್ರಯಾಣಮಾಡಿದನು. ಇಂಥಾ ದಿವಸ ಬರುತ್ತೇನೆಂದು ಹೇಳಿ ಕಳುಹಿಸಿ ವೀರರಾಜನೂ ಹಿಂತಿರುಗಿದನು.

ಗುಂಡ ಬರುವ ದಿವಸ ಬೇಗಬೇಗ ಸೂರ್ಯನಮಸ್ಕಾರವನ್ನು ಮಾಡಿಕೊಂಡು ಒಂದುಗಳಿಗೆ ಮುಂಚಿತವಾಗಿಯೇ ಸೀತೆಯು ಲಕ್ಷ್ಮಿಯನ್ನೂ ಕರೆದುಕೊಂಡು ಉಪ್ಪ ರಿಗೆಯ ಗವಾಕ್ಷವನ್ನು ಸೇರಿದಳು. ಸ್ವಲ್ಪಹೊತ್ತಿನಮೇಲೆ ರಾಜಮ್ಮಣ್ಣಿಯೂ ಬಂದರು. ಮೂವರೂ ದಾರಿಯನ್ನೇ ನೋಡುತ್ತಿದ್ದರು. ಗುಂಡನು ಪಟ್ಟಣಕ್ಕೆ ಬಂದು ಮೊದಲು ನವಾಬರನ್ನು ಕಂಡು ಅವರಿಗೆ ವರದಿಯನ್ನೊಪ್ಪಿಸಿ ಅಲ್ಲಿದ್ದ ಲಿಂಗಪ್ಪ ನವರಿಗೂ ದೇವಪ್ಪನವರಿಗೂ ನಮಸ್ಕರಿಸಿ ಕುದುರೆಯನ್ನೇರಿ ಅತಿವೇಗವಾಗಿ ಮನೆಯ ಕಡೆಗೆ ನಡೆದನು. ಗುಂಡನು ಬರುವುದನ್ನು ಲಕ್ಷ್ಮಿಯೇ ಮೊದಲು ಕಂಡವಳು. ಆದರೂ ಅವಳು ಹೇಳಲಿಲ್ಲ. ಸೀತೆಯು ಕಂಡು ಹೇಳಿದಳು. ವಿಜಯಶ್ರೀವಿರಾಜ ಮಾನನಾದ ವೀರನನ್ನು ನೋಡಿ ಮೂವರೂ ಹಿಗ್ಗಿಹೋದರು. ಅವನೂ ಆ ಕಿಟಕಿ ಯನ್ನೇ ನೋಡುತ್ತಾ ಮನೆಗೆ ಬಂದನು, ಬಾಗಿಲಿಗೆ ಬರುವಹೊತ್ತಿಗೆ ಸರಿಯಾಗಿ ಮೂವರೂ ಇಳಿದು ಬಾಗಿಲಿಗೆ ಬಂದರು. ಮಂಗಳವಾದ್ಯವಾಯಿತು, ಆರತಿಯಾ ಯಿತು, ಆಶೀರ್ವಾದವಾಯಿತು, ಇಡಿಗಾಯಾಯಿತು. ಬಾಗಿಲಿಗೆ ಬಂದಕೂಡಲೇ ಸಾಕಿದ ತಾಯಿಗೆ ಅಡ್ಡಬಿದ್ದನು, ಲಕ್ಷ್ಮಿಯ ಮುಖವನ್ನು ನೋಡಿದನು, ಸೀತೆ ಯನ್ನು ಮಾತನಾಡಿಸಿದನು. ಯಾವುದನ್ನು ಮೊದಲು ಮಾಡಿದನೋ ಎಂದು ಯಾರಿಗೂ ಗೊತ್ತಾಗಲಿಲ್ಲ. ಸೀತೆಯು ಅಂತರ್ಹಿತವಾದ ದುಃಖದಿಂದ ದೀನಳಾ

ಗಿಯೂ, ವ್ರತೋಪವಾಸದಿಂದ ಪರಿಕ್ಷೀಣಳಾಗಿಯೂ, ವೈರಾಗ್ಯದಿಂದ ಅಮುಂಡಿತ ಳಾಗಿಯೂ ಕೇವಲ ತಪಸ್ವಿನಿಯಾಗಿದ್ದಳು. ಗುಂಡನನ್ನು ಕಂಡು ಆನಂದದಿಂದ "ಬಂದೆಯಾ ದೇವರೂ" ಎಂದಳು. "ಏನಮ್ಮಾ ಹೀಗಾಗಿಹೋದೆ" ಎಂದನು. "ಏನೂ ಇಲ್ಲ, ಒಳಗೆ ಬಾ" ಎಂದಳು. ಮೂವರೂ ಒಳಗೆ ಬಂದರು. ಲಿಂಗಪ್ಪ ನವರೂ ಬಂದರು ನಡೆದುದೆಲ್ಲವನ್ನೂ ಹೇಳಿದನು. ತಂದುದೆಲ್ಲವನ್ನೂ ಸಾಕಿದ ತಾಯಿಯ ಮುಂದಿರಿಸಿದನು. ಎಲ್ಲರೂ ನೋಡಿ ಹಿಗ್ಗಿದರು. ಸೀತೆಯು ಆ ದಿವಸ ಸೂರ್ಯನಮಸ್ಕಾರವನ್ನು ಮಾಡಿ ದೇವರಿಗೆ ನೈವೇದ್ಯವನ್ನು ಮಾಡಿದ ಪಾಯಸಪ್ರಸಾದವನ್ನು ಹಾಗೆಯೇ ಇಟ್ಟಿದ್ದು ಗುಂಡನಿಗೆ ಬಡಿಸಿ ಪಾರಣೆಯನ್ನು ಮಾಡಿದಳು. ಊಟವಾದಮೇಲೂ ಮಾತು, ರಾತ್ರಿಯೂ ಮಾತು, ಮಾತೇ ಮಾತಾ ಯಿತು; ಎಷ್ಟು ಹೇಳಿದರೂ ಎಷ್ಟು ಕೇಳಿದರೂ ಮುಗಿಯಲೇ ಇಲ್ಲ.

ವೀರರಾಜನು ಸ್ವಾಮಿದ್ರೋಹ ಮಾಡುವುದಿಲ್ಲವೆಂದು ಪೇಷ್ವೆಗೆ ಹೇಳಿದ ಮಾತನ್ನೂ, ಅವನ ಸದ್ಗುಣಾತಿಶಯವನ್ನೂ, ವೀರ್ಯಪರಾಕ್ರಮಗಳನ್ನೂ ವಿಸ್ತಾರ ವಾಗಿ ಅಪ್ಪಾಜೀರಾಮನು ನವಾಬರಿಗೆ ಬರೆದುಕಳುಹಿಸಿದನು. ನವಾಬನ ಆಪ್ತ ಬಂಧುಮಿತ್ರರನೇಕರು ಪೇಷ್ವೆಯ ಭೇದಕ್ಕೊಳಗಾಗಿ ದ್ರೋಹಮಾಡಿದ್ದರು. ಹಿಂದೂ ಜಾತಿಯ ತರುಣವೀರನು ದ್ರೋಹಮಾಡುವುದಿಲ್ಲವೆಂದು ಸ್ವಕಾರ್ಯವನ್ನುಮಾಡದೆ ಸ್ವಾಮಿಕಾರ್ಯವನ್ನು ಸಾಧಿಸಿದುದಕ್ಕೆ ಸುಪ್ರೀತನಾಗಿ ನಬಾಬನು ದರ್ಬಾರಿಗೆ ಕರೆಸಿ ಕೊಂಡು ಗುಂಡನಿಗೆ ದೊಡ್ಡ ಜಹಗೀರಿಯನ್ನೂ, ಫೌಜುದಾರಿಯನ್ನೂ, ಬೇಕಾದಷ್ಟು ಖಿಲ್ಲತ್ತುಗಳನ್ನೂ, ಬಿರುದುಗಳನ್ನೂ ಕೊಟ್ಟನು. ಈ ರೀತಿಯಾಗಿ ವೃದ್ಧಿಯಮೇಲೆ ವೃದ್ಧಿ, ಭಾಗ್ಯದಮೇಲೆ ಭಾಗ್ಯೋದಯ ಆಗಿ ವೀರರಾಜನ ಯಶಸ್ಸು ಎಲ್ಲೆಲ್ಲಿಯೂ ಮೊಳಗಿಹೋಯಿತು. ಅವನ ಮನೆಯವರ ಆನಂದಕ್ಕೆ ಪಾರವೇ ಇಲ್ಲ. ಈ ಸಂತೋಷಕ್ಕೆ ಲಿಂಗರಾಜಪ್ಪನವರು ದೊಡ್ಡದಾಗಿ ಮೂರು ದಿವಸ ಸಂತರ್ಪಣೆಯನ್ನು ಮಾಡಿಸಿದರು. ಕೇಳಿ ಅಕ್ಕಮ್ಮಣ್ಣಿಯು ನಂಜುವನ್ನು ಜರಿದು "ಅದಕ್ಕೇ ಅವರು ಗುಂಡನಿಗೆ ಕೊಡಬೇಕಾಗಿತ್ತೆಂದು ಒದ್ದುಕೊಳ್ಳುತ್ತಾರೆ. ಆ ಏಳುಕಿರಿಯನನ್ನು ನೋಡಿ ನಾಚಿಕೋ. ನೀನೂ ಹುಟ್ಟಿದ್ದೀಯೆ ಭೂಭಾರವಾಗಿ ನನ್ನ ಹೊಟ್ಟೆ ಉರಿ ಸುವುದಕ್ಕೆ" ಎಂದಳು. ನಂಜಪ್ಪನು "ನಾನೂ ಹೋಗುತ್ತೇನೆಂದರೆ ಬೇಡವೆಂದೆ" ಎಂದನು. 'ಹೋಗು' ಎಂದಳು. ನಂಜಪ್ಪನು ಹೊರಗೆ ಹೋಗಿ ಇಸ್ಪೀಟಾಡಿ ಇಟ್ಟಿದ್ದ ಉಂಗುರವನ್ನು ಸೋತು ಬೆಪ್ಪಾಗಿ ಮನೆಗೆ ಬಂದು "ಉಂಗುರವನ್ನು ಲಂಚ ಕೊಟ್ಟರೂ ಯಾರೂ ಕರೆಯಲಿಲ್ಲ ಏನು ಮಾಡಲಿ" ಎಂದು ಸುಳ್ಳು ಹೇಳಿ ಹೊಟ್ಟೆಯ ತುಂಬ ತಿಂದುಬಿಟ್ಟನು.

# ೧೦ನೆಯ ಭಾಗ

---

ಸಂತರ್ಪಣೆಯ ಕೊನೆಯ ದಿವಸನೇ ನಿಜಾಮಲ್ಲಿಯೂ ಪರಂಗಿಯವರೂ ಮೈಸೂರಿನಮೇಲೆ ದಂಡೆತ್ತಿ ಬಂದು ದೇವನಹಳ್ಳಿ ಪ್ರಾಂತ್ಯವನ್ನು ಜಯಿಸಿ ಬೇಗಳೂರಿಗೆ ಬರುತ್ತಿದ್ದಾರೆಂದು ವರ್ತಮಾನವು ಬಂತು. ರಣದುಂದುಭಿಯು ಮೊಳಗಿತು. ಸೇನಾನಾಯಕರೆಲ್ಲರೂ ಸೇರಿದರು. ಯುದ್ಧ ದೌರ್ಮದವು ಸಾರ್ವಜನಿಕವಾಗಿದ್ದಿತು. ಯುದ್ಧ ಮಾಡುವುದೇ ಸರಿಯೆಂದು ನಿಶ್ಚಯವಾಯಿತು. ಮರಾಠೆಯವರಿಗೆ ಹೆದರಿದಂತೆ ಯಾರೂ ಹೆದರಲಿಲ್ಲ. ಅಲ್ಲಲ್ಲಿದ್ದ ದಂಡುಗಳು ದುರ್ಗರಕ್ಷಣೆಗಾಗಿ ಬಿಟ್ಟದು ಹೋಗುತಾ ಉಳಿವುದೆಲ್ಲವೂ ಬೆಂಗಳೂರು ಬಳಿ ಸೇರಬೇಕೆಂದು ನಿರೂಪಗಳು ಹೊರಟುಹೋದವು. ಪಟ್ಟಣದ ಸಂರಕ್ಷಣೆಗಾಗಿ ಬೇಕಾದ ದಂಡು ಮಾತ್ರ ಬಿಟ್ಟು ಮಿಕ್ಕದೆಲ್ಲವೂ ಹೊರಡುವಂತೆ ಅಪ್ಪಣೆಯಾಯಿತು. ಹೊಸ ಫೌಜುದಾರರೂ ಹಳೆಯ ಫೌಜುದಾರರೂ ಇಬ್ಬರೂ ಹೊರಡಬೇಕಾಯಿತು.

ಇಬ್ಬರೂ ಮನೆಗೆ ಬಂದರು. ಮೊದಲು ಹೆಂಗಸರನ್ನು ಮನೆಯಲ್ಲಿಯೇ ಬಿಟ್ಟುಹೋಗುವುದೆಂದು ಗೊತ್ತಾಗಿತ್ತು. "ಸೀತೆಯು ನಾವೂ ಜತೆಯಲ್ಲಿ ಬರುತ್ತೇವೆ. ಇಲ್ಲಿರಲು ಭಯವಾಗುತ್ತದೆ" ಎಂದಳು. ಗುಂಡನು "ಅಲ್ಲಿಯೂ ಭಯವಮ್ಮಾ. ನಾವು ನಮ್ಮ ಕೆಲಸದಲ್ಲಿರುತ್ತೇವೆ. ನಿಮ್ಮನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ" ಎಂದನು "ನಾನೂ ಪುರುಷವೇಷವನ್ನು ತಾಳಿ ನನ್ನ ದೇವರ ಜತೆಯಲ್ಲಿ ಕುದುರೆಯನ್ನೇರಿ ಯುದ್ಧವನ್ನು ಮಾಡುತ್ತೇನೆ" ಎಂದಳು. ಹಾಗಾಡಿ ಹೀಗಾಡಿ ಎಲ್ಲರನ್ನೂ ಕರೆದುಕೊಂಡೇಹೋಗಿ ಚನ್ನಪಟ್ಟಣದ ಪಾಳೆಯಗಾರರ ಮನೆಯಲ್ಲಿ ಬಿಟ್ಟು ಇವರ ರಕ್ಷಣೆಗಾಗಿ ಬಸವರಾಜಪ್ಪನವರನ್ನು ಇರಿಸಿ ಮುಂದಕ್ಕೆ ಹೋಗುವುದಾಗಿ ಆಲೋಚಿಸಿ ಎಲ್ಲರ ಪ್ರಯಾಣವನ್ನೂ ಗೊತ್ತುಮಾಡಿದರು.

ಮರುದಿವಸ ಉಷಃಕಾಲಕ್ಕೆ ಮೊದಲೇ ಎದ್ದು ದೇವಬ್ರಾಹ್ಮಣರ ಪೂಜೆಯನ್ನು ಪೂರೈಸಿಕೊಂಡು ಲಿಂಗಪ್ಪ ದೇವಪ್ಪ ಬಸವಪ್ಪ ಇವರುಗಳ ಮನೆಯವರೆಲ್ಲರೂ ಲಿಂಗಪ್ಪನವರ ಮನೆಯಮುಂದೆ ನೆರೆದರು. ಮುಹೂರ್ತಕ್ಕೆ ಸರಿಯಾಗಿ ಪ್ರಸ್ಥಾನವನ್ನು ಮಾಡಿದರು. ಹೊರಟಕೂಡಲೇ ಅಪಶಕುನವಾಯಿತು. ಸೀತೆಯು ಕಂಡಳು ಇನ್ನೂ ಕೆಲವರು ಕಂಡರು. ಕಂಡವರು ಹೇಳಲಿಲ್ಲ. ಕಾಣತಕ್ಕವರು ಕಾಣಲಿಲ್ಲ. ನಿಯತವಾಗಿದ್ದಂತೆ ಗುಂಡನ ಸೇನೆಯು ಮಳವಳ್ಳಿ ಕಾನಕಾನಹಳ್ಳಿ ಆ ಮಾರ್ಗವಾಗಿ ಹೊರಟು ಬೆಂಗಳೂರು ಸೇರಬೇಕಾಗಿತ್ತು. ಲಿಂಗಪ್ಪನವರು "ಆ ಕಡೆಯೇ ಭಯವು ಹೆಚ್ಚು. ಶತ್ರುಗಳು ಆಕಡೆಯೇ ಸೀಮೆಯಮೇಲೆ ನುಗ್ಗುವುದು. ನೀನೇ ಚನ್ನಪಟ್ಟಣದಮೇಲೆ ಹೋಗು, ನಾನು ಆ ಮಾರ್ಗವಾಗಿ ಬರುತ್ತೇನೆ" ಎಂದರು.

ಪ್ರತಾಪಿಯಾದ ಗುಂಡನು ಹೆದರದೆ ಶತ್ರುಗಳು ಸಿಕ್ಕುವಕಡೆಯೇ ಹೋಗಿ ಪರಾಕ್ರಮ ವನ್ನು ತೋರಿಸಬೇಕೆಂದು ಆಕಡೆಯೇ ತಾನು ಬರುತ್ತೇನೆಂದನು. ಈ ಮಾತು ಸೀತೆಯ ಕಿವಿಗೆ ಬಿದ್ದಿತ್ತು. ಅಪಶಕುನವಾಯಿತು. ಅದರ ಭಯವು ಬೇಕಾದಷ್ಟು ಹತ್ತಿತು. ಬಹು ಖಿನ್ನಳಾಗಿದ್ದಳು. ಗುಂಡನು ಎಲ್ಲರಿಗೂ ಹೇಳಿದುದಾಯಿತು. ಸೀತೆಯ ಮ್ಯಾನದ ಬಳಿಗೆ ಬಂದನು. ಸೀತೆಯು ಖಿನ್ನಳಾಗಿ ಚಿಂತಿಸುತ್ತಾ ಕುಳಿತಿದ್ದಳು. ವ್ಯಾಕುಲವಾಯಿತು.

ಗುಂಡ – ಸೀತೆ! ಇದೇಕೆ ಖಿನ್ನಳಾಗಿರುವೆ ?

ಸೀತೆ—ಏನೋ ದಿಗಿಲುದಿಗಿಲಾಗುತ್ತೆ. ಹೊಟ್ಟೆಯಲ್ಲೆಲ್ಲಾ ನಡುಗುತ್ತೆ.

ಗುಂಡ—ಸೀತೆ! ಭಯವಿಲ್ಲ, ಧೈರ್ಯವಾಗಿರು, ಶತ್ರುಗಳನ್ನು ಬಲಿ ಹುಯ್ಯುತ್ತೇವೆ.

ಸೀತೆ—ಅಣ್ಣಾಜೀ ! ನೀನು ಶತ್ರುಗಳನ್ನು ಬಲಿಹುಯ್ಯುವುದನ್ನು ನಾನು ನೋಡಬೇಕು. ಇವರೆಲ್ಲರೂ ಬೇಕಾದರೆ ಈಕಡೆ ಹೋಗಲಿ. ನಾನು ನಿನ್ನ ಜತೆ ಯಲ್ಲಿ ಬರುತ್ತೇನೆ.

ಗುಂಡ—ಸೀತೆ! ಬೇಡ, ನಾನು ಹೋಗುವ ದಾರಿ ಕಷ್ಟದ ದಾರಿ. ಶತ್ರುಗಳ ಹಾವಳಿ ಹೆಚ್ಚು. ನೀನೂ ಈಕಡೆಯೇ ಹೋಗು. ಇದಲ್ಲದೆ ನೀವು ಚನ್ನಪಟ್ಟಣ ದಲ್ಲಿಳಿಯಬೇಕು ಹೋಗಮ್ಮ.

ಸೀತೆ—ಅದಕ್ಕೇ ಅಣ್ಣಾಜೀ ನಾನೂ ನಿನ್ನ ಜತೆಯಲ್ಲಿ ಬರುತ್ತೇನೆ ಅನ್ನು ವುದು. ನಿನ್ನ ತಂಗಿಯಹಾಗೆ ಬರುತ್ತೇನೆ, ನಿನ್ನ ಶರೀರರಕ್ಷಣೆಗೆ ಬರುತ್ತೇನೆ, ಕುದುರೆಯಮೇಲೆ ಕೂತು ನಿನ್ನ ಜತೆಯಲ್ಲಿ ಯುದ್ಧಮಾಡುತ್ತೇನೆ, ನಿನ್ನ ಕಷ್ಟ ಕ್ಕಾಗುತ್ತೇನೆ, ಕರೆದುಕೊಂಡುಹೋಗು.

ಗುಂಡ - ಇದೇನು ಸೀತೆ ಹೀಗೆನ್ನುತ್ತೀಯೆ ? ಅಂಥಾ ಬಲಿಷ್ಠರಾದ ಮರಾಠೆ ಯವರಮೇಲೆ ಹೋದಾಗ ಅಷ್ಟು ಧೈರ್ಯವಾಗಿ ಕಳುಹಿಸಿದೆ. ಈಗಿಷ್ಟು ಹೆದರುವು ದೇತಕ್ಕೆ ? ಬೇಡ.

ಸೀತೆ—(ಅಪಶಕುನವನ್ನು ಹೇಳದೆ) ನನಗೇನೋ ದೊಡ್ಡ ಭಯ ಹತ್ತಿದೆ. ನಿರಾಕರಿಸಬೇಡ, ಬಿಟ್ಟುಬಿಟ್ಟುಹೋಗಬೇಡ, ಕರೆದುಕೊಂಡುಹೋಗು, ಸತ್ತರೆ ನಿನ್ನ ಹತ್ತಿರ ಸಾಯುತ್ತೇನೆ, ಕರೆದುಕೊಂಡುಹೋಗು.

ಗುಂಡ – ಇದೇನು ಸೀತೆ, ಸಾಯುವ ಮಾತೇತಕ್ಕೆ ?

ಸೀತೆ—ಸಾಯುವುದು ಈ ಶರೀರವನ್ನು ಬಿಡುವುದಕ್ಕೆ; ಇದುತಾನೆ ಅಡ್ಡಿಯಾ ಗಿರುವುದು ?

ಗುಂಡ—ಬೇಡಮ್ಮಾ ಸೀತೆ, ಇಂಥಾ ಮಾತಾಡಬೇಡ, ಹೆದರಬೇಡ, ಹೋಗು.

ಸೀತೆ—ಅಣ್ಣಾಜೀ, ನನ್ನನ್ನೊಬ್ಬಳನ್ನೇ ಜತೆಯಲ್ಲಿ ಕರೆದುಕೊಂಡುಹೋಗು ವುದಕ್ಕೆ ನಿನಗೆ ಸಂಕೋಚವೇ ? ಸಂದೇಹವೇ ? ಹಾಗೇನಾದರೂ ಇದ್ದರೆ ಹೇಳು, ಬರುವುದಿಲ್ಲ.

**ಗುಂಡ**—ಸೀತೆ, ಸೀತೆ, ಅಂಥಾದ್ದೇನೂ ಇಲ್ಲವಮ್ಮಾ, ನಿನ್ನಾಣೆ ಇಲ್ಲ. ಆದರೂ ಬೇಡ. ನಾವು ರಾಜಾಜ್ಞೆಗೆ ಒಳಪಟ್ಟವರು ಅದನ್ನು ಮೀರಿ ಹೆಂಗಸರನ್ನು ರಣರಂಗಕ್ಕೆ ಕರೆದುಕೊಂಡುಹೋದರೆ ಅವರಿಗೆ ಕೋಪ ಬರುತ್ತೆ. ಯಾರಾದರೂ ಪಿಸುಣರು ಚಾಡಿಯನ್ನು ಹೇಳುತ್ತಾರೆ. ನನ್ನ ಕೆಲಸವು ಹೊಸದು. ಮೇಲಿನವರು ನನ್ನ ನಡತೆಯನ್ನೂ ಯೋಗ್ಯತೆಯನ್ನೂ ಪರೀಕ್ಷೆ ಮಾಡುತ್ತಿರುತ್ತಾರೆ. ಆಕ್ಷೇಪಕ್ಕೆ ಸಿಕ್ಕಬಾರದು. ಅಧಿಕಾರಿಗಳಾಗಿ ನಾವೇ ರಾಜಾಜ್ಞೆಗೆ ವಿರೋಧವಾಗಿ ನಡೆದರೆ ನಮ್ಮ ಕೈಕೆಳಗಿನವರಿಗೆ ಅದೇ ಮೇಲುಪಂಕ್ತಿಯಾಗುತ್ತೆ. ಆಜ್ಞೆಗೆ ಮರ್ಯಾದೆಯಿರುವತನಕ ಅಧಿಕಾರ. ಸಾಂಗ್ರಾಮಿಕಶಿಕ್ಷೆಯಲ್ಲಿ ಆಜ್ಞಾನುವರ್ತಿತ್ವವೇ ಸುಶಿಕ್ಷೆ. ನನಗೆ ಅಪಖ್ಯಾತಿ ಬರುತ್ತೆ. ನೋಡಮ್ಮ ಇಷ್ಟರಮೇಲೂ ಬರುತ್ತೇನೆಂದರೆ ಬಾ.

ಸೀತೆ— ಅಣ್ಣಾಜೀ! ನಿನಗೆ ಅಪಖ್ಯಾತಿಬರುವ ಕೆಲಸವನ್ನು ನಾನು ಮಾಡುವುದಿಲ್ಲ. ನಾನು ಬರುವುದಿಲ್ಲ. ಹೊರಡಪ್ಪಾ ಹೊರಡು. ತಾಳು, ಒಂದು ಕೆಲಸವನ್ನು ಮಾಡುತ್ತೀಯಾ? ನಾಳೆಯೋ ನಾಡಿದ್ದೋ ಯಾವಾಗಲಾದರೂ ಒಂದು ಸಲ ಅರೆಗಳಿಗೆ ನಮ್ಮ ಪಾಳಯಕ್ಕೆ ಬಂದು ಮುಖವನ್ನು ತೋರಿಸುತ್ತೀಯಾ? ಆಮೇಲೆ ನಾನು ಎಲ್ಲಿರಿಸಿದರೆ ಅಲ್ಲಿ ಬಿದ್ದಿರುತ್ತೇನೆ.

ಗುಂಡ — ಹಾಗೆಯೇ ಆಗಲಿ. ನೀವು ಮದ್ದೂರಿಗೆ ಬರುವಹೊತ್ತಿಗೆ ನಾನೂ ಮಳವಳ್ಳಿಗೆ ಬರುತ್ತೇನೆ. ಅಲ್ಲಿಗಲ್ಲಿಗೆ ಹತ್ತಿರ. ಮದ್ದೂರಿಗೆ ಖಂಡಿತವಾಗಿ ಬರುತ್ತೇನೆ. ದೇವರ ದರ್ಶನವೂ ಆಗುತ್ತೆ, ಬರುತ್ತೇನೆ.

ಸೀತೆ—ಖಂಡಿತವೋ ?

ಗುಂಡ—ಖಂಡಿತ.

ಸೀತೆ—ನನ್ನಾಣೆ ?

ಗುಂಡ— ನಿನ್ನಾಣೆ.

ಸೀತೆ—ಹೊರಡಪ್ಪಾ, ಜಯಶೀಲನಾಗು. ಈಸಲ ದೊರೆಯಾಗಿ ಬಾ.

ಗುಂಡನು ಕುದುರೆಯನ್ನೇರಿ ದಕ್ಷಿಣದ ದಿಡ್ಡಿಯ ಬಾಗಿಲಿನಕಡೆ ವೇಗವಾಗಿ ಹೊರಟನು. ಸೀತೆಯು ಮ್ಯಾನದ ಬುರುಕಿಯನ್ನು ಓರೆಮಾಡಿ ನೋಡುತ್ತಲೇ ಇದ್ದಳು. ಗುಂಡನು ಒಂದೊಂದು ಹೆಜ್ಜೆ ಮುಂದೆ ಹೋದಹಾಗೆಲ್ಲಾ ದಿಗಿಲು ಹೆಚ್ಚಾಯಿತು. ಗುಂಡನು ಸುಮಾರು ಐವತ್ತುಗಜ ಹೋಗಿರಬಹುದು, ಬೋಯಿಯ ಕಯ್ಯಲ್ಲಿ ಮತ್ತೆ ಕೂಗಿಸಿದಳು. ಕುದುರೆಯನ್ನು ನಾಗಾಲೋಟದಲ್ಲಿ ಓಡಿಸಿಕೊಂಡು ಒಂದು ನಿಮಿಷದಲ್ಲಿ ಮ್ಯಾನದ ಹತ್ತಿರಕ್ಕೆ ಬಂದು ಕುದುರೆಯಮೇಲೆ ಕೂತಿದ್ದಹಾಗೆಯೇ ಬಗ್ಗಿ ಏನಮ್ಮಾ ಎಂದು ಕೇಳಿದನು.

ಸೀತೆ—ಏನೂ ಇಲ್ಲ. ನೀನು ಕುದುರೆಯನ್ನೋಡಿಸುವುದನ್ನು ನೋಡಬೇಕು ಅಂತ ಕರೆಸಿದೆ.

ಗುಂಡ—ಇದೇನು ಸೀತೆ, ನಾನು ಕುದುರೆಯ ಸವಾರಿ ಮಾಡಿದುದನ್ನು ನೀನು ಸಾವಿರಾರುಸಲ ನೋಡಿದ್ದೀಯೆ ? ಅದಲ್ಲ, ಏತಕ್ಕೆ ಕರೆದೆ ನಿಜ ಹೇಳು.

ಸೀತೆ—ಏನೂ ಇಲ್ಲ, ಮತ್ತೆ ನಿನ್ನ ಮುಖವನ್ನು ಇನ್ನೊಂದಾವೃತ್ತಿ ನೋಡ ಬೇಕು ಅನ್ನಿಸಿತು. ಪುನಃ ನೋಡುತ್ತೇನೋ ಇಲ್ಲವೋ ಅನ್ನಿಸಿತು. ಅದಕ್ಕೆ ಕೂಗಿಸಿದೆ (ಸೀತೆಯ ಕಣ್ಣಿನಲ್ಲಿ ನೀರು ಹರಿಯುತ್ತಿತ್ತು)

ಗುಂಡ—ಸೀತೆ, ಇದೇನು ಹೀಗಾಡುತ್ತೀಯೆ ? ಎಂದಿಗೂ ಹೀಗಾಡಿರಲಿಲ್ಲ ವಲ್ಲ. ಸುಮ್ಮನಿರು, ಧೈರ್ಯ ಮಾಡಿಕೋ.

ಸೀತೆ—ಅಣ್ಣಾಜೀ, ಎಂದೂ ಹೀಗನ್ನಿಸಲಿಲ್ಲ, ಅನ್ನಲಿಲ್ಲ. ಎಷ್ಟೋ ಧೈರ್ಯ ಮಾಡಿಕೊಳ್ಳುತ್ತೇನೆ, ಧೈರ್ಯಬರುವುದಿಲ್ಲ. ಒಳ್ಳೆಯದಾಯಿತು, ನೀನು ಹೊರಡಪ್ಪಾ, ಹೊತ್ತಾಯಿತು, ನನ್ನ ಗೋಳು ಇದ್ದೇಇದೆ, ಹೊರಡು. ಮುಖ ವನ್ನು ಮತ್ತೆ ನೋಡಿದರಂತೂ ಸರಿ, ಇಲ್ಲದಿದ್ದರೆ ... ... ಸ್ವಲ್ಪ ಹತ್ತಿರ ಬಾ.

ಗುಂಡನು ಕುದುರೆಯನ್ನಿಳಿದು ಮ್ಯಾನದ ಹತ್ತಿರ ಬಂದನು. ಬೋಯಿಗಳು ದೂರ ಹೋದರು. ಸೀತೆಯು ಗುಂಡನ ಕೈಯನ್ನು ಹಿಡಿದುಕೊಂಡಳು. ಕಣ್ಣಿನಲ್ಲಿ ನೀರು ಹರಿದುಹೋಗುತ್ತಿತ್ತು.

ಸೀತೆ—ನಾನು ಸತ್ತರೆ ನನ್ನನ್ನು ಕೆಟ್ಟರಂಡೆ ಎನ್ನಬೇಡ. ನಿಜವಾಗಿಯೂ ನಾನು ಕೆಟ್ಟವಳಲ್ಲ.

ಗುಂಡ—(ತಲೆಯಮೇಲೊಂದು ಕೈಇಟ್ಟು ಸಂಕಟದಿಂದ) ಇಲ್ಲಾ ಸೀತೂ ಇಲ್ಲ. ಪಂಚಭೂತಸಾಕ್ಷಿಯಾಗಿಯೂ ಇಲ್ಲ. ಅದೇಕೆ ಹೀಗೆನ್ನುತ್ತೀ? ಬೇಡ.

ಸೀತೆ—(ಖಿನ್ನಳಾಗಿ ಕಣ್ಣೀರು ಸುರಿಸುತ್ತಾ) ಅಣ್ಣಾಜೀ! ಆ ದಿವಸ ಆರೆಗಳಿಗೆ ಇದ್ದುದಕ್ಕಿದ್ದ ಹಾಗೆಯೇ ಹುಚ್ಚು ಹಿಡಿಯಿತು. ಹೇಗೆಹೇಗೋ ಆಡಿಬಿಟ್ಟೆ. ಅದು ನನ್ನನ್ನು ಒಳಗೇ ಕೊರೆಯುತ್ತಿದೆ. ಅದಕ್ಕಾಗಿ ಅಂದೆ. ನೀನು ದುಷ್ಟನೆಂತಲೂ ಅಲ್ಲ, ನಾನು ಪಾಪಿಯೆಂತಲೂ ಅಲ್ಲ, ಆದಕ್ಕೆ ಮೊದಲೂ ಅಷ್ಟೆ, ಆಮೇಲೂ ಅಷ್ಟೆ, ನಿನ್ನನ್ನು ದೇವರಂತೆಯೇ ಭಾವಿಸಿದ್ದೇನೆ. ದೇವರೆಂದೇ ಪೂಜೆ ಮಾಡುತ್ತಿದ್ದೇನೆ. ಸತ್ತರೆ ನಿನ್ನಲ್ಲೇ ಐಕ್ಯವಾಗಬೇಕೆಂದು ಆರಾಧಿಸುತ್ತಿದ್ದೇನೆ. ಮತ್ತೆ ನರಜನ್ಮ ಬಂದರೆ ಲಕ್ಷ್ಮಿಯಾಗಬೇಕು, ಸೀತೆಯಾಗಬಾರದು ಅಂತ ಈ ದೇವರನ್ನು ಪೂಜಿಸುವುದು. ದೇವರೆಂದರೆ ಕಾಮನಹಬ್ಬದ ದೇವರಲ್ಲ, ತಾಳಿಯನ್ನು ಕಟ್ಟಿದ ದೇವರಲ್ಲ, ನಿಜ ವಾದ ನರಸಿಂಹದೇವರಂಥಾ ದೇವರು. ಇನ್ನೇನೂ ತಿಳಿದುಕೊಳ್ಳಬೇಡ, ಹೇಳಿ ದ್ದೆಲ್ಲಾ ಆಯಿತು. ಹೊತ್ತಾಯಿತು, ಈ ಸಲ ಹೋಗಪ್ಪಾ ಹೋಗು, ದೇವರೂ! ಹೋಗು. ಜನ್ಮಾಂತರದಲ್ಲಿ ಮಾತ್ರ ಹೀಗೆ ದೂರಮಾಡಬೇಡ; ಹೋಗು.

ಬಹಳ ಹೊತ್ತಾಗಿ ಹೋಗಿತ್ತು. ಗುಂಡನು ಒಂದೆರಡು ಸಮಾಧಾನವನ್ನು ಹೇಳಿ ಕುದುರೆಯನ್ನೇರಿ ಹಿಂತಿರುಗಿ ನೋಡುತ್ತಾ ನೋಡುತ್ತಾ ಹೊರಟು ಹೋದನು. ಎರಡು ದಂಡೂ ಹೊರಟುಬಿಟ್ಟಿತು. ಹೊರಡುವುದೇ ಹೊತ್ತಾಗಿ

ಹೋಯಿತು. ಬಿಸಿಲೇರುತ್ತಾ ತಾಪ ಹೆಚ್ಚಿತು. ಮಧ್ಯಾಹ್ನಕ್ಕೆ ಮೊದಲೇ ಸಹಿಸಲಿಕ್ಕಾಗಲಿಲ್ಲ. ಲಿಂಗಪ್ಪಾಜಿಯವರು ಮಧ್ಯಾಹ್ನ ಮಂಡ್ಯದಲ್ಲಿ ಊಟಮಾಡಿ ಸುದಾರಿಸಿಕೊಂಡು ಸಾಯಂಕಾಲಕ್ಕೆ ಮದ್ದೂರಿನಲ್ಲಿದ್ದು ದೇವರ ದರ್ಶನವನ್ನು ಮಾಡಿ ವಿಶ್ರಮಿಸಿಕೊಂಡು ಬೆಳಗಿನಜಾವಕ್ಕೆ ಮೊದಲೇ ಹೊರಟು ಸೂರ್ಯೋದಯಕ್ಕೆ ಚನ್ನಪಟ್ಟಣವನ್ನು ತಲಪಬೇಕೆಂದು ಗೊತ್ತಾಗಿತ್ತು. ಮಂಡ್ಯಕ್ಕೆ ಬರುವುದೇ ತಡವಾಯಿತು. ಸ್ವಲ್ಪ ಸುದಾರಿಸಿಕೊಳ್ಳುತ್ತಿದ್ದರು. ಅಪರಾಹ್ಣದಲ್ಲಿಯೇ ನೈರುತ್ಯದಿಂದ ಬಿರುಗಾಳಿಯೂ ಮೇಘಮಾಲೆಯೂ ಬಂದು ದೊಡ್ಡ ಆಲಿಗಲ್ಲಮಳೆಯು ಇಕ್ಕಿ ಕೆಡವಿತು. ಮಿಂಚು ಗುಡುಗು ಸಿಡಿಲು ಅವಾಂತರವಾಗಿಹೋಯಿತು. ಗಾಳಿಯೂ ಮೋಡವೂ ಬಂದ ರೇವನ್ನು ನೋಡಿ ಗುಂಡನ ಸೇನೆಯು ಇನ್ನೂ ವಿಪರೀತವಾದ ಮಳೆಗಾಳಿಗೆ ಸಿಕ್ಕಿರಬೇಕೆಂದುಕೊಂಡರು. ನೋಡಿ,ಕೇಳಿ,ಸೀತೆಯ ಹೃದಯವು ಅಲ್ಲೋಕಕಲ್ಲೋಲವಾಗಿಹೋಯಿತು. ಪಕ್ಷಿಯಾಗಿದ್ದರೆ ಆಕ್ಷಣ ಹೋಗಿ ನೋಡಿಬರಬಹುದಾಗಿತ್ತು ಎಂದು ತಾನೊಬ್ಬಳೇ ಅತ್ತಳು. ಮಳೆಯಿಂದ ಸಾಯಂಕಾಲ ಹೊರಡಲಿಲ್ಲ.

ರಾತ್ರಿಯೆಲ್ಲ ಮಿಂಚುತ್ತಲೇಇತ್ತು, ತಂಗಾಳಿಯು ಹೊಡೆಯುತ್ತಲೇಇತ್ತು, ಸೀತೆಗೆ ನಿದ್ರೆಯೇ ಹತ್ತಲಿಲ್ಲ. ಗುಂಡನೇನಾದನೋ ? ಅದೇ ಜ್ಞಾನ, ಅದೇ ತೊಳಲಿಕೆಯಾಗಿತ್ತು. ಬೆಳಗಿನ ಜಾವಕ್ಕೆ ಎಲ್ಲರೂ ಹೊರಟರು, ಮ್ಯಾನವು ತೂಗಿದ ಹಾಗಾಗಿ ಸೀತೆಯು ಸ್ವಲ್ಪ ಕಣ್ಣುಮುಚ್ಚಿದಳು. ದುಸ್ಸ್ವಪ್ನವಾಯಿತು. "ಅಯ್ಯೋ ಗುಂಡಾ" ಎಂದು ಕಿರಿಚಿಕೊಂಡಳು. ನಿಲ್ಲಿಸಿದರು. ತಾಯಿಯ ಮ್ಯಾನವು ಒಂದು ಕಡೆಗೂ ಲಕ್ಷ್ಮಿಯದು ಇನ್ನೊಂದುಕಡೆಗೂ ಬಂತು. ಏನು ಏನೆಂದರು, ಬಿಕ್ಕಿಬಿಕ್ಕಿ ಅಳುತ್ತಿದ್ದಳು, ಗಾಬರಿಯಿಂದಿಳಿದು ಕೇಳಿದರು. ಸೀತೆಯು ನಾನೆಲ್ಲಿದ್ದೇನೆಂದು ಕೇಳಿದಳು. ದಾರಿಯಲ್ಲಿ ಅಂದರು. " ಗುಂಡ್ ......ಅಣ್ಣಾಜೀ ಸೌಖ್ಯವಾಗಿದ್ದಾನೆಯೇ" ಎಂದಳು. ತಾಯಿಯು " ಬೆಳಗಾಗಲೇ ಅವನು ಮಳವಳ್ಳಿಯ ದಾರಿಯಲ್ಲಿ ಹೋದನಲ್ಲಮ್ಮ" ಎಂದಳು.

ಸೀತೆ—ದುಸ್ವಪ್ನ ಹಾಗಾದರೆ (ಕಣ್ಣೊರಿಸಿಕೊಂಡಳು)

ಲಕ್ಷ್ಮಿ—ಏನೆಂತ ?

ಸೀತೆ—ಗುಂಡ್............(ಮಾತು ತಿದ್ದಿಕೊಂಡು).........ಅಣ್ಣನ ಕುದುರೆ ಮುಂದೆ. ನನ್ನ ಕುದುರೆ ಹಿಂದೆ. ಇಬ್ಬರೂ ಹೋಗುತ್ತಿದ್ದಹಾಗೆ. ಬಿರುಗಾಳಿ ದಡಿಮಳೆಗೆ ಸಿಕ್ಕಿದ ಹಾಗೆ. ಹಾಗೆಯೆ ಫಕ್ ಎಂದು ಮಿಂಚಿತು; ಜತೆಯಲ್ಲೇ ಫಟ್ ಎಂದು ಸಿಡಿ....ಲು ಬ....ಡೀ....ತೂ........ಗುಂ....ಡಾ........(ಮುಖ ಕಡೆಯಾಗಿ ಬಿದ್ದುಬಿಟ್ಟಳು)

ಇಬ್ಬರೂ ಎಬ್ಬಿಸಿದರು. ಸಮಾಧಾನ ಮಾಡಿದರು. ಎದ್ದಳು.

ರಾಜ—ಗುಂಡನಿಗೆ ಸಿಡಿಲು ಬಡಿಯಿತೇನೇ ?

ಸೀತೆ—(ಬಿಕ್ಕಿ ಬಿಕ್ಕಿ ಅಳುತ್ತಾ, ಹ್ಞ.......ಹ್ಞೂ ?

ರಾಜ—(ಕಣ್ಣೊರೆಸಿ) ಅದಕ್ಕೇತಕ್ಕೆ ಅಳುವದು ? ಕನಸಿನಲ್ಲಿ ಕಂಡದ್ದು ಕಾಲಕ್ಕೂ ಇಲ್ಲ. ಸ್ವಪ್ನದಲ್ಲಿ ಸತ್ತರೆ ಸಾವಿರ ವರ್ಷ ಆಯಸ್ಸು. ಗುಂಡನ ಪೀಡೆ ಯೆಲ್ಲವೂ ಪರಿಹಾರವಾಯಿತು. ಸುಮ್ಮನಿರು.

ಸೀತೆಗೆ ಸ್ವಲ್ಪ ಸಮಾಧಾನವಾಯಿತು. ಅಳುವು ನಿಂತಿತು. ಒಳಗೆ ಮಾತ್ರ ದಿಗಿಲು ಬಡಿದುಕೊಳ್ಳುತ್ತಲೇ ಇತ್ತು. ಯಾತಕ್ಕೋ ದಿಗಿಲಾಗುತ್ತದೆ ಎಂದಳು. ನನ್ನ ಮ್ಯಾನದಲ್ಲಿ ಕಳಿತುಕೋ ಬಾ ಎಂದು ರಾಜಮ್ಮಣ್ಣಿಯು ಕರೆದಳು. ಲಕ್ಷ್ಮಿ ಯ ಮ್ಯಾನ ದೊಡ್ಡದಾಗಿದೆ, ಇಬ್ಬರೂ ಮಲಗಿಕೊಳ್ಳುತ್ತೇವೆ ಎಂದು ಅದರಲ್ಲಿಯೇ ಇಬ್ಬರೂ ಮಲಗಿಕೊಂಡರು. ರಾಜಮ್ಮಣ್ಣಿಯು "ಅಯ್ಯೋ! ಇವಳನ್ನು ತಡೆ ಯುವುದು ಹ್ಯಾಗೆ? ಜನರ ಬಾಯಿಯಲ್ಲೆಲ್ಲ ಬೀಳುತ್ತಾಳೋ ? ನನ್ನ ಕಣ್ಣೆದು ರಿಗೇ . ...." ಎಂದುಕೊಳ್ಳುತ್ತಾ ಮ್ಯಾನವನ್ನು ಹತ್ತಿದಳು. ಮತ್ತೆ ಹೊರಟರು. ಸೀತೆಯು ಲಕ್ಷ್ಮಿಯನ್ನು ತಬ್ಬಿಕೊಂಡು ತನ್ನ ಅಪರಾಧಗಳನ್ನೆಲ್ಲಾ ಜ್ಞಾಪಿಸಿ ಕೊಂಡು ಅತ್ತು ಕ್ಷಮೆಯನ್ನು ಬೇಡಿ ದಾರಿಯುದ್ದಕ್ಕೂ ಹುಚ್ಚಿಯಂತೆ ಸಿಕ್ಕಿಸಿಕ್ಕಿದ ಮಾತುಗಳನ್ನಾಡುತ್ತಿದ್ದಳು. ಲಕ್ಷ್ಮಿಯು ಎಷ್ಟು ಸಮಾಧಾನಮಾಡಿದರೂ ಸಮಾ ಧಾನವಾಗಲಿಲ್ಲ. ಎಲ್ಲರೂ ಬೇಗಂದಮೇಲೆ ಮದ್ದೂರಿಗೆ ತಲಪಿದರು.

ಗುಂಡನ ಸೇನೆಯು ಬಿಸಿಲಿಗೆ ಹೆದರದೆ ಬಹು ವೇಗವಾಗಿ ನಡೆಯಿತು. ಎಷ್ಟೋ ಹೊತ್ತಿನಮೇಲೆ ಒಂದೇ ಸಲ ಮಳವಳ್ಳಿಗೆ ಸೇರಿ ಪಾಳಯುವನ್ನು ಮಾಡಿದನು. ಮಳೆಗೆ ಸಿಗಲಿಲ್ಲ. ರಾತ್ರಿಯ ಊಟವನ್ನು ಮಾಡಿಕೊಂಡು ಸರಿಹೊತ್ತಿಗೆ ಹೊರಟು ಮುಂದಕ್ಕೆ ಹೋಗಬೇಕೆಂದು ಗೊತ್ತುಮಾಡಿ ಇಬ್ಬರು ಶರೀರ ರಕ್ಷಕರನ್ನು ಕರೆದು ಕೊಂಡು ಕುದುರೆಯನ್ನೇರಿ ಮದ್ದೂರಿಗೆ ಬಂದನು. ಲಿಂಗಪ್ಪನವರ ದಂಡು ಬಂದಿರ ಲಿಲ್ಲ. ಮುತ್ತುಸಂಜೆ, ನೃಸಿಂಹದೇವನ ಅವತಾರದ ಸಮಯ, ದೇವಸ್ಥಾನಕ್ಕೆ ಹೋಗಿ ಮಂಗಳಾರತಿಯನ್ನು ಮಾಡಿಸಿದನು. ಮರ್ಯಾದೆಯನ್ನು ಮಾಡುವುದಕ್ಕೆ ಅರ್ಚಕರು ಯಾರೆಂದು ವಿಚಾರಿಸಿದರು. ಹತ್ತಿರ ಇದ್ದವನು ಹೇಳುವುದಕ್ಕೆ ಹೋದನು. ಬೇಡವೆಂದು ಸನ್ನೆಮಾಡಿ ನಾನೊಬ್ಬ ಸಿಪಾಯಿ ಎಂದು ಬಿಟ್ಟನು. ತಾನು ಬಂದುದು ಗೊತ್ತಾಗಬಾರದು, ದೇವರ ಸಾನ್ನಿಧ್ಯದಲ್ಲಿ ಪ್ರತಿಷ್ಠೆಬಾರದು, ಎಂದು ಹಾಗೆಂದುದು. ಲಿಂಗಪ್ಪಾಜಿಯವರು ಮಳೆಗೆ ಸಿಕ್ಕಿಕೊಂಡರು, ಬೆಳಗಾಗ ಬರುತ್ತಾರೆಂದು ಕಿಂವದಂತಿಯೆದ್ದಿತು. ಬೆಳಗಾಗ ಮತ್ತೆ ಬರೋಣವೆಂದು ಹಿಂತಿರುಗಿ ಅರ್ಧ ದಾರಿ ಹೋದನು. ಶತ್ರುಗಳು ಕಾನಕಾನಹಳ್ಳಿಯ ಕೋಟೆಯನ್ನು ಮುತ್ತು ವವರಾಗಿದ್ದಾರೆಂದು ಅಲ್ಲಿನ ಖಾನರು ಹೇಳಿಕಳುಹಿಸಿದ ವರ್ತಮಾನವು ಬಂತು. ಸಂಗ್ರಾಮಕಾಲದಲ್ಲಿ ನಿಮಿಷ ಹೋದರೆ ಆಯುಷ್ಯವೇ ಹೋದಂತೆ, ಅಲ್ಲಿಂದ ಓಡಿ ದುದೇ. ಆ ಕ್ಷಣವೇ ಪಾಳಯವನ್ನೆತ್ತಿ ಕಾನಕಾನಹಳ್ಳಿಗೆ ಪ್ರಯಾಣಮಾಡಿದನು. ಶತ್ರುಗಳ ಸೇನೆಯು ಬರುವ ಹೊತ್ತಿಗೆ ವೀರರಾಜನ ಸೇನೆಯೂ ತಲಪಿತು. ಒಳಗಿನ ವರೂ ಹೊರಗಿನವರೂ ಸೇರಿ ಬಲಿಹಾಕಿದರು ವಿಜಯಲಕ್ಷ್ಮಿಯೂ ಬೇಕಾದಷ್ಟು

ಯುದ್ಧ ಸಾಮಗ್ರಿಗಳೂ ಕೈವಶವಾದವು. ಶತ್ರುಗಳನ್ನು ಘಾಟಿನ ಕೆಳಗಿನವರೆಗೂ ಬೆನ್ನಟ್ಟಿ ಓಡಿಸಿ ಮತ್ತೆ ಕಾನಕಾನಹಳ್ಳಿಗೆ ಬಂದು ನವಾಬರಿಗೆ ಕೂಡಲೇ ವರದಿಯನ್ನು ಕಳುಹಿಸಿ ಬಳಲಿದ್ದ ಸೈನ್ಯಕ್ಕೆ ಒಂದು ದಿವಸದ ವಿರಾಮವನ್ನೂ ಒಂದು ತಿಂಗಳ ಸಂಬಳ ಇನಾಮನ್ನೂ ಕೊಟ್ಟನು. ತಾನು ಕೂಡಲೇ ಹೊರಟು ಸೀತೆಯನ್ನು ನೋಡಲು ಚನ್ನಪಟ್ಟಣಕ್ಕೆ ಬಂದನು

ಸೀತೆಗೆ ಗುಂಡನು ಯಾಕೋ ಬರಲಿಲ್ಲವೆಂದು ದಿಗಿಲು ಹೊಡೆದುಕೊಳ್ಳುತ್ತಲೇ ಇತ್ತು. ಅವನು ಬರುತ್ತಾನೆಂದು ಲಕ್ಷ್ಮಿಯೊಬ್ಬಳಿಗೆ ಮಾತ್ರ ಹೇಳಿದ್ದಳು. ಎಲ್ಲರೂ ನದಿಯ ಸ್ನಾನಕ್ಕೆ ಹೋದರು. ಮೇಲೆ ಮಳೆಯಾಗಿದ್ದುದರಿಂದ ಷಿಂಷಾ ನದಿಯಲ್ಲಿ ಹೊಸ ನೀರು ಬರುತ್ತಿತ್ತು. ಹೆಂಗಸರು ಸ್ನಾನಕ್ಕಿಳಿದರು, ಗಂಡಸರು ದೂರ ನಿಂತು ಕೊಂಡರು. ದೊಡ್ಡವರು ಎರಡು ಮುಳುಗು ಹಾಕಿ ಎದ್ದುಬಿಟ್ಟರು. ಅವರೆದ್ದ ರೆಂದು ಲಕ್ಷ್ಮಿಯೂ ಎದ್ದುಬಿಟ್ಟಳು. ಎಲ್ಲರೂ ದಡದಮೇಲೆ ಒದ್ದೆಯನ್ನು ಬಿಚ್ಚಿ ಮಡಿಯನ್ನುಟ್ಟುಕೊಳ್ಳುತ್ತಾ ಇದ್ದರು. ಸೀತೆಯು ಒಟ್ಟಿಗೆ ಬಹಳ ದಿವಸ ಉಪವಾಸ ಮಾಡಿ ಕೃಶವಾಗಿದ್ದಳು; ಅಪಾರವಾದ ದುಃಖದಿಂದ ದೀನಳಾಗಿದ್ದಳು; ನಂಜಪ್ಪನು ಹೊಡೆದೆಳೆದಾಗಿನಿಂದಲಂತೂ ಭೂಮಿಗೆ ಇಳಿದು ಹೋಗಿದ್ದಳು. ಹಿಂದಿನ ದಿವಸ ವೆಲ್ಲಾ ದಿಗಿಲು, ದುಃಖ, ರಾತ್ರಿಯೆಲ್ಲಾ ನಿದ್ರೆಯಿಲ್ಲ. ತಣ್ಣೀರಿನ ಅವಗಾಹನ ಸ್ನಾನವು ಆಪ್ಯಾಯಮಾನವಾಗಿತ್ತು, ಬೇಗ ಏಳಲಿಲ್ಲ. ಮೇಲಿನಿಂದ ಒಂದು ಸೊಗ ಸಾದ ಗುಲಾಬಿ ಹೂವು ತೇಲಿಕೊಂಡು ಅವಳ ಕಡೆಗೇ ಬರುತ್ತಿತ್ತು. ಹುಡುಗಿಯಾಗಿ ದ್ದಾಗ ತೋಟದಲ್ಲಿ ಗುಂಡನು ಕಿತ್ತುತಂದು ಕೊಟ್ಟ ಗುಲಾಬಿ ಹೂವಿನ ತದ್ರೂಪ ವಾಗಿತ್ತು. ನಿಷ್ಫಲವಾದ ಪುಷ್ಪವೆಂದುಕೊಂಡಳು. ಅದು ಹತ್ತಿರಕ್ಕೇ ಬರುತ್ತಿತ್ತು. "ನನಗಿನ್ನೇನು ಫಲಬಿಡುವ ಹೂವು ಸಿಕ್ಕುವುದೇ, ನನ್ನ ಭಾಗ್ಯಕ್ಕೆ ಈ ಹೂವೇ ಸರಿ. ಇದರಹಾಗೆ ನಾನೂ ಬೇಗ ಹೋಗಿಬಿಡಬೇಕು" ಎಂದು ಅದರಮೇಲೆ ಆಸೆಪಟ್ಟಳು. ಹುಚ್ಚಿಗೆ ಧೂಪವನ್ನು ಹಾಕಿದಹಾಗಾಯಿತು. ಅದನ್ನು ಹಿಡಿದುಕೊಳ್ಳಲು ಅದರ ಕಡೆಗೇ ಹೊರಟಳು. ತನ್ನ ಸ್ಥಿತಿಯೆಲ್ಲವೂ ಮರೆತುಹೋಯಿತು. ಗುಂಡನು ಗುಲಾಬಿಯ ಹೂವನ್ನು ಕೈನೀಡಿ ಕೊಟ್ಟುದು ಕಣ್ಣಿಗೆ ಕಟ್ಟಿದಹಾಗಾಯಿತು. ಆ ದಿವಸದ ಮುಗ್ಧತೆಯೂ ಇರಲಿಲ್ಲ, ಮಧ್ಯೆ ಬಂದಿದ್ದ ಮಾಧುರ್ಯವೂ ಇರಲಿಲ್ಲ, ಗುಂಡನಮೇಲೆ ದೇವರೆಂದು ಕೊನೆಕೊನೆಗೆ ಬಂದ ಶುದ್ಧವಾದ ಅನುರಾಗದಿಂದ ಹೃದ ಯವು ಪರಿಪೂರ್ಣವಾಗಿದ್ದಿತು. ಗುಂಡನು ದಿವ್ಯರೂಪವನ್ನು ತಾಳಿ, ತಲೆಯಮೇಲೆ ದಿವ್ಯಕಿರೀಟವನ್ನಿಟ್ಟು, ಹಣೆಯಲ್ಲಿ ಕಸ್ತೂರಿಯ ತಿಲಕವನ್ನೂ ವಕ್ಷಸ್ಥಳದಲ್ಲಿ ಕೌಸ್ತುಭವನ್ನೂ ಧರಿಸಿ, ದಿವ್ಯ ಪೀತಾಂಬರವನ್ನುಟ್ಟು, ಕೊರಳಿಗೆ ವನಮಾಲೆಯನ್ನು ಹಾಕಿಕೊಂಡು, ಚತುರ್ಭುಜನಾಗಿ, ಮೂರುಕೈಗಳಲ್ಲಿ ಶಂಖವನ್ನೂ ಚಕ್ರವನ್ನೂ ಗದೆಯನ್ನೂ ಹಿಡಿದುಕೊಂಡು ನಾಲ್ಕನೆಯದಾದ ಬಲಗಯ್ಯಲ್ಲಿ ಆ ಗುಲಾಬಿಯ ಹೂವನ್ನು ಹಿಡಿದುಕೊಂಡು ಪರಮ ತೇಜಸ್ಸಿನಿಂದ ದೇದೀಪ್ಯಮಾನನಾಗಿ ಮಂದಹಾಸ

ವನ್ನು ಮಾಡುತ್ತಾ "ಸೀತೂ ಸೀತೂ ಬಾ, ಹತ್ತಿರಕ್ಕೆ ಬಾ, ಹೂವು ಕೋ, ಬಾ" ಎಂದು ಕರೆಯುತ್ತಾ ಮೆಲ್ಲಮೆಲ್ಲಗೆ ಅವಳಕಡೆಯೇ ಬರುತ್ತಿದ್ದಂತೆ ಭ್ರಮೆಯಾಯಿತು. ನೋಡಿದಳು, ಅದ್ಭುತವಾಗಿ ಕಂಡಿತು, ಹಾಗೆಯೇ ದುಸ್ವಪ್ನವು ಸ್ಮೃತಿಗೆ ಬಂತು. "ಓಹೋ! ನನ್ನ ಗುಂಡನು ನಿಜವಾಗಿಯೂ ಸಿಡಿಲು ಬಡಿದು ಮೃತನಾಗಿ ದೇವರಾಗಿದ್ದಾನೆ. ಮದ್ದೂರಿಗೆ ಬಂದು ಕಾಣುತ್ತೇನೆಂದು ಆಣೆಯಿಟ್ಟುಕೊಂಡಿದ್ದ. ಮಾತಿಗೆ ತಪ್ಪಬಾರದೆಂದು ದಿವ್ಯರೂಪದಲ್ಲಿ ಬಂದಿದ್ದಾನೆ." ಎಂದು ಮನಸ್ಸಿಗೆ ತೋರಿತು. ಬಹು ದುಃಖವಾಯಿತು, ಕಣ್ಣುಗಳು ಅರ್ಧ ಮುಚ್ಚಿದವು. ರೂಪವು ಬಾ ಬಾ ಎಂದು ಕರೆಯುತ್ತಲೇ ಇತ್ತು. "ಗುಂಡಾ........ನನ್ನ ಗುಂಡಾ" ಎಂದು ಗಟ್ಟಿಯಾಗಿ ಕೂಗಿದಳು. ಎಲ್ಲರೂ ಕೇಳಿ ಆ ಕಡೆಯೇ ನೋಡಿದರು. ಸೀತೆಯು ಅತಿವೇಗವಾಗಿ ಮೂರುನಾಲ್ಕುಹೆಜ್ಜೆ ಮುಂದಿಟ್ಟಳು. ಗುಲಾಬಿಯ ಹೂವು ಕೈಗೆ ತಗುಲಿತು. ಷಿಂಷಾನದಿಯು ಸೀತೆಯನ್ನು ತನ್ನ ಗರ್ಭವಾಸಕ್ಕೆಳೆದುಕೊಂಡುಬಿಟ್ಟಿತು. ಹಿಂದೆ ದೊಡ್ಡ ಸೀತೆಯು ಭೂಮಿಯನ್ನು ಹೊಕ್ಕಿಕೊಂಡಳು; ಈಗ ಚಿಕ್ಕ ಸೀತೆಯು ನೀರಿನಲ್ಲಡಗಿದಳು. ಅವಳಡಗಿದಕಡೆ ನೀರು ಸುಳಿಯಾಗಿ ಸುತ್ತಿತು. ಗುಲಾಬಿಯಹೂವು ಸುಳಿಯ ಮಧ್ಯದಲ್ಲಿ ಬಂಗರದಂತೆ ಗಿರ್‍ರೆಂದು ತಿರುಗಿತು. ಹೂವೂ ಮುಳುಗಿತು; ಸುಳಿಯೂ ನಿಂತು ನೀರೂ ಹರಿದುಹೋಯಿತು. ಮದ್ದೂರು ಹೊಳೆಗೆ ಹುಚ್ಚು ಹೊಳೆಯೆಂದೇ ಹೆಸರು. ಎಷ್ಟೋ ಆಹುತಿಯನ್ನು ತೆಗೆದುಕೊಂಡಿದೆ. ಆದರೆ ಇಂಥಾ ಆಹುತಿ ಅಲ್ಲಿಯವರೆಗೂ ಸಿಕ್ಕಿರಲಿಲ್ಲ, ಈಚೆಗೂ ಇಲ್ಲ, ಮುಂದೆಯೂ ಬೇಡ. ಒಂದು ಗುಲಾಬಿಯ ಹೂವಿಗೆ ಸೀತೆಯು ಸ್ವಾಮಿಪಾದವನ್ನು ಸೇರಿದಳು. ಅವಳ ತಾಯಿ ತಂದೆಗಳು ಅಪೂರ್ವವಾದೊಂದು ದೊಡ್ಡ ಗುಲಾಬಿಹೂವನ್ನೇ ತಮ್ಮ ಮನೆದೇವರಿಗೆ ಸಮರ್ಪಿಸಿದರು.

ದಡದಲ್ಲಿ ಕೋಲಾಹಲವಾಯಿತು. ಎಷ್ಟೋಹೊತ್ತು ಹುಡುಕಿದರೂ ಶವವು ಸಿಗಲಿಲ್ಲ. ಕಡೆಗೆ ನೀರು ತೆಗೆದಮೇಲೆ ಸಾಯಂಕಾಲಕ್ಕೆ ಮರಳಿನಲ್ಲಿ ಹೂತುಕೊಂಡಿದ್ದ ಶವವನ್ನು ಹುಡುಕಿ ತೆಗೆದರು. ಅಕಾಲಮೃತ್ಯುವಿನ ಕ್ರೂರಚಿಹ್ನೆಗಳು ಏನೂ ಇರಲಿಲ್ಲ. ದೇಹೇಂದ್ರಿಯಗಳನ್ನು ದಮನಮಾಡಿ, ಪ್ರಾಣವಾಯುವಿನ ಸಂಚಾರವನ್ನು ನಿರೋಧಿಸಿ, ಚಿತ್ತವೃತ್ತಿಯನ್ನು ಏಕಾಗ್ರಮಾಡಿ, ಅರ್ಧೋನ್ಮೀಲಿತ ನಯನನಾಗಿ ಸಂಯಮಿಯು ತನ್ನ ಆತ್ಮನಲ್ಲಿಯೇ ಪರಮಾತ್ಮನನ್ನು ನೋಡುತ್ತಾ ಹೇಗೆ ನಿಶ್ಚಲನಾಗಿರುತ್ತಾನೆಯೋ ಹಾಗೆ ಕಾಣುತ್ತಿದ್ದಳು; ಜೀವವೊಂದಿರಲಿಲ್ಲ.

ವಕ್ತವ್ಯವು ಅಲ್ಪಶೇಷವಾಗಿದೆ. ಹೂವಿನ ಕೆಲಸವಾಯಿತು. ಹೂವಿಗೆ ಆಸೆಪಟ್ಟವಳ ಕೆಲಸವಾಯಿತು. ಉಳಿದವರು ಅತ್ತರು, ಕರೆದರು, ಗೋಳಾಡಿದರು. ಗುಂಡನನ್ನು ಕರೆತರಲು ಒಬ್ಬರಮೇಲೊಬ್ಬರು ಓಡಿದರು. ಗುಂಡನ ದಾರಿ ಗುಂಡನದಾಯಿತು, ಇವರ ದಾರಿ ಇವರದಾಯಿತು. ಚನ್ನಪಟ್ಟಣದಲ್ಲಿ ವರ್ತಮಾನವು ತಿಳಿದು ಒಂದೇಉಸಿರಿಗೆ ಗುಂಡನು ಓಡಿಬಂದನು. ಅಷ್ಟುಹೊತ್ತಿಗೆ ಶವಸಂಸ್ಕಾರವೂ ಮುಗಿ

ದಿತ್ತು. ಮುಖವು ಸಿಗಲಿಲ್ಲ. ಸೀತೆಯ ಪಾರ್ಥಿವ ಶರೀರವು ಉರಿಯುವ ದೊಡ್ಡ ಚಿತಿಯಲ್ಲಿ ಐಕ್ಯವಾಗಿತ್ತು. ಅತ್ತು ಕರೆದು ಗೋಳಾಡಿದನು. ಉರಿಗೆ ತಾನೂ ನುಗ್ಗಲು ಓಡಿದನು. ಯಾರು ತಡೆದರೂ ತಡೆಯುವುದಕ್ಕಾಗಲಿಲ್ಲ. ಕಡೆಗೆ ಲಿಂಗಪ್ಪಾಜಿಯವರೇ ಹಿಡಿದೆಳೆದು ಹಿಂದಕ್ಕೆ ಕರೆತಂದರು. ಅತ್ತವರಿಗೆ ಈ ಗೋಳು ಗೊತ್ತು. ಅಳದವರಿಗೆ ಈ ಅಳುವೂ ಬೇಡ, ಇದರ ಸುದ್ಧಿಯೂ ಬೇಡ, ಇಷ್ಟೇ ಸಾಕು.

ಉಭಯ ಸೇನೆಯ ಸೇನಾಧಿಪತಿಗಳಿಗೂ ಆಕಸ್ಮಿಕವಾಗಿ ಪ್ರಾಪ್ತವಾದ ಘೋರವಾದ ಸಂಕಟದ ವರ್ತಮಾನವು ಹೈದರಲ್ಲಿಗೆ ಮುಟ್ಟಿತು. ಆತನೂ ಮರುಗಿ ಸೇನೆಗಳಿಗೆ ಬೇರೆ ನಾಯಕರನ್ನು ಏರ್ಪಡಿಸಿ ಈ ದುಃಖೋಪಹತರಾದ ಅಭಾಗಿಗಳನ್ನು ಹಿಂದಕ್ಕೆ ಹೋಗುವಂತೆ ಹೇಳಿಕಳುಹಿಸಿದನು. ಬ್ರಹ್ಮಸೃಷ್ಟಿಯಲ್ಲಿ ಕೆಲವು ಭಾಗ್ಯವಂತರು ಮೊದಲು ಕುಂಬಳದ ಹೂವಿನಂತೆ ಅರಳಿ ಕಡೆಗೆ ದೊಡ್ಡ ದೊಡ್ಡ ಫಲದಂತೆ ಬೆಳೆಯುತ್ತಾರೆ. ಕೆಲವು ಹತಭಾಗ್ಯರಾದ ಪ್ರತಾಪಿಗಳು ಗುಲಾಬಿಯ ಹೂವು ಅರಳಿ ಜನರನ್ನು ಮೋಹಿಸುವಂತೆ ಸ್ವಲ್ಪಕಾಲ ಎಲ್ಲರಿಂದಲೂ ಜಯ ಜಯ ಎನ್ನಿಸಿಕೊಂಡು ಫಲವಿಲ್ಲದೆ ಅಲ್ಪ ಕಾಲದಲ್ಲಿಯೇ ಆ ಹೂವು ಒಣಗಿ ಹೋಗುವಂತೆ ಅಲ್ಪಾಯಸ್ಸಿನಲ್ಲಿಯೇ ಕೀರ್ತಿಶೇಷರಾಗುವರು.

ಲಿಂಗಪ್ಪನವರ ವ್ಯಾವಹಾರಿಕ ವರ್ತನವು ಪರಿಸಮಾಪ್ತಿಯಾಗಿ ಹೋಯಿತು. ರಾಜಮ್ಮಣ್ಣಿಯ ಸ್ವಾಭಾವಿಕವಾದ ಸಂತೋಷಪ್ರಕೃತಿಯು ನೀರಸವಾಗಿ ಹೋಯಿತು. ಅದತ್ತನಾದ ಗುಂಡನಂಥಾ ಸತ್ಪುತ್ರನಿಗಾಗಿಯೂ, ಸ್ವಯಂದತ್ತಳಾದ ಲಕ್ಷ್ಮಿಯಂಥಾ ಸದ್ವಧುವಿಗಾಗಿಯೂ, ಈ ದಗ್ಧೋದರರಿಬ್ಬರೂ ಅವಶಿಷ್ಟವಾದ ಆಯುಷ್ಯವನ್ನು ಹತ್ತಿಸಿಕೊಂಡಿದ್ದರು. ಕೆಲವು ಕಾಲ ಕಳೆದ ಮೇಲೆ ಲಿಂಗಪ್ಪನವರೇ ಬಲವಂತಮಾಡಿ ಗುಂಡನನ್ನು ಮತ್ತೆ ಅವನ ಅಧಿಕಾರಕ್ಕೆ ಕಳುಹಿಸಿದರು. ವೀರನಾದ ಗುಂಡನೂ ಬಹು ಪರಾಕ್ರಮವನ್ನು ತೋರಿಸಿ ಹೆಸರುಪಡೆದನು. ಏನಾದರೇನು? ಆ ಸಂತೋಷವೂ ಇಲ್ಲ. ಆ ಉತ್ಸಾಹವೂ ಇಲ್ಲ. ತಿಥಿಯ ಕೆಲಸ, ತಿಥಿಯ ಊಟ, ಮಾಡಬೇಕೆಂದು ಮಾಡಿದ ಹಾಗಾಯಿತು. ಏನಾದರೂ ಆಗಲಿ, ಆ ವಾದವು ಪ್ರಕೃತವಿಲ್ಲ. ಒಂದು ಕೆಲಸವಾಯಿತು. ಸೀತೆಯು ಸತ್ತು ಗೆದ್ದಳು. ಅವಳ ಜನ್ಮವು ಸಾರ್ಥಕವೂ ಆಯಿತು.

"ಯಂಯಂವಾಪಿಸ್ಮರರ್ಭಾವಂ ತ್ಯಜತ್ಯಂತೇ ಕಳೇಬರಂ |
ತಂತಮೇವೇತಿ ಕೌಂತೇಯ ಸದಾ ತಧ್ಭಾವಭಾವಿತಃ ||

ಎಂಬ ಭಗವದ್ವಾಕ್ಯವು ಸತ್ಯವಾದರೆ ಸೀತೆಯ ಅಂತಿಮ ಭಾವ ಫಲವೂ ಒಳಿಯದೇ ಆಗಬೇಕು.

**ಶುಭಂ ಭೂಯಾತ್. ಲಕ್ಷ್ಮೀನೃಸಿಂಹಾರ್ಪಣಮಸ್ತು.**